ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages : 44 /12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 18
Issue - 12
December - 2021

## ವಿಶ್ವ ಮಣ್ಣಿನ ದಿನ
## ಡಿಸೆಂಬರ್ 5, 2021

ವಿಷಯ: ಮಣ್ಣಿನ ಕ್ಷಾರತೆಯನ್ನು ತಗ್ಗಿಸಿ,
ಫಲವತ್ತತೆಯನ್ನು ಹೆಚ್ಚಿಸೋಣ



ಮಣ್ಣು ನಿಸರ್ಗದ ಕೊಡುಗೆಯಾಗಿದೆ.
ಮಣ್ಣು ಒಮ್ಮೆ ನಾಶವಾದರೆ, ಪುನಃ
ಪಡೆಯಲಾಗದ ಅಮೂಲ್ಯ
ಸಂಪತ್ತು. ಸಸ್ಯ ಸೇರಿದಂತೆ ಸಕಲ
ಜೀವಿಗಳಿಗೆ ಜೀವ ಚೇತನವಾಗಿದೆ.
ಮಣ್ಣಿನ ಫಲವತ್ತತೆಯಿಂದ
ಪೋಷಕಾಂಶಗಳು ದೊರೆಯುತ್ತವೆ.

ಮಣ್ಣು ನೀರು ಹಾಗೂ ಗಾಳಿ
ಪರಸ್ಪರ ಸಂಬಂದಗಳನ್ನು
ಹೊಂದಿವೆ.

ಇದರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ






ಡಿಸೆಂಬರ್ 25,
ಕ್ರಿಸ್‌ಮಸ್ ಆಚರಣೆ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5418

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1442

# ಸಹಕಾರಿಯ ಆರೋಗ್ಯ ವರ್ಧನೆಗೆ ಗುಣಮಟ್ಟದ ಹೂಡಿಕೆ ತಳಪಾಯ.



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

> ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಗೆ 20 ವಸಂತಗಳು ಕಳೆದಿವೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ವೇಗವಾಗಿ ಬೆಳೆಯುತ್ತಿದೆ. ಯುವಕರು ಹಾಗೂ ಮಹಿಳೆಯರು ಹೆಚ್ಚಾಗಿ ಈ ಕ್ಷೇತ್ರದ ಬೆಳವಣಿಗೆಯಲ್ಲಿ ಪಾಲ್ಗೊಳ್ಳುತ್ತಿರುವುದು ಈ ಕ್ಷೇತ್ರದತ್ತ ಆಕರ್ಷಿತರಾಗುತ್ತಿರುವುದು ಸಂತೋಷದ ವಿಷಯ.

**ರಾಜ್ಯದ ಎಲ್ಲ ಸಹಕಾರಿಗಳಿಗೆ ಕ್ರಿಸ್‌ಮಸ್ ಹಬ್ಬದ ಶುಭಾಶಯಗಳು.**

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಗೆ 20 ವಸಂತಗಳು ಕಳೆದಿವೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ವೇಗವಾಗಿ ಬೆಳೆಯುತ್ತಿದೆ. ಯುವಕರು ಹಾಗೂ ಮಹಿಳೆಯರು ಹೆಚ್ಚಾಗಿ ಈ ಕ್ಷೇತ್ರದ ಬೆಳವಣಿಗೆಯಲ್ಲಿ ಪಾಲ್ಗೊಳ್ಳುತ್ತಿರುವುದು ಈ ಕ್ಷೇತ್ರದತ್ತ ಆಕರ್ಷಿತರಾಗುತ್ತಿರುವುದು ಸಂತೋಷದ ವಿಷಯ.

ರಾಜ್ಯದಲ್ಲಿ ಇದುವರೆಗೆ 5418ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು, 62 ಲಕ್ಷ ಸದಸ್ಯರು 989 ಕೋಟಿ ಪಾಲು ಬಂಡವಾಳ, 27,663 ಕೋಟಿ ದುಡಿಯುವ ಬಂಡವಾಳ, 24,172 ಕೋಟಿ ಠೇವಣಿಗಳು, 18,939 ಸಾಲಗಳು, ಲಾಭಾಂಶ, 321 ಕೋಟಿ, 55,000 ಜನರಿಗೆ ಉದ್ಯೋಗ ಒದಗಿಸಿರುವುದು ಹೆಮ್ಮೆ ಪಡುವ ವಿಷಯ. ಇದು ಕಡಿಮೆ ಸಾಧನೆಯೇನಲ್ಲ. ಈ ಕ್ಷೇತ್ರದ ಬೆಳವಣಿಗೆಗೆ ಸಹಕಾರಿಸುವವರೆಲ್ಲರೂ ಅಭಿನಂದನಾರ್ಹರು. ಈ ಕ್ಷೇತ್ರದ ಬೆಳವಣಿಗೆಯಲ್ಲಿ ಹಲವಾರು ವಿಷಯಗಳು ಒಳಗೊಂಡಿರುತ್ತವೆ. ಕ್ರಿಯಾಶೀಲ ಸದಸ್ಯ, ಉತ್ತಮ ಆಡಳಿತ ಮಂಡಳಿ, ಉತ್ತಮ ನಾಯಕತ್ವ, ದಕ್ಷ ಹಾಗೂ ಪ್ರಾಮಾಣಿಕ ಸಿಬ್ಬಂದಿ ಇವರುಗಳೆಲ್ಲ ಸೇರಿ ಹಲವಾರು ವಿಷಯಗಳನ್ನು ದಕ್ಷ ಹಾಗೂ ಪ್ರಾಮಾಣಿಕತೆಯಿಂದ ಸಹಕಾರಿಗಳ ಸದಸ್ಯತ್ವ ಹೆಚ್ಚಿಸುವುದು, ಕ್ರಿಯಾಯೋಜನೆ ಸಿದ್ಧಪಡಿಸುವುದು, ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು, ವಿಶೇಷವಾಗಿ ಠೇವಣಿ ಸಂಗ್ರಹಣೆ, ಸದಸ್ಯರಿಗೆ ವಿವಿಧ ಯೋಜನೆಗಳ ಅಡಿಯಲ್ಲಿ ಸೌಲಭ್ಯಗಳನ್ನು ಒದಗಿಸುವುದು, ಶೇಖರಣೆ ಮಾಡಿರುವ ಹಣವನ್ನು ಭದ್ರತೆಯನ್ನು ಗಮನಿಸಿ ಲಾಭದಾಯಕ ಹೂಡಿಕೆಗಳಲ್ಲಿ ತೊಡಗಿಸುವುದು, ಯಾವುದೇ ಕಾರಣಕ್ಕೂ ಸಹಕಾರಿಯ ಹೂಡಿಕೆಗಳು ತೊಂದರೆಗಳಲ್ಲಿ ಸಿಕ್ಕಿ ಹಾಕಿಕೊಳ್ಳದ ಹಾಗೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವುದು ಅತ್ಯಂತ ಮಹತ್ವದ ಜವಾಬ್ದಾರಿ ಹಾಗೂ ಸಹಕಾರಿಯ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ಕೆಲವು ಸೌಹಾರ್ದ ಸಹಕಾರಿಗಳು ತಮ್ಮ ಠೇವಣಿಗಳನ್ನು ಸಂಯುಕ್ತ ಸಹಕಾರಿಯ ಹೂಡಿಕೆಗಳ ಬಗ್ಗೆ ನೀಡಿರುವ ಸುತ್ತೋಲೆಗಳನ್ನು ಗಮನಿಸದೆ ತಮಗೆ ಸರಿಯೆನಿಸಿದ ಹಾಗೆ ಹೂಡಿಕೆ ಮಾಡಿ ಸದಸ್ಯರು ಠೇವಣಿಗಳನ್ನು ವಾಪಸ್ ಕೇಳಲು ಬಂದಾಗ ಅವರುಗಳಿಗೆ ಠೇವಣಿಗಳನ್ನು ಹಿಂದಿರುಗಿಸಲು ಹಣವಿಲ್ಲದೆ ಸಹಕಾರಿಗೂ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ವಿಶ್ವಾಸಾರ್ಹತೆಗೆ ಧಕ್ಕೆ ಬಂದಿರುವುದನ್ನು ಸಂಯುಕ್ತ ಸಹಕಾರಿಯು ಗಮನಿಸಿದೆ ಮತ್ತು ಅಂತಹ ಸಹಕಾರಿಗಳ ಆಡಳಿತ ಮಂಡಳಿಯವರ ಜೊತೆಗೆ ವ್ಯವಹರಿಸಿ ಸೂಕ್ತ ಹಾಗೂ ತ್ವರಿತ ಕ್ರಮವಿಡುವಂತೆ ಸೂಚನೆಗಳನ್ನು ನೀಡುತ್ತ ಬಂದಿದೆ. ಸಹಕಾರಿಯಲ್ಲಿ ಸದಸ್ಯರು ತಮ್ಮ ಹಣವನ್ನು ಭದ್ರತೆ ದೃಷ್ಟಿಯಿಂದ ಹಾಗೂ ಸ್ವಲ್ಪ ಮಟ್ಟಿಗೆ ಬಡ್ಡಿಗಳಿಸುವ ದೃಷ್ಟಿಯನ್ನು ಹೊಂದುವುದರಿಂದ ಅವರಿಗೆ ಮೋಸವಾಗದಂತೆ ಎಚ್ಚರಿಕೆ ವಹಿಸುವುದು ಮತ್ತು ಸಹಕಾರಿ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಗೆ ಭದ್ರ ಅಡಿಪಾಯವಾಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ ಮತ್ತು ಈ ವಿಷಯದಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಪೂರ್ಣ ಜಾಗೃತರಾಗಿ ಕಾರ್ಯನಿರ್ವಹಿಸುವಿರೆಂದು ಆಶಿಸುತ್ತೇನೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜಿ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408,23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05-17
ಆರ್.ಬಿ.ಐ ಸುತ್ತೋಲೆ ........................ 18
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 26-36
**ಲೇಖನಗಳು :**
ಮಹಿಳಾ ಸಬಲೀಕರಣದಲ್ಲಿ ಸಹಕಾರಿಗಳ ಪಾತ್ರ ........................................ 38, 40
ಸ್ವಯಂ ದಕ್ಷತೆ ................................ 39-40
ಕೇಂದ್ರ ಸರ್ಕಾರದಲ್ಲಿ ಸಹಕಾರ ಸಚಿವಾಲಯ ಒಂದು ಅವಲೋಕನ ..................... 41-44

# ಸಂಪಾದಕೀಯ

## ವಾರ್ಷಿಕ ಸಾಮಾನ್ಯ ಸಭೆಗಳ ಗುಣಮಟ್ಟ ಉತ್ತಮವಾಗಿರಬೇಕು

ರಾಜ್ಯದ ಸಹಕಾರಿ ಸಂಸ್ಥೆಗಳ ವಾರ್ಷಿಕ ಸಾಮಾನ್ಯ ಸಭೆಗಳು ಡಿಸೆಂಬರ ಮಾಹೆಯ 25ರ ಒಳಗಾಗಿ ಮುಕ್ತಾಯವಾಗಿ ನಡುವಳಿಕೆಗಳನ್ನು ಒಂದು ತಿಂಗಳ ಒಳಗಾಗಿ ಸಹಕಾರಿ ಸಂಘಗಳ ನಿಬಂಧಕರಿಗೆ ಹಾಗೂ ಸಂಬಂಧಿಸಿದ ಮಹಾಮಂಡಳಗಳಿಗೆ ಕಳುಹಿಸಬೇಕು. ವಾರ್ಷಿಕ ಸಾಮಾನ್ಯ ಸಭೆಗಳನ್ನು ಪ್ರತಿಯೊಂದು ಸಹಕಾರಿ ಸಂಘವು ನಡೆಸಲೇಬೇಕು. ಸಾಮಾನ್ಯ ಸಭೆಯಲ್ಲಿ ಪ್ರಮುಖವಾಗಿ ಸಾಲಾಖೈರಿನಲ್ಲಿ ಸಹಕಾರಿಯ ವಾರ್ಷಿಕ ಲೆಕ್ಕಪತ್ರಗಳನ್ನು, ಆಡಳಿತ ವರದಿಯನ್ನು, ಮುಂಬರುವ ಸಾಲಿನ ಕ್ರಿಯಾಯೋಜನೆಗಳನ್ನು, ಮುಂಬರುವ ಸಾಲಿನ ಆಯವ್ಯಯಗಳನ್ನು ಉಪವಿಧಿಗಳ ತಿದ್ದುಪಡಿಗಳನ್ನು ಮಂಡಿಸುವುದು ಸಹಕಾರಿ ಕಾನೂನುಗಳಲ್ಲಿ ಸೂಚಿಸಿದಂತೆ ಕ್ರಮವಾಗಿ ವಿಷಯಗಳನ್ನು ಮಂಡಿಸಿ ಅನುಮೋದನೆ ಪಡೆಯುವ ಪ್ರಕ್ರೀಯೆಯಾಗಿದೆ.

ಸಾಮಾನ್ಯ ಸಭೆಯ ದಿನ ಎಂದರೆ ಸಹಕಾರಿಗಳಿಗೆ ಸಹಕಾರಿಯ ವಾರ್ಷಿಕ ಹಬ್ಬವಿದ್ದಂತೆ ಆಚರಿಸುತ್ತಾರೆ. ಅನೇಕ ಸಹಕಾರಿ ಸಂಸ್ಥೆಗಳಲ್ಲಿ ಈ ವಾತಾವರಣವನ್ನು ನಾವು ನೋಡಬಹುದಾಗಿದೆ. ಕಾನೂನು ಹಾಗೂ ಉಪವಿಧಿಗಳಲ್ಲಿ ಸೂಚಿತವಾಗಿರುವ ವಿಷಯಗಳ ಜೊತೆಗೆ ಸಹಕಾರಿ ಸದಸ್ಯರ ಮಕ್ಕಳಲ್ಲಿಯ ಪ್ರತಿಭೆಗಳನ್ನು ಗುರುತಿಸಿ ಬಹುಮಾನ ನೀಡುವುದು, ಸಹಕಾರಿಯ ಹಿರಿಯ ಸದಸ್ಯರನ್ನು ಗೌರವಿಸುವುದು, ವ್ಯಾಪ್ತಿಯಲ್ಲಿ ವಿವಿಧ ವರ್ಗಗಳ ಪ್ರತಿಭಾವಂತರನ್ನು ಗುರುತಿಸಿ ಸನ್ಮಾನಿಸುವುದು, ಮಕ್ಕಳಿಗಾಗಿ ಮಹಿಳೆಯರಿಗಾಗಿ ಹಾಗು ಸದಸ್ಯರಿಗಾಗಿ ವಿವಿಧ ಕ್ರೀಡೆಗಳನ್ನು ಏರ್ಪಡಿಸುವುದು, ಉತ್ತಮ ಸಿಬ್ಬಂದಿಯವರನ್ನು ಗುರುತಿಸಿ ಪ್ರೋತ್ಸಾಗಿಸುವುದು ಹಾಗೂ ಸಹಕಾರಿಗಳೆಲ್ಲರಿಗೂ ಸಹಕಾರಿ ಕ್ಷೇತ್ರದ ಜ್ಞಾನವನ್ನು ಹೆಚ್ಚಿಸುವ ಬಗ್ಗೆ ಪರಿಣಿತರಿಂದ ಉಪನ್ಯಾಸಗಳನ್ನು ಏರ್ಪಡಿಸುವುದು ಹೀಗೆ ಹಲವು ವಿಧವಾದ ವೈವಿಧ್ಯಮಯವಾದ ಕಾರ್ಯಕ್ರಮಗಳನ್ನು ಏರ್ಪಡಿಸಿ ಸದಸ್ಯರಲ್ಲಿ ಆಂತರಿಕ ಸಂಬಂಧಗಳನ್ನು ಗಟ್ಟಿಗೊಳಿಸುವ, ಸದಸ್ಯರಲ್ಲಿ ಹಾಗೂ ಸದಸ್ಯರ ಕುಟುಂಬ ವರ್ಗದವರಲ್ಲಿ ಸಹಕಾರಿಯ ಬಗ್ಗೆ ಅಭಿಮಾನವನ್ನು ಹೆಚ್ಚಿಸುವ ಕಾರ್ಯವ್ಯಾಪ್ತಿಯಲ್ಲಿ ಸಮಾಜದಲ್ಲಿ ಸಾರ್ವಜನಿಕರು ಸಹಕಾರಿಯನ್ನು ಗುರುತಿಸುವ ಹಾಗೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಕಾರ್ಯ ಈ ಸಾಮಾನ್ಯ ಸಭೆಗಳ ಸಂದರ್ಭದಲ್ಲಿ ನಡೆಯಬೇಕು.

ವಾರ್ಷಿಕ ಸಾಮಾನ್ಯ ಸಭೆ ವರ್ಷಕ್ಕೆ ಒಂದು ಬಾರಿ ನಡೆಯುವ ಸಭೆಯಾದ್ದರಿಂದ ಸದಸ್ಯರೆಲ್ಲರಿಗೂ ತಮ್ಮ ತಮ್ಮ ವಿಷಯಗಳ ಬಗ್ಗೆ ಅನಿಸಿಕೆ/ಅಭಿಪ್ರಾಯ ಸಲಹೆಗಳನ್ನು ಹೇಳಲು ಮುಕ್ತ ಅವಕಾಶ ನೀಡುವ ಸಭೆಯಾಗಬೇಕು. ಸಭೆಗಳನ್ನು ಸಕಾಲದಲ್ಲಿ ಅರ್ಥಪೂರ್ಣವಾಗಿ ವಿಷಯ ಪಟ್ಟಿಯ ಕ್ರಮಾಂಕವಾಗಿ ನಡೆಸಬೇಕು. ಸಮಗ್ರ ಸಹಕಾರಿ ಕ್ಷೇತ್ರ ಅಭಿವೃದ್ಧಿಗೆ ಪೂರಕವಾಗಿ ನಡೆದು ಸಹಕಾರಿ ಕ್ಷೇತ್ರ ಬಗ್ಗೆ ಸಾರ್ವಜನಿಕರಲ್ಲಿ ನಕಾರಾತ್ಮ ಭಾವನೆಗಳು ಅಳಿದು ಸಕಾರಾತ್ಮ ಭಾವನೆಗಳು ಬರುವಂತ್ತಾದರೆ ಸಾಮಾನ್ಯ ಸಭೆ ಪರಿಣಾಮಕಾರಿ ಎನಿಸುತ್ತದೆ.

## "ಬಂಧನ, ನೋವು, ನರಳಾಟಗಳು ಬಾರದಂತೆ ಜೀವನ ಕ್ರಮವಿರಲಿ"

ಶ್ರೇಣಿ 68



# ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ಪ್ರಸಕ್ತದ ಜಗತ್ತಿನ ಜನರಲ್ಲಿ ನೂರಕ್ಕೆ ತೊಂಬತ್ತೆಂಟರಷ್ಟು ಜನ ಒಂದಿಲ್ಲೊಂದು ಭಯದಿಂದ ಪೀಡಿತರಾಗಿದ್ದಾರೆಂದರೆ ಅತಿಶಯೋಕ್ತಿಯಲ್ಲ. ಕೊಟ್ಟಿರುವ ಹಣ ವಾಪಸ್ಸು ಬರುತ್ತದೋ ಇಲ್ಲವೋ ಎಂಬ ಭಯವಾದರೆ ಇರುವ ಆರೋಗ್ಯ ಯಾವಾಗ ಕೈಕೊಟ್ಟು ರೋಗಿಯನ್ನಾಗಿಸಿ ಬಿಡುತ್ತದೆಂಬ ಭಯ, ಸಂಬಂಧಗಳ ಸುಲಲಿತ ಮುಂದುವರಿಕೆಯ ಭಯ, ಹಿಡಿದಿರುವ ಉದ್ಯಮದಲ್ಲ ಎಲ್ಲಿ ನಷ್ಟವೊದಗೀತೋ ಎಂಬ ಭಯ, ಒಟ್ಟಾರೆ ಭಯಗಳಲ್ಲಿ ಅತ್ಯಂತ ಭಯಾನಕವಾದ ಭಯವೆಂದರೆ ಸಾವಿನ ಭಯ,. ಹುಟ್ಟಿದ ಪ್ರತಿ ಜೀವಿಯೂ ಸಾಯಲೇಬೇಕೆಂಬುದು ಪ್ರಕೃತಿಯ ಕಠೋರ ನಿಯಮ. ಸಾವನ್ನು ಯಾರೂ ಬಯಸದಿದ್ದರೂ, ಅದು ನಿಗದಿತ ಅವಧಿಗೆ ಬಂದೆರಗುತ್ತದೆ. ಆದರೆ ನೋವಿಲ್ಲದ, ನರಳಾಟವಿಲ್ಲದ, ತನ್ನ ಹಸಿವು ನೀಗಿಸಿಕೊಳ್ಳಲು ಇನ್ನೊಬ್ಬರಿಂದ ನೋವಿಲ್ಲದ, ನರಳಾಟವಿಲ್ಲದ, ತನ್ನ ಹಸಿವು ನೀಗಿಸಿಕೊಳ್ಳಲು ಇನ್ನೊಬ್ಬರಿಂದ ತಿನ್ನಿಸಿಕೊಳ್ಳದ ಹಾಗೂ ಬೇರೆಡೆಗೆ ಹೋಗಬೇಕಾದರೆ ಇನ್ನೊಬ್ಬರಿಂದ ಎತ್ತಿಸಿಕೊಳ್ಳದಂಥಹ ಹಾಗೂ ಯಾವುದೇ ವ್ಯಕ್ತಿ ವಸ್ತುಗಳ ಮೋಹದ ನೆನಪು ಬಾರದಂಥಹ ಸಾವು ಬರಲೆಂಬ ಕೋರಿಕೆಯನ್ನು ಸರ್ವಶಕ್ತನ ಮುಂದಿಡಲು ಸೂಚಿಸುತ್ತ ಈ ಕೆಳಗಿನ ಪದ್ಯವನ್ನು ಆಧ್ಯಾತ್ಮ ಕವಿ ಡಿ.ವಿ.ಜಿ ಯವರು ಬಹು ಮನೋಜ್ಞವಾಗಿ ಸೃಜಿಸಿರುತ್ತಾರೆ.

ಆರ ಕೈತುತ್ತಿಗಂ ನಿನ್ನ ಕಾಯಿಸದೆ ವಿಧಿ
ಯಾರ ಭುಜಕುಂ ನಿನ್ನ ಭಾರವಾಗಿಸದೆ
ಆರ ಸೆಲೆ ಸುಳಿವುಮಂಟದವೊಲಾಗಿಸಿ ನಿನ್ನ
ಪಾರಗಾಣಿಸ ಬೇಡು ಮಂಕುತಿಮ್ಮ ॥930॥

ನಾವು ವೃದ್ಧರಾಗುತ್ತಿದ್ದಂತೆಯೇ ನಮ್ಮ ದೈಹಿಕ ಶಕ್ತಿಗಳು ಕುಗ್ಗಿ ಇತರರನ್ನು ಆಶ್ರಯಿಸುವ ಸ್ಥಿತಿಗೆ ತಲುಪುತ್ತೇವೆ. ಅಂಥಹ ಸ್ಥಿತಿಗೆ ತಲುಪಿಸದೇ ಯಾರ ಕೈತುತ್ತಿಗೂ ಕಾಯಿಸದೆ, ಯಾರ ಭುಜಕ್ಕೂ ಭಾರವಾಗಿಸದೆ, ಯಾರ ಸೆಲೆ ಸುಳಿವುಗಳು ಅಂಟದಂತೆ ಈ ಜಗತ್ತಿನಿಂದ ಪಾರು ಮಾಡೆಂಬ ಬೇಡಿಕೆಯನ್ನು ಭಗವಂತನಲ್ಲಿ ಇಡಲು ಸೂಚಿಸಿದ್ದಾರೆ.

ಇದೊಂದು ಅತ್ಯಾತಿ ಉತ್ಕೃಷ್ಟ ಚಿಂತನೆ, "ಅನಾಯಾಸೇನ ಮರಣಂ ವಿನಾ ದೈನ್ಯೇನ ಜೀವನಂ ಎಂಬ ನಾಣ್ಣುಡಿಯನ್ವಯ ಯಾರ ಹಂಗಿಗೂ ತಿರಸ್ಕಾರಕ್ಕೂ ಬಳಪಡದೇ ಇರುವ ಸಾವ ನೀಡೆಂದು ಸೃಷ್ಟಿಸ್ಥಿತಿಲಯ ಕರ್ತನನ್ನು ಬೇಡಲು ಸೂಚಿಸಿರುವ ಡಿ.ವಿ.ಜಿ ಯವರು ಅಂದೇ ವೃದ್ಧಾಶ್ರಮದ ಕಲ್ಪನೆಯನ್ನು ಕಂಡಿದ್ದಾರೆ. Ralph waldo Emerson ಎಂಬ ಮನೋವಿಜ್ಞಾನಿ ತನ್ನ "The power of your subconscious mind" ಎಂಬ ಕೃತಿಯಲ್ಲಿ " MAN BECOMES THAT WHAT HE THINKS ALL DAY LONG" ಮಾನವನು ನಿರಂತರವಾಗಿ ಏನನ್ನು ಚಿಂತಿಸುತ್ತಾನೋ ಅದೇ ಅಗುತ್ತಾನೆ" ಎಂದು ಉವಾಚಿಸುವ ಮೂಲಕ ಮನಸ್ಸಿನ ಅತ್ಯದ್ಭುತ ಕ್ರಿಯಾಶಕ್ತಿಯ ಫಲ ಪಡೆಯಲು ನಿರ್ದೇಶಿಸಿರುತ್ತಾರೆ. ಆದ ಕಾರಣ ನಾವು ನಿರಂತರ ಭಗವಂತನ ಪ್ರೀತಿ ಪೂರ್ವ ಮಕ್ಕಳೆಂದೂ ನಮಗೆ ಒಳ್ಳೆಯದೇ ಆಗುತ್ತದೆಂಬ ಶುಭಭರವಸೆಯನ್ನು ರೂಢಿಸಿಕೊಳ್ಳೂಣವೆಂಬುದೇ ಈ ಪದ್ಯದ ಸಾರಾಂಶವಾಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 19,498 ಆಗಿರುತ್ತದೆ. ಇವುಗಳ ಪೈಕಿ 10,369 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9,129

**ನವೆಂಬರ್ ತಿಂಗಳ ಪ್ರಕರಣಗಳು :** ಒಟ್ಟು ದಾವಾಪ್ರಕರಣ 819, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 177.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 3538 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 353 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 3015 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 104 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 441 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ನವೆಂಬರ್ ತಿಂಗಳಿನಲ್ಲಿ 236 ಪ್ರಕರಣ ದಾಖಲಾಗಿರುತ್ತವೆ.

**ವಿಶೇಷ ಸೂಚನೆ :** ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ಬೆಳಗಾವಿ ವಿಭಾಗದಲ್ಲಿ ಅಮಲ್ಜಾರಿ ಶಾಖೆ ಪ್ರಾರಂಭಿಸಿದ್ದು ನವೆಂಬರ್ ಮಾಹೆಯಿಂದ ಬೆಳಗಾವಿ ವಿಭಾಗದ ಸೌಹಾರ್ದ ಸಹಕಾರಿಗಳು ಅಮಲ್ಜಾರಿ ಅರ್ಜಿಗಳನ್ನು ಬೆಳಗಾವಿ ವಿಭಾಗದಲ್ಲೇ ದಾಖಲಿಸಲು ಸೂಚಿಸಿದೆ.

## ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರವೀಂದ್ರ ಆರ್. ಯಲಿಗಾರ ಇವರಿಗೆ ಸನ್ಮಾನ



**ಬೆಳಗಾವಿ :** ಸಂಯುಕ್ತ ಸಹಕಾರಿಯ ನೂತನ ಧಾರವಾಡ ಜಿಲ್ಲೆಯ ಮಾನ್ಯ ನಿರ್ದೇಶಕರಾದ ಶ್ರೀ ರವೀಂದ್ರ ಆರ್. ಯಲಿಗಾರ ಇವರಿಗೆ ಸಂಯುಕ್ತ ಸಹಕಾರಿಯ ಬೆಳಗಾವಿ ಪ್ರಾಂತದ ಮಾನ್ಯ ನಿರ್ದೇಶಕರುಗಳಿಂದ ಸನ್ಮಾನ ಕಾರ್ಯಕ್ರಮ ಜರುಗಿತು.

## ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಶ್ರೀ ಡಿ.ಎನ್. ಠಾಕೂರ್ ಭೇಟಿ



**ಬೆಂಗಳೂರು :** ದಿನಾಂಕ 30.11.2021 ರಂದು ಶ್ರೀ ಡಿ. ಎನ್. ಠಾಕೂರ್, ಮಾಜಿ ಡೆಪ್ಯೂಟಿ ವ್ಯವಸ್ಥಾಪಕ ನಿರ್ದೇಶಕರು, ಎನ್‌ಸಿಡಿಸಿ, ನವದೆಹಲಿ ಹಾಗೂ ರಾಷ್ಟ್ರೀಯ ಉಪಾಧ್ಯಕ್ಷರು, ಸಹಕಾರ ಭಾರತಿ ಮತ್ತು ಶ್ರೀ ವೀರಭದ್ರ ಬಾಬು, ಮಾನ್ಯ ನಿರ್ದೇಶಕರು ಕೆಎಂಎಫ್, ಹಾಗೂ ಮಾನ್ಯ ನಿರ್ದೇಶಕರು, ಹೊಯ್ಸಳ ಪತ್ತಿನ ಸೌಹಾರ್ದ ಸಹಕಾರಿ ನಿ., ಇವರು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿದರು. ಸದರಿಯವರಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಕಛೇರಿಯ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

## "ಸಮಾಲೋಚನೆ ಸಭೆ"



**ಚಾಮರಾಜನಗರ :** ದಿನಾಂಕ 25.11.2021ರಂದು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರುಗಳ "ಸಮಾಲೋಚನೆ ಸಭೆ" ಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಉದ್ಘಾಟನೆ ಮಾಡಿ 2020–21ನೇ ಸಾಲಿನಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಆದ ಪ್ರಗತಿ ವಿವರಗಳನ್ನು ಹಂಚಿಕೊಂಡರು. ಸದರಿ ಸಭೆಯ ಅಧ್ಯಕ್ಷತೆಯನ್ನು ರೇನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ಅಧ್ಯಕ್ಷರಾದ ಶ್ರೀ ಕೆ.ಜೆ ಪ್ರಕಾಶ್ ರವರು ವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲೆಯ 12 ಸಹಕಾರಿಗಳ ಮಾನ್ಯ ಅಧ್ಯಕ್ಷರು ಮತ್ತು ಇತರೇ 07 ಪ್ರತಿನಿಧಿಗಳು ಭಾಗವಹಿಸಿದ್ದರು. ಇದೇ ಸಮಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ ಇದರ ಜಿಲ್ಲಾ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಶೈಲೇಶ್, ಗುಂಡ್ಲುಪೇಟೆ (ಮುಖ್ಯ ಪ್ರವರ್ತಕರು, ಉದ್ದೇಶಿತ ಶ್ರೀ ಸ್ಕಂದಗಿರಿ ಸೌಹಾರ್ದ ಸಹಕಾರಿ ನಿ., ಗುಂಡ್ಲುಪೇಟೆ) ಇವರನ್ನು ಸನ್ಮಾನಿಸಲಾಯಿತು.

## ಬೆಳಗಾವಿ ಸಂಚಾರಿ ನ್ಯಾಯಾಲಯದ ಪೀಠಾಧಿಕಾರಿಗಳಾದ ಶ್ರೀ ಜಿ.ಎಂ ಪಾಟೀಲ ಇವರಿಗೆ ಸ್ವಾಗತ



**ಬೆಳಗಾವಿ :** ದಿನಾಂಕ 23 ನವೆಂಬರ್ 2021 ಬೆಳಗಾವಿ ಪ್ರಾಂತೀಯ ಕಛೇರಿಗೆ ಆಗಮಿಸಿದ ಬೆಳಗಾವಿ ಸಂಚಾರಿ ನ್ಯಾಯಾಲಯದ ನೂತನ ಪೀಠಾಧಿಕಾರಿಗಳಾದ ಶ್ರೀಯುತ ಜಿ.ಎಂ. ಪಾಟೀಲ ಇವರನ್ನು ಟಾಸ್ಕಫೋರ್ಸನ ಉಸ್ತುವಾರಿಗಳಾದ ಶ್ರೀ ಶ್ರೀಕಾಂತ ಬರುವೆ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಸ್ವಾಗತಿಸಿದರು. ಪ್ರಾಂತೀಯ ಕಛೇರಿಯ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ 20ನೇ ವಾರ್ಷಿಕ ಸಾಮಾನ್ಯ ಸಭೆ 23ನೇ ಡಿಸೆಂಬರ್ 2021

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 20ನೇ ವಾರ್ಷಿಕ ಸಾಮಾನ್ಯ ಸಭೆಯನ್ನು **ದಿನಾಂಕ 23ನೇ ಡಿಸೆಂಬರ್ 2021, ಗುರುವಾರದಂದು ಡಾ॥ ಬಿ.ಆರ್. ಅಂಬೇಡ್ಕರ ಭವನ, ಮಿಲ್ಲರ್ಸ್ ರಸ್ತೆ, ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆ ಹತ್ತಿರ, ವಸಂತನಗರ, ಬೆಂಗಳೂರು-560052** ಇಲ್ಲಿ ಬೆಳಿಗ್ಗೆ 11:00 ಗಂಟೆಗೆ ಕರೆಯಲಾಗಿದೆ. ಸಭೆಯ ನೋಟೀಸನ್ನು ಅಜೆಂಡಾ ಮತ್ತು ವಿವರವಾದ ಟಿಪ್ಪಣಿಗಳೊಂದಿಗೆ ಎಲ್ಲಾ ಅರ್ಹ ಸದಸ್ಯರಿಗೆ ನೋಂದಾಯಿತ ಪಾರ್ಸಲ್ ಮೂಲಕ ಕಳುಹಿಸಲಾಗಿದೆ. ಸಭೆಯ ಅಜೆಂಡಾ. ಟಿಪ್ಪಣಿಗಳು ಮತ್ತು ಅರ್ಹ ಸದಸ್ಯರ ಪಟ್ಟಿಯು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.Souharda.coop ನಲ್ಲಿ ಲಭ್ಯವಿರುತ್ತದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಗಮನಿಸಲು ಕೋರಿದೆ.

## 20ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು

### ದಿನಾಂಕ 23 ಡಿಸೆಂಬರ್ 2021, ಗುರುವಾರ

**ಮಾನ್ಯರೇ,**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 20ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 23 ಡಿಸೆಂಬರ್ 2021, ಗುರುವಾರದಂದು ಡಾ॥ ಬಿ.ಆರ್. ಅಂಬೇಡ್ಕರ ಭವನ, ಮಿಲ್ಲರ್ಸ್ ರಸ್ತೆ, ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆ ಹತ್ತಿರ, ವಸಂತನಗರ, ಬೆಂಗಳೂರು-560052 ಇಲ್ಲಿ ಬೆಳಿಗ್ಗೆ 11:00 ಗಂಟೆಗೆ ಕರೆಯಲಾಗಿದೆ. ಈ ಸಭೆಗೆ ತಾವು ಆಗಮಿಸಬೇಕಾಗಿ ಕೋರಲಾಗಿದೆ.

**ಸಭೆಯಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗುವುದು:**

1. 20ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
2. 19ನೇ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯಗಳನ್ನು ಓದಿ ದೃಢೀಕರಿಸುವುದು ಹಾಗೂ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು.
3. 2020-21ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸುವುದು.
4. 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಪರಿಗಣಿಸುವುದು.
5. 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಅನುಮೋದಿಸುವುದು.
6. 2020-21ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.
7. 2021-22ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
8. 2022-23ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
9. 2021-22ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
10. 2021-22ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಅನುಮೋದಿಸುವುದು.
11. 2022-23ನೇ ಸಾಲಿನ ಕರಡು ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
12. 2022-23ನೇ ಸಾಲಿನ ಕರಡು ಮುಂಗಡ ಪತ್ರವನ್ನು ಅನುಮೋದಿಸುವುದು.
13. ಸಂಯುಕ್ತ ಸಹಕಾರಿಯ ನೂತನ ಸ್ವಂತ ಕಟ್ಟಡಗಳ ಉದ್ಘಾಟನೆಯ ಕುರಿತು.
14. ಸಂಯುಕ್ತ ಸಹಕಾರಿಯ ವತಿಯಿಂದ ನೂತನ ಪುಸ್ತಕಗಳ ಮುದ್ರಣದ ಕುರಿತು.
15. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಮುಂದಿನ ಅವಧಿಗೆ ಚುನಾವಣೆ ನಡೆಸುವ ಕುರಿತು.
16. ಸಂಯುಕ್ತ ಸಹಕಾರಿಯ ವತಿಯಿಂದ ಪೂರಕ ಸಂಸ್ಥೆ ಪ್ರಾರಂಭಿಸುವ ಕುರಿತು.
17. ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ (ಡಿಸಿಬಿಎಂ) 6 ತಿಂಗಳ ಕೋರ್ಸಿನ 4ನೇ ತಂಡ ಪ್ರಾರಂಭಿಸುವ ಕುರಿತು.
18. ಸಂಯುಕ್ತ ಸಹಕಾರಿಯ ಸಿಬ್ಬಂದಿ ಸೇವಾ ನಿಯಮಾವಳಿಗಳ ತಿದ್ದುಪಡಿ ಕುರಿತು.
19. ಸಂಯುಕ್ತ ಸಹಕಾರಿಯು ಇತರೆ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ಕುರಿತು.
20. ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದು ಹಾಕಿದ ಬಗೆಗಿನ ಸಂಕ್ಷಿಪ್ತ ವರದಿ.
21. 14, 15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಸೃಜಿಸಲಾದ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪುನರವಲೋಕನ. ಸಹಕಾರ ಅಭಿವೃದ್ಧಿ ಪ್ರತಿಷ್ಠಾನ (ಸ್ಯಾಪ್-ಕೆ) ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ಪರಿಗಣನೆ.
22. ಹಿಂದಿನ ಸಹಕಾರಿ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ.
23. ಕಾರ್ಯಾಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರವಲೋಕನ.
24. ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ.
25. ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಲೋಕನ.
26. ಮಂಡಲಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.

27. ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ.
28. ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.
29. ವಸೂಲಾಗದೆಂದು ಪರಿಗಣಿತವಾದ ಸುಸ್ಥಿ ಸಾಲಗಳ ಬಗ್ಗೆ ತೀರ್ಮಾನ.
30. ಮಂಡಲಿಯ ನಿರ್ದೇಶಕರುಗಳನ್ನು ತೆಗೆದುಹಾಕುವುದು.
31. 66ನೇ ಪ್ರಕರಣದ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ.
32. ಮಂಡಲಿಯಿಂದ ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ನಿರಾಕರಿಸಲಾಗಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ.
33. ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕನ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ.
34. ಉಪವಿಧಿ ತಿದ್ದುಪಡಿ.
35. ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ರಚನೆ.
36. ಸಹಕಾರಿಯ ಸಮಾಪನ.
37. ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ಪ್ರಕ್ರಿಯೆಗಳು.
38. ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.

**ಆಡಳಿತ ಮಂಡಲಿಯ ಅಪ್ಪಣೆಯ ಮೇರೆಗೆ,**
**ವಂದನೆಗಳೊಂದಿಗೆ,**

ಇಂತಿ ತಮ್ಮ ವಿಶ್ವಾಸಿ

Karnataka State Souharda Federal Cooperative Ltd. Reg. No. RSR / SOU / ACT / 136 Regn 061 / 2001-02 dated 04-01-2002 Bangalore

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

ಸ್ಥಳ : ಬೆಂಗಳೂರು
ದಿನಾಂಕ : 30.11.2021

## ಜನವರಿ 01 ರಂದು ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲು ಸೌಹಾರ್ದ ಸಹಕಾರಿಗಳಿಗೆ ಕರೆ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜನವರಿ 01, 2001 ರಂದು ಜಾರಿಗೆ ಬಂದ ಹಿನ್ನೆಲೆಯಲ್ಲಿ ಪ್ರತಿ ವರ್ಷ ಜನವರಿ 01ರಂದು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ದಿನಾಚರಣೆಯನ್ನಾಗಿ ಆಚರಿಸುತ್ತಾ ಬರಲಾಗಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ದಿನದ ಜ್ಞಾಪಕಾರ್ಥ ಮತ್ತು ಸೌಹಾರ್ದ ಸಹಕಾರಿಗಳ ಅಸ್ತಿತ್ವಕ್ಕೆ ಕಾರಣವಾದ ದಿನವೆಂದು ಆಚರಿಸಲಾಗುತ್ತಿದೆ. ಸೌಹಾರ್ದ ಸಹಕಾರಿ ದಿನವನ್ನು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ತಮ್ಮ ತಮ್ಮ ಸೌಹಾರ್ದ ಸಹಕಾರಿಗಳಲ್ಲಿ ಸಹಕಾರಿ ಸಪ್ತ ವರ್ಣದ ಧ್ವಜಾರೋಹಣ ಮಾಡುವುದರ ಮೂಲಕ ಉತ್ತಮ ರೀತಿಯಲ್ಲಿ ಆಚರಿಸಲು ಕೋರಿದೆ. ಈ ದಿನದಂದು ಸೌಹಾರ್ದ ಸಹಕಾರಿಗಳ ಅಸ್ತಿತ್ವವನ್ನು ಭದ್ರಗೊಳಿಸುವ ನಿಟ್ಟಿನಲ್ಲಿ ಅವಶ್ಯಕವಾದ ಪ್ರಚಾರ ಕಾರ್ಯಗಳನ್ನು ಹಮ್ಮಿಕೊಳ್ಳುವುದು ಅವಶ್ಯಕವೆನಿಸುತ್ತದೆ.

ಸದರಿ ದಿನದಂದು ಸಭೆ, ಸಮಾರಂಭಗಳನ್ನು ಏರ್ಪಡಿಸಿ, ಹಿರಿಯ ಸಹಕಾರಿ ಗಣ್ಯರನ್ನು ಗೌರವಿಸುವುದು, ಸಹಕಾರಿಯ ವ್ಯಾಪ್ತಿಯ ಶಾಲಾ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳುವುದು, ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪರಿಣಿತರಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಹಾಗೂ ಚರ್ಚಾಗೋಷ್ಠಿಗಳನ್ನು ಏರ್ಪಡಿಸುವುದು, ವಿವಿಧ ಕ್ರೀಡೆಗಳನ್ನು ಏರ್ಪಡಿಸುವುದು, ಸಹಕಾರ ಕುರಿತಾದ ಜಾಗೃತಿಯನ್ನು ಮೂಡಿಸುವ ಜಾಥಾ ನಡೆಸುವುದು, ಪರಿಸರ ಜಾಗೃತಿ ಮೂಡಿಸುವುದು, ರಕ್ತದಾನ ಶಿಬಿರಗಳನ್ನು ಏರ್ಪಡಿಸುವುದು, ವ್ಯಾಪ್ತಿಯ ಆಸ್ಪತ್ರೆಗಳಲ್ಲಿನ ರೋಗಿಗಳ ಆರೋಗ್ಯ ಸುಧಾರಣೆಗೆ ಹಣ್ಣು ಹಂಪಲುಗಳನ್ನು ವಿತರಿಸುವುದು, ಠೇವಣಿ ಸಂಗ್ರಹ ಯೋಜನೆ, ಸಾಲ ವಸೂಲಾತಿ ಕ್ರಮಗಳು, ಸೌಹಾರ್ದ ಸಹಕಾರಿ ಚಳುವಳಿಯ ಬಗ್ಗೆ ಜಾಗೃತಿ ಮೂಡಿಸುವಂತಹ ಸಭೆ ಸಮಾರಂಭಗಳನ್ನು ಏರ್ಪಡಿಸುವುದು ಸೇರಿದಂತೆ ಇತ್ಯಾದಿ ಹಲವು ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವವನ್ನು ಹಾಗೂ ವಿಶ್ವಾಸಾರ್ಹತೆಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮವಿಡಲು ತಿಳಿಸಿದೆ. ಸೌಹಾರ್ದ ಸಹಕಾರಿ ದಿನಾಚರಣೆಯ ವರದಿ ಹಾಗೂ ಛಾಯಾಚಿತ್ರಗಳನ್ನು ಸಂಯುಕ್ತ ಸಹಕಾರಿಗೆ ಪತ್ರದ / souharda@souharda.coop ಗೆ ಇ-ಮೇಲ್ ಮೂಲಕ ಕಳುಹಿಸಲು ಕೋರಿದೆ.

# ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಕೊಪ್ಪಳ :** ದಿನಾಂಕ 29.10.2021 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತೀಯ ಕಛೇರಿಯಿಂದ ಕೊಪ್ಪಳ ಜಿಲ್ಲೆಯ ಗಂಗಾವತಿ, ಕಾರಟಗಿ, ಕನಕಗಿರಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ "ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ಕ್ಕೆ 2021 ಸಾಲಿನಲ್ಲಿ ಆದ ತಿದ್ದುಪಡಿಗಳ ಕುರಿತು ಮತ್ತು ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ" ಎಂಬ ವಿಷಯಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಗಂಗಾವತಿಯ ಲಲಿತ ಮಹಲ್‌ನಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಆರ್.ಡಿ.ಸಿ.ಸಿ ಬ್ಯಾಂಕಿನ ಮಾಜಿ ನಿರ್ದೇಶಕರಾದ ಶ್ರೀ ವಿರುಪಾಕ್ಷಪ್ಪ ಮುಷ್ಠಿ ಮತ್ತು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ.ಪತ್ತಾರ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕಲಬುರಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ. ಹೆಚ್, ಮಾನ್ಯ ನಿವೃತ್ತ ಸಹಾಯಕ ನಿಬಂಧಕರು ಮತ್ತು ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಲಿಯಾಖತ್ ಅಲಿ, ಗಂಗಾವತಿ, ಕಾರಟಗಿ, ಕನಕಗಿರಿ ತಾಲೂಕಿನ ಒಕ್ಕೂಟದ ಮಾನ್ಯ ನಿರ್ದೇಶಕರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು "ಕರ್ನಾಟಕ ಸೌಹಾರ್ದ ಸಹಕಾರಿ 1997 ಕಾಯ್ದೆಗೆ ಇತ್ತೀಚಿಗೆ ಆದ ತಿದ್ದುಪಡಿಗಳ ಕುರಿತು ಮತ್ತು ಸೌಹಾರ್ದ ಸಹಕಾರಿಗಳು ಆದಷ್ಟು ಬೇಗ ಕಾಯ್ದೆ ಅಂಶಗಳನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸುತ್ತಾ ಹಾಗೂ ಸೌಹಾರ್ದ ಸಹಕಾರಿಗಳು ಪಾಲಿಸಬೇಕಾದ ಶಾಸನಬದ್ಧ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಮಾತನಾಡಿದರು.

ಕಾರ್ಯಕ್ರಮದ ಪ್ರಾಸ್ತಾವನೆಯನ್ನು ಕಲಬುರಗಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ. ಹೆಚ್ ರವರು ನೆರವೇರಿಸಿದರು. ಸ್ವಾಗತ, ನಿರೂಪಣೆ, ವಂದನಾರ್ಪಣೆಯನ್ನು ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಪವನ. ಎಮ್.ಆರ್ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 105 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

---




**ಕೊಪ್ಪಳ :** 30.10.2021 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತೀಯ ಕಛೇರಿಯಿಂದ ಕೊಪ್ಪಳ ಜಿಲ್ಲೆಯ ಕೊಪ್ಪಳ, ಕುಷ್ಟಗಿ, ಯಲಬುರ್ಗಾ, ಕುಕನೂರು ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ "ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ಕ್ಕೆ 2021 ಸಾಲಿನಲ್ಲಿ ಆದ ತಿದ್ದುಪಡಿಗಳ ಕುರಿತು ಮತ್ತು ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ" ಎಂಬ ವಿಷಯಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಕೊಪ್ಪಳದ ಸೌಭಾಗ್ಯಲಕ್ಷ್ಮೀ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ. ಬಿ. ಪತ್ತಾರ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ ರವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕಲಬುರಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ. ಹೆಚ್, ಮಾನ್ಯ ನಿವೃತ್ತ ಸಹಾಯಕ ನಿಬಂಧಕರು ಮತ್ತು ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಲಿಯಾಖತ್ ಅಲಿ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ.ಎಲ್.ಹೆಚ್ ಮತ್ತು ಕೊಪ್ಪಳ, ಕುಷ್ಟಗಿ, ಯಲಬುರ್ಗಾ, ಕುಕನೂರು ಒಕ್ಕೂಟದ ಮಾನ್ಯ ನಿರ್ದೇಶಕರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ಮಾನ್ಯ

ನಿರ್ದೇಶಕರಾದ ಶ್ರೀ ಜಿ.ಶ್ರೀಧರ ರವರು "ಕರ್ನಾಟಕ ಸೌಹಾರ್ದ ಸಹಕಾರಿ 1997 ಕಾಯ್ದೆಗೆ ಇತ್ತೀಚೆಗೆ ಆದ ತಿದ್ದುಪಡಿಗಳ ಕುರಿತು ಮತ್ತು ಸೌಹಾರ್ದ ಸಹಕಾರಿಗಳು ಆದಷ್ಟು ಬೇಗ ಕಾಯ್ದೆ ಅಂಶಗಳನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸುತ್ತಾ ಹಾಗೂ ಸೌಹಾರ್ದ ಸಹಕಾರಿಗಳು ಪಾಲಿಸಬೇಕಾದ ಶಾಸನಬದ್ಧ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಮಾತನಾಡಿದರು.

ಕಾರ್ಯಕ್ರಮದ ಪ್ರಾಸ್ತಾವನೆಯನ್ನು ಕಲಬುರಗಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ.ಹೆಚ್ ರವರು ನೆರವೇರಿಸಿದರು. ಸ್ವಾಗತ, ನಿರೂಪಣೆ, ವಂದನಾರ್ಪಣೆಯನ್ನು ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಪವನ ಎಮ್.ಆರ್ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 120 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.




**ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ :** ದಿನಾಂಕ 25.11.2021 ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ಸಾಲ ವಸೂಲಾತಿ, ಚುನಾವಣಾ ಪೂರ್ವ ಸಿದ್ಧತೆ ಮತ್ತು ಸಾಮಾನ್ಯ ಸಭೆ/ಆಡಳಿತ ಮಂಡಲಿ ಸಭೆ ಪೂರ್ವ ಸಿದ್ಧತೆ" ಕುರಿತು ವಿಷಯಾಧಾರಿತ ತರಬೇತಿಯನ್ನು ಹೋಟೆಲ್ ಕದಂಬ, ಡಾ.ಮೋದಿ ಆಸ್ಪತ್ರೆ ರಸ್ತೆ, ರಾಜಾಜಿನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆ ಹಾಗೂ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ರವರು ನೆರವೇರಿಸಿದರು. ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ನೆರವೇರಿಸಿದರು. ಶ್ರೀ ಮಂಜುನಾಥ್ ಸಿಂಗ್, ಸಹಕಾರ ಸಂಘಗಳ ಉಪನಿಬಂಧಕರು (4ನೇ ವಲಯ) ಬೆಂಗಳೂರು, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್ ಕೆ. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ. ಎಮ್ ಹಾಗೂ ಅನಿಲ್ ಕುಮಾರ್ ಎಮ್, ಇವರು ನೆರವೇರಿಸಿದರು. 105 ಸೌಹಾರ್ದ ಸಹಕಾರಿಗಳಿಂದ 135 ಪ್ರತಿನಿಧಿಗಳು ಭಾಗವಹಿಸಿದ್ದರು.

**ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ :** ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ ಮತ್ತು ಸಹಕಾರಿಗಳ ಸಾಮಾನ್ಯ ಸಭೆ ಕುರಿತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ 20.11.2021 ಶನಿವಾರ ಮಧ್ಯಾಹ್ನ 02:30 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಶ್ರೀ ಶ್ರೀಕಾಂತ್ ಬರುವೆ, ಉಪಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಇವರು ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ ಮತ್ತು ಸಹಕಾರಿಗಳ ಸಾಮಾನ್ಯ ಸಭೆ ಕುರಿತು ಉಪನ್ಯಾಸ ನೀಡಿದರು. ಮೈಸೂರು ಮತ್ತು ಕೊಡಗು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್. ಎಸ್ ರವರು ಉಪಸ್ಥಿತರಿದ್ದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 36 ಸೌಹಾರ್ದ ಸಹಕಾರಿಗಳಿಂದ 40 ಪ್ರತಿನಿಧಿಗಳು ಭಾಗವಹಿಸಿದ್ದರು.

## 68ನೇ ಅಖಿಲ ಭಾರತ ಸಹಕಾರ ಸಪ್ತಾಹ ಧ್ವಜಾರೋಹಣ ಕಾರ್ಯಕ್ರಮ



**ಕಲಬುರಗಿ :** ದಿನಾಂಕ 14.11.2020 ರಂದು ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ 68ನೇ ಅಖಿಲ ಭಾರತ ಸಹಕಾರ ಸಪ್ತಾಹ ಧ್ವಜಾರೋಹಣವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ನೆರವೇರಿಸಿದರು. ನಂತರ ಮಾತನಾಡಿ ಸಹಕಾರದಿಂದ ಸಮೃದ್ಧಿ ಎಂಬ ಘೋಷಣೆಯೊಂದಿಗೆ ಸಹಕಾರಿಗಳು ಇನ್ನಷ್ಟು ಅಭಿವೃದ್ಧಿಯಾಗಲಿ ಈ ಸಹಕಾರ ಚಳುವಳಿಯು ಪತ್ತು ಕೃಷಿ, ಮಾರಾಟ, ಹೈನುಗಾರಿಕೆ, ಬ್ಯಾಂಕಿಂಗ್, ಗೃಹ ನಿರ್ಮಾಣ, ಸಕ್ಕರೆ ಮುಂತಾದ ಕ್ಷೇತ್ರದಲ್ಲಿ ರಾಷ್ಟ್ರದ ಆರ್ಥಿಕ ಅಭಿವೃದ್ಧಿಯನ್ನು ಸಹಕಾರವು ಸಮಾಜವನ್ನು ಮತ್ತು ರಾಷ್ಟ್ರವನ್ನು ಭದ್ರ ಬುನಾದಿಯಾಗಿದೆ ಒಟ್ಟಿನಲ್ಲಿ ಸಹಕಾರ ತತ್ವ ಮೌಲ್ಯಗಳ ಬಗೆಗೆ ಇನ್ನೂ ಹೆಚ್ಚಿನ ಅರಿವು ಮೂಡಿಸಬೇಕಾಗಿದೆ ಜೊತೆಯಲ್ಲಿ ಉತ್ತಮ ನಾಯಕತ್ವ ಪ್ರಾಮಾಣಿಕತೆ ಬದ್ಧತೆ ಮುಂತಾದ ಗುಣವುಳ್ಳ ಸಹಕಾರಿ ನಾಯಕತ್ವ ಬರಬೇಕಾಗಿದೆ. ಈ ಸಂದರ್ಭದಲ್ಲಿ ಕಲಬುರಗಿ ಪ್ರಾಂತೀಯ ಕಛೇರಿಯ ಸಿಬ್ಬಂದಿಗಳ ಉಪಸ್ಥಿತರಿದ್ದರು.



**ಬಳ್ಳಾರಿ :** ದಿನಾಂಕ 30.11.2021 ರಂದು ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಆಯೋಜಿಸಿದ "ವಿಷಯಾಧಾರಿತ ತರಬೇತಿ" ಈ ತರಬೇತಿ ಕಾರ್ಯಕ್ರಮದಲ್ಲಿ ಉದ್ಘಾಟನೆಯನ್ನು ಶ್ರೀ ಪುಂಡಲೀಕ ಸಾದುರೇ, ಸಹಕಾರ ಸಂಘಗಳ ಉಪನಿಬಂಧಕರು, ಬಳ್ಳಾರಿ ಇವರು ನೇರವೇರಿಸಿದರು. ಹಾಗೂ ಪ್ರಾಸ್ತಾವಿಕ ನುಡಿಯನ್ನು ಶ್ರೀ ರಾಜಶೇಖರ್ ಹೆಚ್, ಪ್ರಾಂತೀಯ ವ್ಯವಸ್ಥಾಪಕರು, ನೆರವೇರಿಸಿದರು. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಗೆ ಇತ್ತೀಚಿಗೆ ಆದ ತಿದ್ದುಪಡಿಗಳ ಕುರಿತು ಶ್ರೀ ಲಿಯಾಖತ್ ಅಲಿ ನಿವೃತ್ತ ಸಹಾಯಕ ನಿಬಂಧಕರು ಹಾಗೂ ಸಹಕಾರಿಗಳ ಆರ್ಥಿಕ ಬಲವರ್ಧನೆಗೆ ಸಂಪನ್ಮೂಲಗಳ ಕ್ರೂಡಿಕರಣ ಸಹಕಾರಿಯಲ್ಲಿ ಉತ್ತಮ ಸಾಲಗಾರರನ್ನು ಹಾಗೂ ಠೇವಣಿದಾರರನ್ನು ಗುರುತಿಸುವುದು ಹೇಗೆ ಎಂಬ ವಿಷಯಗಳ ಕುರಿತಾಗಿ ಶ್ರೀ ಗಿರಿಧರ್ ಪೂಜಾರ್ ಅವರು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಬಳ್ಳಾರಿ ಜಿಲ್ಲೆಯ 43 ಸೌಹಾರ್ದ ಸಹಕಾರಿಗಳಿಂದ 56 ಪ್ರತಿನಿಧಿಗಳು ಭಾಗವಹಿಸಿದರು.

**ವಿಜಯನಗರ :** ದಿನಾಂಕ 29.11.2021 ರಂದು ವಿಜಯನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಆಯೋಜಿಸಿದ "ವಿಷಯಾಧಾರಿತ ತರಬೇತಿ" ಈ ತರಬೇತಿ ಕಾರ್ಯಕ್ರಮದಲ್ಲಿ ಉದ್ಘಾಟನೆಯನ್ನು ಶ್ರೀ ಎಲ್.ಎಸ್ ಆನಂದ ನಿರ್ದೇಶಕರು, ಡಿ.ಸಿ.ಸಿ ಬ್ಯಾಂಕ್, ಇವರು ನೇರವೇರಿಸಿದರು. ಹಾಗೂ ಪ್ರಾಸ್ತಾವಿಕ ನುಡಿಯನ್ನು ಶ್ರೀ ರಾಜಶೇಖರ್ ಹೆಚ್ ಪ್ರಾಂತೀಯ ವ್ಯವಸ್ಥಾಪಕರು ನೆರವೇರಿಸಿದರು. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಗೆ ಇತ್ತೀಚಿಗೆ ಆದ ತಿದ್ದುಪಡಿಗಳ ಕುರಿತು ಶ್ರೀ ಲಿಯಾಖತ್ ಅಲಿ, ನಿವೃತ್ತ ಸಹಾಯಕ ನಿಬಂಧಕರು ಹಾಗೂ ಸಹಕಾರಿಗಳ ಆರ್ಥಿಕ ಬಲವರ್ಧನೆಗೆ ಸಂಪನ್ಮೂಲಗಳ ಕ್ರೂಡೀಕರಣ ಸಹಕಾರಿಯಲ್ಲಿ ಉತ್ತಮ ಸಾಲಗಾರರನ್ನು ಹಾಗೂ ಠೇವಣಿದಾರರನ್ನು ಗುರುತಿಸುವುದು ಹೇಗೆ ಎಂಬ ವಿಷಯಗಳ ಕುರಿತಾಗಿ ಶ್ರೀ ಗಿರಿಧರ್ ಪೂಜಾರ್ ಅವರು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ವಿಜಯನಗರ ಜಿಲ್ಲೆಯ 63 ಸೌಹಾರ್ದ ಸಹಾರಿಗಳಿಂದ 72 ಪ್ರತಿನಿಧಿಗಳು ಭಾಗವಹಿಸಿದರು.

## ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ



**ಉತ್ತರ ಕನ್ನಡ :** ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಭೇಟಿ ನೀಡಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಹಕಾರಿಯ ಕಾರ್ಯಚಟುವಟಿಕೆಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.

**ಮುಳಗುಂದ :** ದಿ ಮುಳಗುಂದ ಅರ್ಬನ್ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ನಿ., ಸದರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಭೇಟಿ ನೀಡಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಹಕಾರಿಯ ಕಾರ್ಯಚಟುವಟಿಕೆಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.

**ಉತ್ತರ ಕನ್ನಡ :** ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಭೇಟಿ ನೀಡಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಹಕಾರಿಯ ಕಾರ್ಯಚಟುಚಟಿಕೆಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.



## ಕನಕದಾಸ ಜಯಂತಿ ಆಚರಣೆ

**ಬೆಳಗಾವಿ :** ಕನಕದಾಸರ 534 ನೇ ಜಯಂತಿಯು ಬೆಳಗಾವಿ ಪ್ರಾಂತದ ಎಲ್ಲಾ ಮಾನ್ಯ ನಿರ್ದೇಶಕರ ನೇತೃತ್ವದಲ್ಲಿ ಜರುಗಿತು. ಈ ಸಂದರ್ಭದಲ್ಲಿ ಟಾಸ್ಕಫೋರ್ಸನ ಉಸ್ತುವಾರಿಗಳಾದ ಶ್ರೀಯುತ ಶ್ರೀಕಾಂತ ಬರುವೆ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀಯುತ ಬಸವರಾಜ ಹೊಂಗಲ ಹಾಗೂ ಪ್ರಾಂತದ ಎಲ್ಲಾ ಸಿಬ್ಬಂದಿಗಳು ಹಾಜರಿದ್ದರು

## ಸಂಪರ್ಕ ಸಭೆಗಳು



**ಉತ್ತರ ಕನ್ನಡ :** ದಿನಾಂಕ 09.11.2021 ರಂದು ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಅಂಬೇಡ್ಕರ್ ಭವನ ಶಿರಸಿಯಲ್ಲಿ ಸಂಪರ್ಕ ಸಭೆಯು ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಸಭೆಯ ಉದ್ಘಾಟನೆಯನ್ನು ಶ್ರೀ ಪ್ರಮೋದ ಹೆಗಡೆ ಮಾನ್ಯ ಉಪಾಧ್ಯಕ್ಷರು ರಾಜ್ಯ ವಿಕೇಂದ್ರಿಕರಣ ಗ್ರಾಮೀಣ ಅಭಿವೃದ್ಧಿ ಸಮಿತಿ ಮತ್ತು ಪಂಚಾಯತ ರಾಜ್ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಶ್ರೀಮತಿ ಸರಸ್ವತಿ ಎನ್ ರವಿ ಮತ್ತು ಉತ್ತರ ಕನ್ನಡ ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಕೆ ವಿ ನಾಯಕ ಇವರು ಭಾಗವಹಿಸಿದ್ದರು. ಟಾಸ್ಕಫೋರ್ಸನ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಮತ್ತು ಶ್ರೀ ಜಿ.ಕೆ.ರಾಮಪ್ಪ, ಮಾನ್ಯ ಉಪನಿರ್ದೇಶಕರು(ನಿವೃತ್ತ), ಲೆಕ್ಕಪರಿಶೋಧನಾ ಇಲಾಖೆ, ಶಿರಸಿ ಸಭೆಯಲ್ಲಿ ಸೌಹಾರ್ದ ಸಹಕಾರಿಗಳಿಂದ 180 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು

ಸಭೆಯಲ್ಲಿ ಶ್ರೀ ಶ್ರೀಕಾಂತ ಬರುವೆ ಮಾನ್ಯ ಟಾಸ್ಕ್ ಫೋರ್ಸ್ ಅಧಿಕಾರಿ ಯವರು ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ–2021 ವಿಷಯದ ಕುರಿತು ಮತ್ತು ಶ್ರೀ ಜಿ.ಕೆ. ರಾಮಪ್ಪ, ಇವರು ಸಹಕಾರಿಗಳ ನಿರ್ದೇಶಕರ ಕರ್ತವ್ಯಗಳು ಮತ್ತು ಅಧಿಕಾರಗಳ ವಿಷಯದ ಕುರಿತು ಉಪನ್ಯಾಸ ನೀಡಿದರು.



**ಗದಗ :** ದಿನಾಂಕ 18 ನವಂಬರ್ 2021 ರಂದು ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಆಯ್ ಎಂ.ಎ.ಹಾಲ್, ಗದಗ ಜಿಲ್ಲೆ ಇಲ್ಲಿ ಸಂಪರ್ಕ ಸಭೆಯು ಜರುಗಿತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಗದಗ ಜಿಲ್ಲೆಯ ಜಿಲ್ಲಾ ನಿರ್ದೇಶಕರಾದಶ್ರೀಯುತ ನಾಗರಾಜ್ ದೇಶಪಾಂಡೆ ಯವರು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಮುಳಗುಂದ ಅರ್ಬನ್ ಸೌಹಾರ್ದ ಬ್ಯಾಂಕ್ ಅಧ್ಯಕ್ಷರಾದ ಶ್ರೀಯುತ ಬಸವರಾಜ ಬಡ್ನಿ, ಮಾನ್ಯ ಪ್ರಾಂತೀಯ ವ್ಯವಸ್ಥಾಪರಾದ ಶ್ರೀಯುತ ಬಸವರಾಜ ಹೊಂಗಲ ಇವರು ಸಭೆಯಲ್ಲಿ ಪಾಲ್ಗೊಂಡಿದ್ದರು.ಗದಗ ಜಿಲ್ಲೆಯಲ್ಲಿ ಒಟ್ಟು 63 ಸಹಕಾರಿಗಳಿಂದ ಸಭೆಯಲ್ಲಿ 45 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

ಸಭೆಯಲ್ಲಿ ಶ್ರೀ ಗಂಗಾರಾಮ ಕೋಳಾಪ್ಪೆ ಇವರು ಕಾಯ್ದೆ ತಿದ್ದುಪಡಿ ಮತ್ತು ಲೆಕ್ಕಪತ್ರ ನಿರ್ವಹಣೆ ವಿಷಯದ ಮತ್ತು ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಶ್ರೀ ರಾಚಯ್ಯಾ ಹಿರೇಮಠ ಇವರು ಉಪನ್ಯಾಸ ನೀಡಿದರು.



**ತುಮಕೂರು :** ದಿನಾಂಕ 23.11.2021 ರಂದು ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸೌಹಾರ್ದ ಕಾಯ್ದೆಯ ಇತ್ತೀಚಿನ ತಿದ್ದುಪಡಿ ಹಾಗೂ ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲು ಮಾಡುವ ವಿಷಯದ ಕುರಿತು ಸಂಪರ್ಕ ಸಭೆ ಮತ್ತು ತರಬೇತಿ ಕಾರ್ಯಕ್ರಮವನ್ನು ಸ್ನೇಹ ಸಂಗಮ ಕನ್ವೆನ್ಷನ್ ಹಾಲ್, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಲ್ಯಾನ್ಸಿ ಹೆಚ್. ಪಾಯ್ಸ್, ತುಮಕೂರು ಸೌಹಾರ್ದ ಸಹಕಾರಿ ಒಕ್ಕೂಟದ ಉಪಾಧ್ಯಕ್ಷರು, ಶ್ರೀ ಸುರೇಶ್ ರಾವ್, ತುಮಕೂರು ಜಿಲ್ಲಾ ಸಹಕಾರ

ಭಾರತಿ ಹಾಗೂ ಶಿವಾಜಿ ಪತ್ತಿನ ಸೌಹಾರ್ದ ಸಹಕಾರಿ ನಿ,. ಇದರ ಅಧ್ಯಕ್ಷರು, ಶ್ರೀ ಬಿ.ಎಸ್. ಮಂಜುನಾಥ್, ಸ್ನೇಹ ಸಂಗಮ ಸೌಹಾರ್ದ ಸಹಕಾರಿಯ ಅಧ್ಯಕ್ಷರು, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ,ಇವರು ಉಪಸ್ಥಿತ–ರಿದ್ದರು. ಸಭೆಯ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತಿಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ನಡೆಸಿಕೊಟ್ಟರು. ಜಿಲ್ಲಾ ಸಂಯೋಜಕರಾದ ಶ್ರೀ ಕುಶಾಲ್ ಹೆಚ್.ಎಮ್ ಹಾಗೂ ಶ್ರೀ ಉಮೇಶ್ ಎಸ್. ಇವರು ಭಾಗವಹಿಸಿದ್ದರು. 128 ಸೌಹಾರ್ದ ಸಹಕಾರಿಗಳಿಂದ 180 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.



**ಕೋಲಾರ** : ದಿನಾಂಕ 26.11.2021 ರಂದು ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸೌಹಾರ್ದ ಕಾಯ್ದೆಯ ಇತ್ತೀಚಿನ ತಿದ್ದುಪಡಿ ಹಾಗೂ ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲು ಮಾಡುವ ವಿಷಯದ ಕುರಿತು ಸಂಪರ್ಕ ಸಭೆ ಮತ್ತು ತರಬೇತಿ ಕಾರ್ಯಕ್ರಮವನ್ನು ಕೋಲಾರ ಜಿಲ್ಲಾ ಪತ್ರಕರ್ತರ ಭವನ, ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಪಿ. ರವೀಂದ್ರನಾಥ್, ಶ್ರೀ ಸಾಯಿ ಸೌಹಾರ್ದ ಸಹಕಾರಿಯ ಅಧ್ಯಕ್ಷರು, ಇವರು ಉಪಸ್ಥಿತರಿದ್ದರು. ಸಭೆಯ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತಿಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ನಡೆಸಿಕೊಟ್ಟರು. ಸಭೆಯ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ. ಎಸ್. ಇವರು ನಡೆಸಿಕೊಟ್ಟರು. 19 ಸೌಹಾರ್ದ ಸಹಕಾರಿಗಳಿಂದ 39 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.



**ಚಿಕ್ಕಬಳ್ಳಾಪುರ** : ದಿನಾಂಕ 27.11.2021 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸೌಹಾರ್ದ ಕಾಯ್ದೆಯ ಇತ್ತೀಚಿನ ತಿದ್ದುಪಡಿ ಹಾಗೂ ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲು ಮಾಡುವ ವಿಷಯದ ಕುರಿತು ಸಂಪರ್ಕ ಸಭೆ ಮತ್ತು ತರಬೇತಿ ಕಾರ್ಯಕ್ರಮವನ್ನು ಚಿಕ್ಕಬಳ್ಳಾಪುರ ಜಿಲ್ಲಾ ಪತ್ರಕರ್ತರ ಭವನ, ಚಿಕ್ಕಬಳ್ಳಾಪುರ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ನಾಗೇಂದ್ರ ಗುಪ್ತ, ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರು, ಶ್ರೀ ಅಮರ್. ಆರ್. ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮುಖ್ಯಪ್ರವರ್ತಕರು, ಇವರು ಉಪಸ್ಥಿತರಿದ್ದರು. ಸಭೆಯ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ನಡೆಸಿಕೊಟ್ಟರು. ಸಭೆಯ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ. ಎಸ್. ಇವರು ನಡೆಸಿಕೊಟ್ಟರು. 24 ಸೌಹಾರ್ದ ಸಹಕಾರಿಗಳಿಂದ 43 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.



## ಸೌಹಾರ್ದ ಸಹಕಾರಿಗಳ ಸಭೆ

**ಉತ್ತರ ಕನ್ನಡ** : ಉತ್ತರಕನ್ನಡ ಜಿಲ್ಲೆಯ ಯಲ್ಲಾಪೂರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳೊಂದಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು. ಈ ಸಂದರ್ಭದಲ್ಲಿ ಯಲ್ಲಾಪೂರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು ಉಪಸ್ಥಿತರಿದ್ದರು.

# ಪತ್ರಿಕಾ ಗೋಷ್ಠಿ




**ಉತ್ತರ ಕನ್ನಡ** : ದಿನಾಂಕ 09 ನವಂಬರ್ 2021 ರಂದು ಹೋಟಲ್ ಮಧುಬನ್, ಶಿರಸಿಯಲ್ಲಿ ಪತ್ರಿಕಾಗೋಷ್ಠಿ ಜರುಗಿರುತ್ತದೆ. ಪತ್ರಿಕಾ ಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಶ್ರೀ ಪ್ರಮೋದ ಹೆಗಡೆ ಮಾನ್ಯ ಉಪಾಧ್ಯಕ್ಷರು ರಾಜ್ಯ ವಿಕೇಂದ್ರಿಕರಣ ಗ್ರಾಮೀಣ ಅಭಿವೃದ್ಧಿ ಸಮಿತಿ ಮತ್ತು ಪಂಚಾಯತ ರಾಜ್ ಹಾಗೂ ಉತ್ತರಕನ್ನಡ ಜಿಲ್ಲಾ ಒಕ್ಕೂಟ ಅಧ್ಯಕ್ಷರು ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಶ್ರೀಮತಿ ಸರಸ್ವತಿ ಎನ್ ರವಿ ಮತ್ತು ಉತ್ತರ ಕನ್ನಡ ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಕೆ ವಿ ನಾಯಕ ಇವರು ಉಪಸ್ಥಿತರಿದ್ದರು. ಶ್ರೀ ಶಂಭುಲಿಂಗ ಗಣಪತಿ ಹೆಗಡೆ, ಅಧ್ಯಕ್ಷರು ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿ. ಶಿರಸಿ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರುಗಳು ಉಪಸ್ಥಿತರಿದ್ದರು.




**ಗದಗ** : ದಿನಾಂಕ 18 ನವಂಬರ್ 2021 ರಂದು ಪತ್ರಿಕಾ ಭವನ, ಕರ್ನಾಟಕ ಕಾರ್‍ಯನಿರತ ಪತ್ರಕರ್ತರ ಸಂಘ (ರಿ) ಗದಗ ಇಲ್ಲಿ ಪತ್ರಿಕಾಗೋಷ್ಠಿಯು ಜರುಗಿರುತ್ತದೆ. ಪತ್ರಿಕಾ ಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಬಿ. ಹೆಚ್ ಕೃಷ್ಣಾರೆಡ್ಡಿ, ಸಂಯುಕ್ತ ಸಹಕಾರಿಯ ಮಾನ್ಯ ಗದಗ ಜಿಲ್ಲೆಯ ಜಿಲ್ಲಾ ನಿರ್ದೇಶಕರಾದ ಶ್ರೀಯುತ ನಾಗರಾಜ್ ದೇಶಪಾಂಡೆ ಹಾಗೂ ಮುಳಗುಂದ ಅರ್ಬನ್ ಸೌಹಾರ್ದ ಬ್ಯಾಂಕ್ ಅಧ್ಯಕ್ಷರಾದ ಶ್ರೀಯುತ ಬಸವರಾಜ ಬಡ್ನಿ ಹಾಗೂ ಕೆಸಿಸಿ (ಕೆಡಿಸಿಸಿ) ಅಧ್ಯಕ್ಷರಾದ ಶ್ರೀಯುತ ಮಲ್ಲಿಕಾರ್ಜುನ ಹೊರಕೇರಿ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಮತ್ತು ಶ್ರೀ ಕಲ್ಮೇಶ್ ಎಸ್ ಎಂ. ಜಿಲ್ಲಾ ಸಂಯೋಜ–ಕರು ಹಾವೇರಿ ಇವರು ಉಪಸ್ಥಿತರಿದ್ದರು.




**ತುಮಕೂರು** : ದಿನಾಂಕ 23.11.2021 ರಂದು ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸೌಹಾರ್ದ ಕಾಯ್ದೆಯ ಇತ್ತೀಚಿನ ತಿದ್ದುಪಡಿ ಹಾಗೂ ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲು ಮಾಡುವ ವಿಷಯದ ಕುರಿತು ಸಂಪರ್ಕ ಸಭೆ ಮತ್ತು ತರಬೇತಿ ಕಾರ್ಯಕ್ರಮದ ಕುರಿತು ಸ್ನೇಹ ಸಂಗಮ ಕನ್ವೆನ್ಷನ್ ಹಾಲ್ ನಲ್ಲಿ ಪತ್ರಿಕಾಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು ಉಪಸ್ಥಿತರಿದ್ದರು.




**ಕೋಲಾರ** : ದಿನಾಂಕ 26.11.2021 ರಂದು ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸೌಹಾರ್ದ ಕಾಯ್ದೆಯ ಇತ್ತೀಚಿನ ತಿದ್ದುಪಡಿ ಹಾಗೂ ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲು ಮಾಡುವ ವಿಷಯದ ಕುರಿತು ಸಂಪರ್ಕ ಸಭೆ ಮತ್ತು ತರಬೇತಿ ಕಾರ್ಯಕ್ರಮದ ಕುರಿತು ಕೋಲಾರ ಜಿಲ್ಲಾ ಪತ್ರಕರ್ತರ ಭವನ, ಕೋಲಾರ ಇಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಪತ್ರಿಕಾಗೋಷ್ಠಿಯನ್ನು ನಡೆಸಿದರು.




**ಚಿಕ್ಕಬಳ್ಳಾಪುರ :** ದಿನಾಂಕ 27.11.2021 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸೌಹಾರ್ದ ಕಾಯ್ದೆಯ ಇತ್ತೀಚಿನ ತಿದ್ದುಪಡಿ ಹಾಗೂ ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲು ಮಾಡುವ ವಿಷಯದ ಕುರಿತು ಸಂಪರ್ಕ ಸಭೆ ಮತ್ತು ತರಬೇತಿ ಕಾರ್ಯಕ್ರಮದ ಕುರಿತು ಚಿಕ್ಕಬಳ್ಳಾಪುರ ಜಿಲ್ಲಾ ಪತ್ರಕರ್ತರ ಭವನ, ಚಿಕ್ಕಬಳ್ಳಾಪುರ ಇಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ರವರು ಪತ್ರಿಕಾಗೋಷ್ಠಿಯನ್ನು ನಡೆಸಿದರು.

## ಅಭಿನಂದನಾ ಕಾರ್ಯಕ್ರಮ ಹಾಗೂ ಸಂಪರ್ಕ ಸಭೆ



**ಶಿವಮೊಗ್ಗ :** ದಿನಾಂಕ 13.11.2021 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ,. ಹಾಗೂ ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ,. ಶಿವಮೊಗ್ಗ ಇವರ ಸಹಯೋಗದೊಂದಿಗೆ ಮಾನ್ಯ ಗೃಹ ಸಚಿವರಿಗೆ ಅಭಿನಂದನಾ ಕಾರ್ಯಕ್ರಮ ಹಾಗೂ ಇತ್ತೀಚಿನ ಸೌಹಾರ್ದ ಸಹಕಾರಿಯ ಕಾಯ್ದೆಯ ತಿದ್ದುಪಡಿ ವಿಷಯದ ಕುರಿತು ತರಬೇತಿ ಹಾಗೂ ಸಂಪರ್ಕ ಸಭೆಯನ್ನು ಸರ್ಕಾರಿ ನೌಕರರ ಭವನ, ಆರ್.ಟಿ.ಓ ರಸ್ತೆ, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಯುತ ಅರಗ ಜ್ಞಾನೇಂದ್ರ ರವರು, ಮಾನ್ಯ ಗೃಹ ಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು ತೀರ್ಥಹಳ್ಳಿ ಕೃಷಿಕರ ಸೌಹಾರ್ದ ಸಹಕಾರಿ, ಇವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ವಹಿಸಿದ್ದರು. ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಿ.ಎಸ್. ಸುರೇಶ್ ರವರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು, ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಹರಿಕೃಷ್ಣ ರವರು, ಉಪಸ್ಥಿತರಿದ್ದರು. ಕಾಯ್ಕ್ರಮದ ನಿರೂಪಣೆಯನ್ನು ಶ್ರೀ ಶಶಿಕುಮಾರ್ ಎಸ್. ಇವರು ನಡೆಸಿಕೊಟ್ಟರು. ಸೌಹಾರ್ದ ಕಾಯ್ದೆ ತಿದ್ದುಪಡಿ ಕುರಿತು ಉಪನ್ಯಾಸವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ಇವರು ನೀಡಿದರು. 68 ಸೌಹಾರ್ದ ಸಹಕಾರಿಗಳಿಂದ 140 ಪ್ರತಿನಿಧಿಗಳು ಭಾಗವಹಿಸಿದ್ದರು.

## ಸ್ನೇಹ ಸಂಗಮ ಸೌಹಾರ್ದ ಸಹಕಾರಿಯ ನೂತನ ಕಟ್ಟಡದ ಉದ್ಘಾಟನೆ



**ತುಮಕೂರು :** ದಿನಾಂಕ 13.11.2021 ರಂದು ತುಮಕೂರು ಜಿಲ್ಲೆಯ ಸ್ನೇಹ ಸಂಗಮ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಇದರ ನೂತನ ಕಟ್ಟಡದ ಉದ್ಘಾಟನೆಯನ್ನು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ನೆರವೇರಿಸಿದರು, ಇ-ಸ್ಟಾಂಪ್ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಸಮಾರಂಭ ಕಾರ್ಯಕ್ರಮದಲ್ಲಿ ಮಾನ್ಯ ಕಾನೂನು ಮತ್ತು ಸಂಸದೀಯ ಮತ್ತು ಸಣ್ಣ ನೀರಾವರಿ ಸಚಿವರಾದ ಶ್ರೀ ಜೆ ಸಿ ಮಾಧುಸ್ವಾಮಿರವರು, ಮಾನ್ಯ ತುಮಕೂರು ಲೋಕಸಭಾ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು, ಮಾನ್ಯ ತುಮಕೂರು ಶಾಸಕರಾದ ಶ್ರೀ ಜಿ ಬಿ ಜ್ಯೋತಿಗಣೇಶ್ ರವರು, ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿರವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯರವರು, ಮಾಜಿ ಸಚಿವರಾದ ಶ್ರೀ ಶಿವಣ್ಣನವರು ಹಾಗೂ ಸಹಕಾರಿಯ ಅಧ್ಯಕ್ಷರು ಮತ್ತು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಬಿ ಎಸ್ ಮಂಜುನಾಥ್ ರವರು ಇತರೆ ಗಣ್ಯರು ಉಪಸ್ಥಿತರಿದ್ದರು. ದಿವ್ಯ ಸಾನಿಧ್ಯವನ್ನು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಕರಿಬಸವ ದೇಶಿಕೇಂದ್ರ ಶಿವಯೋಗಿಶ್ವರ ಮಹಾಸ್ವಾಮಿಗಳು, ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ವಹಿಸಿದ್ದರು.

## ಚಿನ್ನ ಮೌಲ್ಯಮಾಪನ ಕುರಿತು ತರಬೇತಿ ಕಾರ್ಯಕ್ರಮ

**ಮೈಸೂರು :** ಮೈಸೂರು ಪ್ರಾಂತದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಆಡಳಿತ ಮಂಡಳಿ/ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗಾಗಿ ಚಿನ್ನ ಮೌಲ್ಯಮಾಪನದ ಕುರಿತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ 08.11.2021 & 09.11.2021 ರಂದು ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಶ್ರೀ ಮನು ಕೆ. ಆಚಾರ್ಯ (ಸಹಾಯಕ ಸಂಂ–ಯೋಜನಾಧಿಕಾರಿ, ಜೆ.ಎಸ್.ಎಸ್ ಅಡ್ವಾನ್ಸ್ಡ್ ಜ್ಯುವೆಲರಿ ಟೆಕ್ನೋಲಾಜಿ ಸೆಂಟರ್ ಬೆಂಗಳೂರು) ಇವರು ಚಿನ್ನಮೌಲ್ಯಮಾಪನದ ಕುರಿತು ಉಪನ್ಯಾಸ ನೀಡಿದರು. ಪ್ರಾಂತದ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್.ಎಸ್ ರವರು ಉಪಸ್ಥಿತರಿದ್ದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 171 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಳಗಾವಿ :** ದಿನಾಂಕ 11 ಮತ್ತು 12 ನವಂಬರ್ 2021 ರಂದು ಆನ್ ಲೈನ್ ಮೂಲಕ ಬೆಳಗಾವಿ ಪ್ರಾಂತದ ಆಭರಣ ಸಾಲ ವಿತರಿಸುವ ಸೌಹಾರ್ದ ಸಹಕಾರಿಗಳಿಗೆ ಚಿನ್ನ ಮೌಲ್ಯಮಾಪನ ತರಬೇತಿಯು ಜರುಗಿರುತ್ತದೆ. ತರಬೇತಿಯಲ್ಲಿ ಟಾಸ್ಕಫೋರ್ಸನ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಕಿರಿಯ ಅಧಿಕಾರಿಗಳಾದ ಶ್ರೀ ಸಂತೋಷ ಬಸಣ್ಣವರ ಮತ್ತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಮನು ಕೆ ಆಚಾರ್ಯ, ಜೆ.ಎಸ್.ಎಸ್. ಜ್ಯುವೆಲರಿ ಟೇಕ್ನೋಲಾಜಿ ಸಂಸ್ಥೆ, ಬೆಂಗಳೂರು. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 47 ಸೌಹಾರ್ದ ಸಹಕಾರಿಗಳಿಂದ 171 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಂಗಳೂರು :** ದಿನಾಂಕ 10.11.2021 ಹಾಗೂ 11.11.2021 ರಂದು ಬೆಂಗಳೂರು ಪ್ರಾಂತದ(ಚಿನ್ನದ ಸಾಲ ವಿತರಿಸುವ) ಸೌಹಾರ್ದ ಸಹಕಾರಿಗಳಿಗಾಗಿ ಚಿನ್ನದ ಮೌಲ್ಯಮಾಪನ (Gold Appraisal) ವಿಷಯದ ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮನು ಆಚಾರ್, ಅಸಿಸ್ಟೆಂಟ್ ಪ್ರಾಜೆಕ್ಟ್ ಆಫೀಸರ್, ಜೆ.ಎಸ್.ಎಸ್. ಜೆವೆಲರಿ ಟೆಕ್ನಾಲಜಿ ಸೆಂಟರ್, ಬೆಂಗಳೂರು, ಇವರು ಭಾಗವಹಿಸಿ ಸಹಕಾರಿಗಳಿಗೆ ಅಗತ್ಯ ಮಾಹಿತಿ ನೀಡಿದರು. ತರಬೇತಿಯ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ಇವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್. ಕೆ.ಎಮ್ ಹಾಗೂ ಅನಿಲ್ ಕುಮಾರ್. ಎಮ್ ಇವರು ನಡೆಸಿಕೊಟ್ಟರು. ತರಬೇತಿ ಕಾರ್ಯಕ್ರಮದಲ್ಲಿ 195 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

**ಕಲಬುರಗಿ :** ಕಲಬುರಗಿ ಪ್ರಾಂತದ ಸೌಹಾರ್ದ ಸಹಕಾರಿಗಳಿಗಾಗಿ ಚಿನ್ನ ಮೌಲ್ಯಮಾಪನ ಕುರಿತು (Gold Appraisal) ಆನ್ ಲೈನ್ ತರಬೇತಿ ಕಾರ್ಯಕ್ರಮವನ್ನು ದಿನಾಂಕ 09–11–2021 ಮತ್ತು 10–11–2021 ರಂದು ಆಯೋಜಿಸಲಾಗಿತ್ತು. ಈ ತರಬೇತಿ ಕಾರ್ಯಕ್ರಮದ ಮೊದಲನೆಯ ದಿನದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಇವರು ಭಾಗವಹಿಸಿ, ಸಹಕಾರಿಗಳು ಈ ತರಬೇತಿಯ ಉಪಯೋಗವನ್ನು ಎಲ್ಲಾ ಸಹಕಾರಿಗಳು ಪಡೆಯಬೇಕೆಂದು ತಿಳಿಸಿ ಸಂಯುಕ್ತ ಸಹಕಾರಿ ಇದೇ ಮೊದಲ ಬಾರಿಗೆ ಚಿನ್ನ ಮೌಲ್ಯಮಾಪನ ತರಬೇತಿಯನ್ನು ಆಯೋಜಿಸಿದೆ. ಇದು ಬಹಳ ಉತ್ತಮವಾದ ತರಬೇತಿಯಾಗಿದೆ ಎಂದು ಸಂತೋಷ ವ್ಯಕ್ತಪಡಿಸಿದರು.

ಮೊದಲನೇ ದಿನದಲ್ಲಿ 140 ಪ್ರತಿನಿಧಿಗಳು ಭಾಗವಹಿಸಿದರು. ಅದೇ ರೀತಿಯಾಗಿ ಎರಡನೇ ದಿನದಲ್ಲಿ 105 ಪ್ರತಿನಿಧಿಗಳು ಭಾಗವಹಿಸಿದರು. ಈ ಎರಡು ದಿನದ ತರಬೇತಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ ಹಿರೇಮಠ ಭಾಗವಹಿಸಿ, ಸಹಕಾರಿಗಳು ಸಾಲ ನೀಡುವ ಸಂದರ್ಭದಲ್ಲಿ ಸೂಕ್ತ ದಾಖಲಾತಿಗಳನ್ನು ಪಡೆಯಬೇಕು, ಕಾಯ್ದೆ ಮತ್ತು ನಿಯಮಗಳನ್ನು ಸರಿಯಾಗಿ ಪಾಲನೆ ಮಾಡಬೇಕು ಎಂದು ತಿಳಿಸಿ, ಭಾಗವಹಿಸಿದ ಎಲ್ಲ ಸಹಕಾರಿಗಳ ಸಕ್ರೀಯವಾಗಿ ಭಾಗವಹಿಸಿ ಯಶಸ್ವಿಗೊಳಿಸಲು ಕೋರಿದರು.

## ಶ್ರೀ ಬಿ.ಪಿ ಪ್ರೇಮಾನಂದ, ಸಹಾಯಕ ನಿಬಂಧಕರು, ವಸೂಲಾತಿ ಅಧಿಕಾರಿ, ಇವರಿಗೆ ಸನ್ಮಾನ

**ಬೆಳಗಾವಿ :** ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಶ್ರೀ ಬಿ.ಪಿ.ಪ್ರೇಮಾನಂದ, ಮಾನ್ಯ ವಸೂಲಾತಿ ಅಧಿಕಾರಿಗಳು – 441 ಹಾಗೂ ಸಹಕಾರಿಗಳ ಸಹಾಯಕ ನಿಬಂಧಕರು, ಬೆಂಗಳೂರು ಇವರನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಮಾನ್ಯರನ್ನು ಸ್ವಾಗತಿಸಿ ಸನ್ಮಾನಿಸಿದರು.

## ವಿ-ಕೇರ್ ಸೌಹಾರ್ದ ಸಹಕಾರಿಯ ನೂತನ ಶಾಖೆ ಉದ್ಘಾಟನೆ

**ಉತ್ತರ ಕನ್ನಡ :** ದಿನಾಂಕ 19–11–2021 ರಂದು ಹಳಿಯಾಳದಲ್ಲಿ ನೂತನವಾಗಿ ಪ್ರಾರಂಭಗೊಂಡ ವಿ–ಕೇರ್ ಸೌಹಾರ್ದ ಸಹಕಾರಿಯ ಶಾಖೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿ ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜಮೆಂಟ್ ಡಿಪ್ಲೋಮಾ ಕೋರ್ಸ್‌ನ ನಾಲ್ಕನೇ ತಂಡದ ಪ್ರವೇಶಕ್ಕೆ ನೋಂದಾವಣೆ

## Admission Notice for the Fourth Batch

## Diploma in Cooperation and Banking Management Course.

**ಆತ್ಮೀಯ ಸಹಕಾರಿ ಬಂಧುಗಳೇ,**

ಕರ್ನಾಟಕ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ತನ್ನದೇ ಆದ ವೈಶಿಷ್ಟತೆಯೊಂದಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಾಯ್ದೆಯಡಿಯಲ್ಲಿ ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ರಾಜ್ಯದ 5367 ಸೌಹಾರ್ದ ಸಹಕಾರಿಗಳ ನೊಂದಣಿಯಾಗಿ ಕಾರ್ಯನಿರ್ವಹಿಸುವುದರೊಂದಿಗೆ ಈ ಸೌಹಾರ್ದ ಸಹಕಾರಿ ಕ್ಷೇತ್ರದ ಘನತೆ ಹಾಗೂ ಗೌರವವನ್ನು ಹೆಚ್ಚಿಸುತ್ತಿರುವುದು ನಮ್ಮೆಲ್ಲರಿಗೂ ಸಂತೋಷದ ವಿಷಯವಾಗಿದೆ. ಅನೇಕ ಸವಾಲುಗಳನ್ನು ಎದುರುಸುತ್ತ ನಮ್ಮ ಗುಣಮಟ್ಟವನ್ನು ಕಾಯ್ದುಕೊಳ್ಳುವುದರಲ್ಲಿ ಸೌಹಾರ್ದ ಸಹಕಾರಿಗಳ ನಿರಂತರ ಪರಿಶ್ರಮ ಶ್ಲಾಘನೀಯ.

ರಾಜ್ಯದ ಸೌಹಾರ್ದ ಸಹಕಾರಿಗಳ ಗುಣಮಟ್ಟ ಉತ್ತಮ ಪಡಿಸುವುದಕ್ಕಾಗಿ ಸಂಯುಕ್ತ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆಯ ಅನುಮೋದನೆಯಂತೆ 6 ತಿಂಗಳ “ಸಹಕಾರ ಬ್ಯಾಂಕಿಂಗ್ ಮತ್ತು ಮೆನೇಜ್‌ಮೆಂಟ್” ಕೋರ್ಸ್ 4ನೇ ತಂಡ 1ನೇ ಜನವರಿ 2022ರಿಂದ ಪ್ರಾರಂಭವಾಗುತ್ತದೆ.

ತಮ್ಮ ಸಹಕಾರಿಯ ಸಿಬ್ಬಂದಿಯವರು ತಮ್ಮ ತಮ್ಮ ಸಹಕಾರಿಯಲ್ಲಿ / ಬ್ಯಾಂಕಿಂಗ್‌ನಲ್ಲಿದ್ದುಕೊಂಡೆ ಈ 6 ತಿಂಗಳ ಕೋರ್ಸ್‌ನ್ನು ಮಾಡಬಹುದಾಗಿದೆ. ಈ ಕೋರ್ಸ್ ಸಹಕಾರಿ ಕ್ಷೇತ್ರ ಮತ್ತು ಬ್ಯಾಂಕಿಂಗ್ ಮೆನೇಜಮೆಂಟ್‌ಗೆ ಸಂಬಂದಿಸಿದ ವಿಷಯಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದಾಗಿದೆ. ಪ್ರಥಮ ತಂಡದಲ್ಲಿ 181 ಅಭ್ಯರ್ಥಿಗಳು, 2ನೇ ತಂಡದಲ್ಲಿ 272 ಅಭ್ಯರ್ಥಿಗಳು ಹಾಗೂ 3ನೇ ತಂಡದಲ್ಲಿ 404 ಅಭ್ಯರ್ಥಿಗಳು ಪ್ರವೇಶ ಪಡೆದು ಕೋರ್ಸ್‌ನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಕೋರ್ಸಿನ ಬಗ್ಗೆ ತಮ್ಮ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

1ನೇ ಜನವರಿ 2022 ರಿಂದ ಪ್ರಾರಂಭವಾಗಲಿರುವ 4ನೇ ತಂಡದ ಕೋರ್ಸಿಗೆ ನಿಮ್ಮ ಸೌಹಾರ್ದ ಸಹಕಾರಿ/ಸೌಹಾರ್ದ ಸಹಕಾರಿ ಬ್ಯಾಂಕಿನಿಂದ ಈ ಕೋರ್ಸ್‌ಗೆ ಸಿಬ್ಬಂದಿಗಳನ್ನು ನೊಂದಾಯಿಸಲು ಕೋರುತ್ತೇವೆ.

**ಕೋರ್ಸ್ ಶುಲ್ಕ :** ರೂ. 5000/- (ಪ್ರವೇಶ ಹಾಗೂ ವ್ಯವಸ್ಥಾಪನಾ ಶುಲ್ಕ ರೂ 2000/- ಕೋರ್ಸ ಮೆಟಿರಿಯಲ್ ರೂ 2000/- ಪರೀಕ್ಷಾ ಫೀ 1000/) ಅಧ್ಯಯನ ಸಾಹಿತ್ಯ ಕಲಿಕೆ ಹಾಗೂ ಪರೀಕ್ಷೆಗಳನ್ನು ಕನ್ನಡ ಅಥವಾ ಇಂಗ್ಲಿಷ್ ಭಾಷೆಯ ಆಯ್ಕೆಗೆ ಅವಕಾಶವಿರುತ್ತದೆ.

2 ದಿನಗಳ 3 ಸಂಪರ್ಕ ವರ್ಗಗಳ ವೆಚ್ಚ ತಲಾ ರೂ 500 ಗಳಂತೆ ಒಟ್ಟು ರೂ 1500/- ಸಂಪರ್ಕ ವರ್ಗಗಳನ್ನು ಅಭ್ಯರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗೀಯ ಕೇಂದ್ರಗಳಲ್ಲಿ ಮತ್ತು ಸಂಯುಕ್ತ ಸಹಕಾರಿಯು ನಿಗದಿಪಡಿಸುವ ರಾಜ್ಯದ ಇತರೆ ಕೇಂದ್ರಗಳಲ್ಲಿಯೂ ಸಹ ನಡೆಸಲಾಗುವುದು. ಸಂಪರ್ಕ ವರ್ಗ ಸಮಯದಲ್ಲಿ ಅಭ್ಯರ್ಥಿಗಳ ಊಟ, ವಸತಿ ವ್ಯವಸ್ಥೆಯನ್ನು ಮಾಡಲಾಗುವುದು. 3 ಸಂಪರ್ಕ ವರ್ಗ ವೆಚ್ಚ ರೂ 1500/- ಪ್ರತ್ಯೇಕ. **ಒಟ್ಟು ಕೋರ್ಸ್‌ನ ಶುಲ್ಕ ರೂ. 7670/- (6500 + 18% ಜಿಎಸ್‌ಟಿ)**

**ಡಿಸೆಂಬರ 20 ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.**

ಪ್ರವೇಶ ಪತ್ರ ಹಾಗೂ ಕೋರ್ಸ ವಿವರಣಾ ಪತ್ರ ಪಡೆಯಲು ಸ್ವವಿವರ ಹಾಗೂ ರೂ. 100 ಗಳನ್ನು ಪೋಸ್ಟಲ್ ಆರ್ಡರ್‌ನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿ., ಬೆಂಗಳೂರು ಇವರ ಹೆಸರಿಗೆ ಪಡೆದು ಕೇಂದ್ರ ಕಛೇರಿಗೆ ಕಳುಹಿಸುವುದು.

ಹೆಚ್ಚಿನ ವಿವರಗಳಿಗೆ www.souharda.coop ಹಾಗೂ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳನ್ನು ಹಾಗೂ ಜಿಲ್ಲಾ ಸಂಯೋಜಕರನ್ನು ಸಂಪರ್ಕಿಸಬಹುದಾಗಿದೆ.

ಕೇಂದ್ರ ಕಛೇರಿ : 080-23378375-80, 23474408, 23573291, ಬೆಂಗಳೂರು ಪ್ರಾಂತೀಯ ಕಛೇರಿ: 080-23525546, ಮೈಸೂರು ಪ್ರಾಂತೀಯ ಕಛೇರಿ: 0821-2332299, ಬೆಳಗಾವಿ ಪ್ರಾಂತೀಯ ಕಛೇರಿ: 0831-2401551, ಕಲಬುರಗಿ ಪ್ರಾಂತೀಯ ಕಛೇರಿ: 08472-270222.

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿಯೇ ಈ ಡಿಪ್ಲೋಮಾ ಕೋರ್ಸ್ ಪ್ರಾರಂಭಿಸಿದೆ. ಆದ್ದರಿಂದ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರ ಕಾಯ್ದೆ ಇತ್ತೀಚಿನ ತಿದ್ದುಪಡಿಯಂತೆ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರು ತಮ್ಮ ಹುದ್ದೆಯಿಂದ ಮುಂಬಡ್ತಿ ಪಡೆಯಲು ಸಂಯುಕ್ತ ಸಹಕಾರಿಯ ನಿಗದಿತ ಕೋರ್ಸ್‌ಗಳನ್ನು ಮಾಡುವುದು ಕಡ್ಡಾಯವಾಗಿರುತ್ತದೆ. ಇದರ ಪೂರ್ಣ ಪ್ರಯೋಜನವನ್ನು ಪಡೆಯಲು ಕೋರಿದೆ.

**ವಂದನೆಗಳೊಂದಿಗೆ,**

ಸಹಿ/-
(ಶರಣಗೌಡ ಜಿ. ಪಾಟೀಲ)
**ವ್ಯವಸ್ಥಾಪಕ ನಿರ್ದೇಶಕರು**

# ಸಂಯುಕ್ತ ಸಹಕಾರಿಯ ಪ್ರಕಟಣೆ ಪುಸ್ತಕಗಳ ವಿವರ

| ಕ್ರ..ಸಂ. | ಪುಸ್ತಕದ ಹೆಸರು | ಬೆಲೆ |
|---|---|---|
| 1 | ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 | 100/– |
| 2 | The Karnataka Souharda Sahakari Act 1997 | 75/– |
| 3 | ಸೌಹಾರ್ದ ಸಹಕಾರಿ ಮಾರ್ಗದರ್ಶಿ | 15/– |
| 4 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಉಪವಿಧಿ | 30/– |
| 5 | ಸೌಹಾರ್ದ ಪತ್ತಿನ ಸಹಕಾರಿ ಮಾದರಿ ಉಪವಿಧಿ | 25/– |
| 6 | ಸೌಹಾರ್ದ ಸಹಕಾರಿಗಳ ಮಾದರಿ ಸಾಲ ಮತ್ತು ಠೇವಣಾತಿ ನಿಯಮಗಳು | 20/– |
| 7 | ಸೌಹಾರ್ದ ಸಹಕಾರಿಗಳಿಗಾಗಿ ನೌಕರರ ಮಾದರಿ ಸೇವಾ ನಿಯಮಗಳು | 15/– |
| 8 | ಸೌಹಾರ್ದ ಸಹಕಾರಿಗಳಿಗಾಗಿ ಮಾಹಿತಿ ಕೈಪಿಡಿ | 15/– |
| 9 | ಸಂಯುಕ್ತ ಸಹಕಾರಿ ಸಿಬ್ಬಂದಿ ಸೇವಾ ನಿಯಮಗಳು | 25/– |
| 10 | ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಾಕರ ಕೈಪಿಡಿ | 15/– |
| 11 | ಕರ್ನಾಟಕ ರಾಜ್ಯದ ವಿಶಿಷ್ಟ ಸಹಕಾರ ಸಂಸ್ಥೆಗಳು | 40/– |
| 12 | Special Co-opearative Societies of Karnataka | 25/– |
| 13 | ಇ–ಸ್ಟಾಂಪಿಂಗ್ ಮಾಹಿತಿ ಕೈಪಿಡಿ | 50/– |
| 14 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳು ಸಾರಾಂಶ | 100/– |
| 15 | ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಗಳು | 50/– |
| 16 | Karnataka High Court Judgements Related to Co-operative Sector | 200/– |
| 17 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿ ಹಕ್ಕು ಕಾಯ್ದೆಯನ್ವಯ ನೀಡಲಾದ ನ್ಯಾಯಾಲಯಗಳ ತೀರ್ಪುಗಳ ಸಾರಂಶ | 100/– |
| 18 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯಗಳ ತೀರ್ಪುಗಳ ಸಾರಂಶ ಭಾಗ – 2 | 100/– |
| 19 | ಸಹಕಾರಿಗಳಿಗೆ ಉಪಯುಕ್ತವಾದ ಮಾದರಿಗಳ ಕೈಪಿಡಿ | 50/– |
| 20 | ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಸಂಬಂಧಿತ ತೀಪುಗಳು | 120/– |
| 21 | Karnataka High Court Judgements Related to Co-operative Sector Vol -2 | 400/– |
| 22 | Supreme Court Judgement Related to Co-operative Sector Volume - 1 | 150/– |
| 23 | Supreme Court Judgement Related to Co-operative Sector Volume - 2 | 500/– |
| 24 | ಸ್ವಾಭಿಮಾನಿ ಸಹಕಾರಿ ವಾರ್ಷಿಕ ಚಂದಾ 1 ವರ್ಷಕ್ಕೆ | 100/– |
| 25 | ಸಹಕಾರ ಮತ್ತು ಬ್ಯಾಂಕಿಂಗ್ ಮೆನೆಜಮೆಂಟ್ ಡಿಪ್ಲೋಮಾ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ ಉತ್ತರಗಳು | 300/– |
| 26 | ವಿಷಯ–01 – ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ | 250/– |
| 27 | ವಿಷಯ–02 – ಸಹಕಾರಿ ಪತ್ತು ನಿರ್ವಹಣೆ | 250/– |
| 28 | ವಿಷಯ–03 – ಬ್ಯಾಂಕಿಂಗ್ ಮೂಲ ಮಾಹಿತಿ | 250/– |
| 29 | ವಿಷಯ–04 – ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು | 250/– |
| 30 | ವಿಷಯ–05 – ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ | 250/– |
| 31 | ವಿಷಯ–06 – ಮಾಹಿತಿ ತಂತ್ರಜ್ಞಾನ | 250/– |
| 32 | ಸಾಲ ವಸೂಲಾತಿ ಹಾಗೂ ದಾಖಲಾತಿಗಳ ನಿರ್ವಹಣೆ ಮತ್ತು ಭಾರತದ ಸಂವಿಧಾನ, ಅರ್ಥ, ಆಶಯ ಹಾಗೂ ಪ್ರಮುಖ ಅಂಶಗಳು | 150/– |

# ಸಹಕಾರ ಸಂಘಗಳು ಬ್ಯಾಂಕ್/ ಬ್ಯಾಂಕರ್/ ಬ್ಯಾಂಕಿಂಗ್ ಪದಗಳನ್ನು ಬಳಕೆ ಮಾಡದಿರುವ ಕುರಿತು ಆರ್.ಬಿ.ಐ ಸುತ್ತೋಲೆ

प्रेस प्रकाशनी PRESS RELEASE

भारतीय रिज़र्व बैंक
RESERVE BANK OF INDIA

वेबसाइट : www.rbi.org.in/hindi
Website : www.rbi.org.in
ई-मेल/email : helpdoc@rbi.org.in

संचार विभाग, केंद्रीय कार्यालय, एस.बी.एस.मार्ग, फोर्ट, मुंबई-400001
Department of Communication, Central Office, S.B.S.Marg, Fort, Mumbai-400001
फोन/Phone: 022- 22660502

Azadi Ka Amrit Mahotsav

November 22, 2021

**Caution against various Co-operative societies using the word "Bank" in their names**

The Banking Regulation Act, 1949 (BR Act, 1949) was amended by the Banking Regulation (Amendment) Act, 2020 (Act 39 of 2020) which came into force on September 29, 2020. Accordingly, co-operative societies cannot use the words "bank", "banker" or "banking" as part of their names, except as permitted under the provisions of BR Act, 1949 or by the Reserve Bank of India (RBI).

It has come to the notice of RBI that some Co-operative Societies are using the word "Bank" in their names in violation of Section 7 of the Banking Regulation Act, 1949 (As Applicable to Co-operative Societies) (the BR Act, 1949).

It has also come to the notice of RBI that some Co-operative societies are accepting deposits from non-members/ nominal members/ associate members which tantamount to conducting banking business in violation of the provisions of the BR Act, 1949.

Members of the public are hereby informed that such societies have neither been issued any licence under BR Act, 1949 nor are they authorized by the RBI for doing banking business. The insurance cover from Deposit Insurance and Credit Guarantee Corporation (DICGC) is also not available for deposits placed with these societies. Members of public are advised to exercise caution and carry out due diligence of such Co-operative societies if they claim to be a bank, and look for banking license issued by RBI before dealing with them.

(Yogesh Dayal)
Chief General Manager

Press Release: 2021-2022/1230

**ಗಮನಿಸಿ :** ಸಂಯುಕ್ತ ಸಹಕಾರಿಯ ಸುತ್ತೋಲೆ ಸಂಖ್ಯೆ ಸಂಸ/ಶಾ–368/ಶಾ/ಆರ್‌ಬಿಐ/2017–18 ದಿನಾಂಕ 27.04.2017 ರಲ್ಲಿ ಬ್ಯಾಂಕಿಂಗ್ ಲೈಸನ್ಸ್ ಪಡೆಯದಿರುವ ಸಹಕಾರಿ ಸಂಸ್ಥೆಗಳು ಬ್ಯಾಂಕ್/ಬ್ಯಾಂಕರ್/ಬ್ಯಾಂಕಿಂಗ್ ಪದಗಳನ್ನು ಉಪಯೋಗಿಸದಂತೆ ಸಂಯುಕ್ತ ಸಹಕಾರಿ ವತಿಯಿಂದ ಸುತ್ತೋಲೆಯನ್ನು ನೀಡಿರುವುದನ್ನು ಗಮನದಲ್ಲಿ ಇಟ್ಟುಕೊಂಡು ಅದರಂತೆ ಕಾರ್ಯನಿರ್ವಹಿಸಲು ಸೂಚಿಸಿದೆ.

# ಸನ್ನದು ಲೆಕ್ಕಪರಿಶೋಧಕರು, ಸನ್ನದು ಲೆಕ್ಕಪರಿಶೋಧಕರ ಪಾಲುದಾರ ಸಂಸ್ಥೆಗಳು, ಕಾಸ್ಟ್ ಅಕೌಂಟಂಟ್‌ಗಳು ಮತ್ತು ಕಾಸ್ಟ್ ಅಕೌಂಟೆಂಟ್ಗಳ ಪಾಲುದಾರ ಸಂಸ್ಥೆಗಳು ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸುವ ಸಂಬಂಧ ಸಹಕಾರ ಸಂಘಗಳ ಮಿತಿಯನ್ನು ನಿಗದಿ ಪಡಿಸುವ ಕುರಿತು ಸರ್ಕಾರದ ಸುತ್ತೋಲೆ

**ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಕಛೇರಿ, ಕರ್ನಾಟಕರಾಜ್ಯ ನಂ. 17, ಜಯನಿವಾಸ, ಶಂಕರಮಠರಸ್ತೆ, ಬಸವನಗುಡಿ, ಬೆಂಗಳೂರು-560004.**

ಸಂಖ್ಯೆ: ಲೆಪಶಾ/ಇತರೆ/ಸಲೆಮ/35/2021-22 ದಿನಾಂಕ: 06-11-2021

**ಸುತ್ತೋಲೆ**

ವಿಷಯ: ಸನ್ನದು ಲೆಕ್ಕಪರಿಶೋಧಕರು, ಸನ್ನದು ಲೆಕ್ಕಪರಿಶೋಧಕರ ಪಾಲುದಾರ ಸಂಸ್ಥೆಗಳು, ಕಾಸ್ಟ ಅಕೌಂಟಂಟಗಳು ಮತ್ತು ಕಾಸ್ಟ ಅಕೌಂಟೆಂಟ್‌ಗಳ ಪಾಲುದಾರ ಸಂಸ್ಥೆಗಳು ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸುವ ಸಂಬಂಧ ಸಹಕಾರ ಸಂಘಗಳ ಮಿತಿಯನ್ನು ನಿಗದಿ ಪಡಿಸುವ ಕುರಿತು.

ಉಲ್ಲೇಖ:
1. ಸರಕಾರದ ಸುತ್ತೋಲೆ ಸಂಖ್ಯೆ: ಸಇ 206 ಎಲೆಸೆ 2015 ದಿನಾಂಕ: 18.12.2015.
2. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಲೆಪಶಾ/ಇತರೆ/ಸಲೆಲೆಪನೆ/07/2021-22 ದಿನಾಂಕ: 29.07.2021.
3. ಭಾರತೀಯ ಸನ್ನದು ಲೆಕ್ಕ ಪರಿಶೋಧಕರ ಸಂಸ್ಥೆ (ಎಸ್.ಐ.ಆರ್.ಸಿ.) ಇವರ ಪತ್ರ ದಿನಾಂಕ : 24-10-2021.
4. ಕರ್ನಾಟಕ ರಾಜ್ಯ ಸನ್ನದು ಲೆಕ್ಕ ಪರಿಶೋಧಕರ ಸಂಘ (ರಿ.) ಬೆಂಗಳೂರು ಇವರ ಪತ್ರ ದಿನಾಂಕ: 24-10-2021

*****

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ ದಿನಾಂಕ: 11.02.2013 ರಂದು ಸಮಗ್ರ ತಿದ್ದುಪಡಿ ತರಲಾಗಿದ್ದು, ಅದರಂತೆ ಸನ್ನದು ಲೆಕ್ಕಪರಿಶೋಧಕರುಗಳು ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಸಹಕಾರ ಸಂಘಗಳ ಸಾಮಾನ್ಯ ನಿಕಾಯದಲ್ಲಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರಿಂದ ನಿರ್ವಹಿಸಲ್ಪಟ್ಟ ಅರ್ಹ ಲೆಕ್ಕ ಪರಿಶೋಧಕರ ಪ್ಯಾನಲ್‌ನಿಂದ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಳ್ಳಬೇಕಾಗಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 63(1)ರಂತೆ ಸಹಕಾರ ಸಂಘಗಳು ತನ್ನ ಸಾಮಾನ್ಯ ನಿಕಾಯದಲ್ಲಿ ಸನ್ನದು ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಂಡು ಸದರಿ ಮಾಹಿತಿಯನ್ನು, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 29-ಬಿ(8)ರಂತೆ, ಸಾಮಾನ್ಯ ನಿಕಾಯ ಜರುಗಿದ ಏಳು ದಿನಗಳೊಳಗಾಗಿ ಸಂಬಂಧಿಸಿದ ಜಿಲ್ಲೆಯ ಜಂಟಿ / ಉಪ ನಿರ್ದೇಶಕರಿಗೆ ಸಲ್ಲಿಸಬೇಕಾಗಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 63(8)ರನ್ವಯ ಶಾಸನಬದ್ಧ ಲೆಕ್ಕಪರಿಶೋಧಕರು, ಲೆಕ್ಕಪರಿಶೋಧನಾ ವರದಿಯನ್ನು ಲೆಕ್ಕಪರಿಶೋಧನೆ ಮುಕ್ತಾಯಗೊಳಿಸಿದ ದಿನಾಂಕದಿಂದ 30 ದಿನಗಳೊಳಗಾಗಿ ಅಥವಾ ಸೆಪ್ಟೆಂಬರ್ 1ನೇ ದಿನಾಂಕ ಇದರಲ್ಲಿ ಯಾವುದು ಮೊದಲು ಆ ದಿನಾಂಕದವರೆಗೆ ಸಹಕಾರ ಸಂಘಗಳಿಗೆ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಗೆ, ಸಹಕಾರ ಸಂಘಗಳ ನಿಬಂಧಕರಿಗೆ ಹಾಗೂ ಹಣಕಾಸಿನ ಸಂಸ್ಥೆಗೆ ಸಲ್ಲಿಸಬೇಕಾಗಿರುತ್ತದೆ.

ಕಳೆದ ಹಲವಾರು ವರ್ಷಗಳ ಲೆಕ್ಕಪರಿಶೋಧನಾ ಪ್ರಗತಿ ಮಾಹಿತಿಯನ್ನು ಪರಿಶೀಲಿಸಲಾಗಿ, ರಾಜ್ಯದಲ್ಲಿ ಕೆಲವು ಸನ್ನದು ಲೆಕ್ಕಪರಿಶೋಧಕರು ಪ್ರತಿ ವರ್ಷ 100 ರಿಂದ 200 ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸುತ್ತಿರುವುದು ಕಂಡು ಬಂದಿರುತ್ತದೆ. ಏಪ್ರಿಲ್ ಮಾಹೆಯಿಂದ ಆಗಸ್ಟ್ ಮಾಹೆಯವರೆಗೆ ಒಟ್ಟು 123 ಮಾನವ ದಿನಗಳು (ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ) ಲಭ್ಯವಾಗುತ್ತಿದ್ದು, ಈ ಅವಧಿಯಲ್ಲಿ ಒಬ್ಬ ಸನ್ನದು ಲೆಕ್ಕಪರಿಶೋಧಕರು 100 ರಿಂದ 200 ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಕೈಗೊಂಡಿರುವುದರಿಂದ ಒಂದು ಸಂಘದ ಲೆಕ್ಕಪರಿಶೋಧನೆಗೆ ಒಂದು ಅಥವಾ ಅದಕ್ಕಿಂತ ಕಡಿಮೆ ಮಾನವ ದಿನ ವಿನಿಯೋಗಿಸುತ್ತಿರುವುದು ಸ್ಪಷ್ಟವಾಗಿರುತ್ತದೆ. ಇಲಾಖಾ ಲೆಕ್ಕಪರಿಶೋಧಕರು, ಲೆಕ್ಕಪರಿಶೋಧನೆ ನಿರ್ವಹಿಸಲು ಲೆಕ್ಕಪರಿಶೋಧನಾ ಕಾರ್ಯಕ್ರಮ ಸಿದ್ಧಪಡಿಸಿ, ಪ್ರತಿ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಮಾನವ ದಿನಗಳನ್ನು ನಿಗದಿ ಪಡಿಸಿ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಂದ ಅನುಮೋದನೆ ಪಡೆದು, ಲೆಕ್ಕಪರಿಶೋಧನೆ ನಿರ್ವಹಿಸುತ್ತಿದ್ದಾರೆ. ಆದರೆ, ಸನ್ನದು ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಂಡಿರುವ ಸಹಕಾರ ಸಂಘಗಳ ಸಂಖ್ಯೆ, ಪ್ರತಿಯೊಂದು ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಬಳಸಲಿರುವ ಮಾನವ ದಿನಗಳು ಮತ್ತು ಲೆಕ್ಕಪರಿಶೋಧನೆಯನ್ನು ಯಾವ ದಿನಾಂಕದಂದು ಪ್ರಾರಂಭಗೊಳಿಸಿದೆ ಮತ್ತು ಮುಕ್ತಾಯಗೊಳಿಸಲಾಗಿದೆ ಎಂಬ ಮಾಹಿತಿ ಇಲಾಖೆಗೆ ಸಕಾಲದಲ್ಲಿ ಲಭ್ಯವಾಗುತ್ತಿಲ್ಲ. ಈ ಹಿನ್ನಲೆಯಲ್ಲಿ ಉಲ್ಲೇಖ (2)ರಲ್ಲಿ ನಿರ್ದೇಶನಾಲಯದಿಂದ ಸನ್ನದು ಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ಕಾರ್ಯಕ್ರಮ, ಮಾಹೆಯಾನ ಲೆಕ್ಕಪರಿಶೋಧನಾ ಕಾರ್ಯಕ್ರಮ ಮತ್ತು ಮಾಹೆಯಾನ ಲೆಕ್ಕಪರಿಶೋಧನೆ ಪೂರ್ಣಗೊಂಡ ನಂತರ ಮಾಹಿತಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಸಹಕಾರ ಸಂಸ್ಥೆಗಳಲ್ಲಿ ಬೃಹತ್ ಪ್ರಮಾಣದ ವಂಚನೆ ಹಾಗೂ ದುರುಪಯೋಗದ ಪ್ರಕರಣಗಳು ಕಂಡು ಬಂದಿರುತ್ತದೆ. ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ಸನ್ನದು ಲೆಕ್ಕಪರಿಶೋಧಕರು, ಪರಿಣಾಮಕಾರಿಯಾಗಿ ನಿರ್ವಹಿಸಲು ಕ್ರಮ ಕೈಗೊಳ್ಳಬೇಕಾಗಿರುವುದು ಅವಶ್ಯಕವಿರುತ್ತದೆ. ಇದೇ ರೀತಿ 'ಎ' ಶ್ರೇಣಿಯಲ್ಲಿ ಬರುವ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಕನಿಷ್ಟ 15 ರಿಂದ 20 ಮಾನವ ದಿನಗಳ ಅವಶ್ಯಕವಿರುತ್ತದೆ. ಅಲ್ಲದೇ, ಕೆಲವು 'ಎ' ಶ್ರೇಣಿಯ ಪ್ರಮುಖ ಸಂಸ್ಥೆಗಳ ವಹಿವಾಟಿನ ಪ್ರಮಾಣ ಹೆಚ್ಚಿಗೆ ಇದ್ದಲ್ಲಿ, ಇಂತಹ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಸಾಮಾನ್ಯವಾಗಿ ಕನಿಷ್ಟ 40 ರಿಂದ 50 ಮಾನವ ದಿನಗಳು ಅವಶ್ಯವಿರುತ್ತದೆ. ಸನ್ನದು ಲೆಕ್ಕಪರಿಶೋಧಕರುಗಳು ಅಥವಾ ಪಾಲುದಾರ ಸಂಸ್ಥೆ ಇಂಡಿವಿಷುಯಲ್, ಪ್ರೊಪ್ರೈಟರಿ ಅಥವಾ ಪಾಲುದಾರಿಕಾ ಸಂಸ್ಥೆಗಳು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 63(1)ರಂತೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ನಿರ್ವಹಿಸುತ್ತಿರುವ ಅರ್ಹ ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ. ಈ ಹಿನ್ನಲೆಯಲ್ಲಿ ಒಬ್ಬ ಸನ್ನದು ಲೆಕ್ಕಪರಿಶೋಧಕರು / ಪಾಲುದಾರ ಸನ್ನದು ಲೆಕ್ಕಪರಿಶೋಧಕರ ಸಂಸ್ಥೆ / ಕಾಸ್ಟ್ ಅಕೌಂಟೆಂಟ್ / ಕಾಸ್ಟ್ ಅಕೌಂಟೆಂಟ್ ಫರ್ಮ್‌ಗಳು ಏಪ್ರಿಲ್ ಮಾಹೆಯಿಂದ ಆಗಸ್ಟ್ ಮಾಹೆಯವರೆಗೆ ಲಭ್ಯವಾಗುವ ಕನಿಷ್ಟ 123 ಮಾನವ ದಿನಗಳಲ್ಲಿ ಈ ಕೆಳಗಿನಂತೆ ಗರಿಷ್ಟ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಕೈಗೊಳ್ಳಬಹುದಾಗಿದೆ. ಕನಿಷ್ಟ ಮಾನವ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸುವುದರಿಂದ ಲೆಕ್ಕಪರಿಶೋಧನೆಯ ಗುಣಮಟ್ಟ ಗಣನೀಯವಾಗಿ ಕಡಿಮೆಯಾಗಿರುತ್ತದೆ. ಇದರಿಂದಾಗಿ, ಸಹಕಾರ ಸಂಸ್ಥೆಗಳಲ್ಲಿ ಹಣದುರುಪಯೋಗದ ಪ್ರಕರಣಗಳು ನಿರಂತರವಾಗಿ ಹೆಚ್ಚಾಗುತ್ತಿವೆ. ಸನ್ನದು ಲೆಕ್ಕಪರಿಶೋಧಕರು / ಸನ್ನದು ಲೆಕ್ಕಪರಿಶೋಧಕರ ಪಾಲುದಾರ ಸಂಸ್ಥೆಗಳು 2013 ರಿಂದ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸುತ್ತಿದ್ದು, ಹೆಚ್ಚಿನ ಸಂಖ್ಯೆಯ ಸಹಕಾರ ಸಂಘಗಳ

d:\bck 16-12-2017(gayathri)\j a gayathri\mis\circular\ceiling limits ca.docx

ಲೆಕ್ಕಪರಿಶೋಧನೆಯನ್ನು ಕೆಲವೇ ಸನ್ನದು ಲೆಕ್ಕಪರಿಶೋಧಕರು / ಸನ್ನದು ಲೆಕ್ಕಪರಿಶೋಧಕರ ಪಾಲುದಾರ ಸಂಸ್ಥೆ / ಕಾಸ್ಟ್ ಅಕೌಂಟೆಂಟ್ / ಕಾಸ್ಟ್ ಅಕೌಂಟೆಂಟ್ ಫರ್ಮ್‌ಗಳು ನಿರ್ವಹಿಸುತ್ತಿರುವುದರಿಂದ ಇತರೆ ಸನ್ನದು ಲೆಕ್ಕಪರಿಶೋಧಕರಿಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಅವಕಾಶ ಲಭ್ಯವಾಗುತ್ತಿಲ್ಲ. ಕೆಲವೇ ಸನ್ನದು ಲೆಕ್ಕಪರಿಶೋಧಕರು / ಸನ್ನದು ಲೆಕ್ಕಪರಿಶೋಧಕರ ಪಾಲುದಾರ ಸಂಸ್ಥೆಗಳು / ಕಾಸ್ಟ್ ಅಕೌಂಟೆಂಟ್ / ಕಾಸ್ಟ್ ಅಕೌಂಟೆಂಟ್ ಫರ್ಮ್‌ಗಳು ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸುತ್ತಿರುವುದರಿಂದ ಇದರಲ್ಲಿ ಅವರ ವೈಯಕ್ತಿಕ ಹಿತಾಸಕ್ತಿ ಹಾಗೂ ಏಕಸ್ವಾಮ್ಯ ರೂಪುಗೊಳ್ಳುತ್ತಿರುವುದು ಸ್ಪಷ್ಟವಾಗುತ್ತದೆ. ಕೆಲವು ಸಹಕಾರ ಸಂಘಗಳು ಕೆಲವೇ ಸನ್ನದು ಲೆಕ್ಕಪರಿಶೋಧಕರನ್ನು ನಿಯತವಾಗಿ ಆಯ್ಕೆ ಮಾಡಿಕೊಳ್ಳುತ್ತಿರುವುದು ಕಂಡುಬಂದಿದೆ. ಇದರಿಂದಾಗಿ, ಸಹಕಾರ ಸಂಘಗಳ ಲೆಕ್ಕಪರಿಶೋಧನೆಯಲ್ಲಿ ಅಗತ್ಯ ಗುಣಮಟ್ಟ ಹಾಗೂ ಪಾರದರ್ಶಕತೆ ಇಲ್ಲದಂತಾಗಿರುವುದು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ. ಕೆಲವು ಸನ್ನದು ಲೆಕ್ಕಪರಿಶೋಧಕರುಗಳು ಅಥವಾ ಪಾಲುದಾರರ ಸಂಸ್ಥೆಗಳು / ಕಾಸ್ಟ್ ಅಕೌಂಟೆಂಟ್‌ಗಳು / ಕಾಸ್ಟ್ ಅಕೌಂಟೆಂಟ್ ಫರ್ಮ್‌ಗಳು ಆದ್ಯತೆಯ ಸನ್ನದು ಲೆಕ್ಕಪರಿಶೋಧಕರು ಅಥವಾ ಸನ್ನದು ಲೆಕ್ಕಪರಿಶೋಧಕರ ಪಾಲುದಾರ ಸಂಸ್ಥೆ / ಕಾಸ್ಟ್ ಅಕೌಂಟೆಂಟ್ / ಕಾಸ್ಟ್ ಅಕೌಂಟೆಂಟ್ ಫರ್ಮ್‌ಗಳಾಗಿದ್ದು ಅವರುಗಳಿಂದಲೇ ನಿಯಮಿತವಾಗಿ ಕೆಲವು ಸಹಕಾರ ಸಂಘಗಳು ಲೆಕ್ಕಪರಿಶೋಧನೆಯನ್ನು ನಿರ್ವಹಿಸಿಕೊಳ್ಳುತ್ತಿದ್ದು, ಇದರಿಂದಾಗಿ ಲೆಕ್ಕಪರಿಶೋಧನೆಯಲ್ಲಿ ಲೋಪದೋಷಗಳು ಬೆಳಕಿಗೆ ಬಾರದೇ ಕಾಲಾನುಕ್ರಮದಲ್ಲಿ ಸಂಸ್ಥೆಗಳಲ್ಲಿ ಬೃಹತ್ ಪ್ರಮಾಣದ ದುರುಪಯೋಗಗಳು ಬೆಳಕಿಗೆ ಬಂದಿರುತ್ತವೆ.

ಸಹಕಾರ ಸಂಘಗಳ ಮತ್ತು ಸನ್ನದು ಲೆಕ್ಕಪರಿಶೋಧಕರ ನಡುವಿನ ಈ ವ್ಯವಸ್ಥೆಯನ್ನು ನಿಯಂತ್ರಿಸಿ ಲೆಕ್ಕಪರಿಶೋಧನೆಯಲ್ಲಿ ಕ್ರಮಬದ್ಧತೆ ಹಾಗೂ ಪಾರದರ್ಶಕತೆ ಉಂಟು ಮಾಡಬೇಕಾಗಿರುತ್ತದೆ. ಕೇವಲ ಒಂದೇ ದಿನದಲ್ಲಿ ಲೆಕ್ಕಪರಿಶೋಧನೆ ಮುಕ್ತಾಯಗೊಳಿಸುವುದು / ಅಗತ್ಯ ಮಾನವ ದಿನಗಳನ್ನು ಬಳಸಿಕೊಳ್ಳದೆ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಪೂರ್ಣಗೊಳಿಸುವುದರಿಂದ ಅಗತ್ಯ ದಾಖಲೆಗಳನ್ನು ಸಂಪೂರ್ಣವಾಗಿ ಪರಿಶೀಲಿಸಲು ಸಾಧ್ಯವಾಗುವುದಿಲ್ಲ. ಇದರಿಂದ ಲೆಕ್ಕಪರಿಶೋಧನೆಯ ಮೂಲ ಉದ್ದೇಶ ವಿಫಲವಾಗುತ್ತದೆ. ಈ ಹಿನ್ನಲೆಯಲ್ಲಿ ಸನ್ನದು ಲೆಕ್ಕಪರಿಶೋಧಕರು ಹಾಗೂ ಸನ್ನದು ಲೆಕ್ಕಪರಿಶೋಧಕರ ಪಾಲುದಾರಿಕೆ ಸಂಸ್ಥೆ / ಕಾಸ್ಟ್ ಅಕೌಂಟೆಂಟ್ / ಕಾಸ್ಟ್ ಅಕೌಂಟೆಂಟ್ ಫರ್ಮ್‌ಗಳು ವಾರ್ಷಿಕವಾಗಿ ಲೆಕ್ಕಪರಿಶೋಧನೆ ಕೈಗೊಳ್ಳುವ ಸಹಕಾರ ಸಂಘಗಳ ಸಂಖ್ಯೆಯನ್ನು ನಿಗದಿಪಡಿಸುವುದರಿಂದ ಲೆಕ್ಕಪರಿಶೋಧನೆಯಲ್ಲಿ ಕ್ರಮಬದ್ಧತೆ ಹಾಗೂ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸಹಕಾರಿಯಾಗುತ್ತದೆ. ಇದರಿಂದ ಸಹಕಾರ ಸಂಘಗಳಲ್ಲಿ ಸಂಭವಿಸಬಹುದಾದ ಹಣದುರುಪಯೋಗವನ್ನು ನಿಯಂತ್ರಿಸಿ ಸಹಕಾರ ಸಂಘಗಳ ಆರ್ಥಿಕ ಪರಿಸ್ಥಿತಿಯನ್ನು ಸದೃಢಗೊಳಿಸಲು ಸಹಕಾರಿಯಾಗುತ್ತದೆ.

ಭಾರತೀಯ ಸನ್ನದು ಲೆಕ್ಕ ಪರಿಶೋಧಕರ ಸಂಸ್ಥೆ (ಎಸ್.ಐ.ಆರ್.ಸಿ.) ಹಾಗೂ ಕರ್ನಾಟಕ ರಾಜ್ಯ ಸನ್ನದು ಲೆಕ್ಕ ಪರಿಶೋಧಕರ ಸಂಘ(ರಿ.) ಬೆಂಗಳೂರು ಇವರು ಸಹ ಉಲ್ಲೇಖ (3) ಹಾಗೂ (4) ರನ್ವಯ ನಿರ್ದೇಶನಾಲಯಕ್ಕೆ ಮನವಿ ಸಲ್ಲಿಸಿ ರಾಷ್ಟ್ರೀಕೃತ ಬ್ಯಾಂಕುಗಳಂತೆ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಯಲ್ಲಿಯೂ ಪ್ರತಿ ಲೆಕ್ಕಪರಿಶೋಧಕರಿಗೂ ಸಂಖ್ಯೆಯ ಮಿತಿ ನಿಗದಿ ಪಡಿಸುವುದು ಸೂಕ್ತವೆಂದು ಹಾಗೂ ರಾಜ್ಯದ ಎಲ್ಲಾ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಸಂಖ್ಯೆ ಹಾಗೂ ಲಭ್ಯವಿರುವ ಲೆಕ್ಕಪರಿಶೋಧಕರ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ರೂಪರೇಷೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ ಸನ್ನದು ಲೆಕ್ಕಪರಿಶೋಧರಿಗೆ, ಸನ್ನದು ಲೆಕ್ಕಪರಿಶೋಧಕರ ಪಾಲುದಾರ ಸಂಸ್ಥೆಗಳಿಗೆ, ಕಾಸ್ಟ ಅಕೌಂಟೆಂಟ್‌ಗಳಿಗೆ ಮತ್ತು ಕಾಸ್ಟ ಅಕೌಂಟೆಂಟ್‌ಗಳ ಪಾಲುದಾರ ಸಂಸ್ಥೆಗಳಿಗೆ ಪ್ರತಿ

d:\bck 16-12-2017(gayathri)\j a gayathri\mis\circular\ceiling limits ca.docx

4

ವರ್ಷ ಏಪ್ರಿಲ್ ಮಾಹೆಯಿಂದ ಆಗಸ್ಟ್ ಮಾಹೆಗಳವರೆಗೆ ಲೆಕ್ಕಪರಿಶೋಧನೆ ಕೈಗೊಳ್ಳಬಹುದಾದ ಸಹಕಾರ ಸಂಘಗಳ ಸಂಖ್ಯೆಯನ್ನು ನಿಗದಿಪಡಿಸುವುದು ಸೂಕ್ತವಾಗಿದೆ.

ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ಪರಿಣಾಮಕಾರಿಯಾಗಿಸಲು ಉಲ್ಲೇಖ (1) ರ ಸುತ್ತೋಲೆಯಲ್ಲಿ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಸಹಕಾರ ಸಂಘಗಳ ಕಾಯ್ದೆ ಕಲಂ 2ಎಎ ರಂತೆ ಹೊಂದಿರುವ ಅಧಿಕಾರ ಹಾಗೂ ಜವಾಬ್ದಾರಿಯನ್ನು ಸ್ಪಷ್ಟಪಡಿಸಿದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 2ಎಎ ರನ್ವಯ **"ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು, ಸಹಕಾರ ಲೆಕ್ಕಪರಿಶೋಧನಾ ಹೆಚ್ಚುವರಿ ನಿರ್ದೇಶಕರು, ಸಹಕಾರ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಸಹಕಾರ ಲೆಕ್ಕಪರಿಶೋಧನಾ ಉಪ ನಿರ್ದೇಶಕರು ಮತ್ತು ಸಹಕಾರ ಲೆಕ್ಕಪರಿಶೋಧನಾ ಸಹಾಯಕ ನಿರ್ದೇಶಕರು –**

(1) ರಾಜ್ಯ ಸರ್ಕಾರವು, ಒಬ್ಬ ವ್ಯಕ್ತಿಯನ್ನು ರಾಜ್ಯ ಸಹಕಾರ ಸಂಘಗಳ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನನ್ನಾಗಿ ನೇಮಕ ಮಾಡಬಹುದು.

(2) ರಾಜ್ಯಸರ್ಕಾರವು (ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ) ನೆರವಾಗಲು(ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಹೆಚ್ಚುವರಿ ನಿರ್ದೇಶಕನನ್ನು) ಮತ್ತು ತನಗೆ ಯುಕ್ತವೆಂದು ಕಂಡುಬರುವಷ್ಟು ಜನ(ಸಹಕಾರ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರನ್ನು) ಸಹಕಾರ ಲೆಕ್ಕಪರಿಶೋಧನಾ ಉಪ ನಿರ್ದೇಶಕರನ್ನು) ಮತ್ತು (ಸಹಕಾರ ಲೆಕ್ಕಪರಿಶೋಧನಾ ಸಹಾಯಕ ನಿರ್ದೇಶಕರನ್ನು) ನೇಮಿಸಬಹುದು.

(3) (ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ) ನೆರವಾಗಲು ರಾಜ್ಯ ಸರ್ಕಾರವು ತಾನು ಯುಕ್ತವೆಂದು ಭಾವಿಸುವಂಥ ಪದನಾಮವುಳ್ಳ ಇತರ ಅಧಿಕಾರಿಗಳನ್ನು ನೇಮಿಸಬಹುದು.

(4) ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ಈ ಅಧಿನಿಯಮವನ್ನು ಜಾರಿಗೆ ತರಲು ನಿಯೋಜಿತರಾದ ಎಲ್ಲಾ ಅಧಿಕಾರಿಗಳು ಮತ್ತು ವ್ಯಕ್ತಿಗಳು, ರಾಜ್ಯ ಸರ್ಕಾರದ ಮತ್ತು (ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನ) ಅಧೀಕ್ಷಣೆಗೆ, ನಿರ್ದೇಶನಕ್ಕೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಅಧಿಕಾರಿಯು ಯಾವ ಅಧಿಕಾರಿಗೆ ಅಥವಾ ಅಧಿಕಾರಿಗಳಿಗೆ ಅಧೀನರಾಗಿರತಕ್ಕುದೆಂಬುದನ್ನು ರಾಜ್ಯ ಸರ್ಕಾರವು ನಿರ್ಧರಿಸತಕ್ಕುದು.

ಪರಂತು, ಈ ಉಪ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರದಲ್ಲಿ ಮತ್ತು (ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರಲ್ಲಿ) ನಿಹಿತವಾದ ಅಧಿಕಾರವು ಮೂಲ ಪ್ರಾಧಿಕಾರದಂತೆ ಆಗಲೀ ಅಥವಾ ಅಪೀಲು ಪ್ರಾಧಿಕಾರದಂತೆ ಆಗಲೀ ಯಾವುದೇ ಪ್ರಾಧಿಕಾರವು, ಯಾವುದೇ ಅರೆ ನ್ಯಾಯಿಕ ಪ್ರಕಾರ್ಯಗಳನ್ನು ಚಲಾಯಿಸುವಾಗ ಹೊಂದಿರುವ ವಿವೇಚನೆಯಲ್ಲಿ, ಹಸ್ತಕ್ಷೇಪ ಮಾಡುವಂತೆ ಚಲಾಯಿಸಲ್ಪಡತಕ್ಕದ್ದಲ್ಲ.

(5) ರಾಜ್ಯ ಸರ್ಕಾರವು, ಸಹಕಾರ ಸಂಘಗಳ (ಸಹಕಾರ ಲೆಕ್ಕಪರಿಶೋಧನಾ ಅಡಿಷನಲ್ ನಿರ್ದೇಶಕನಾಗಿ,) (ಸಹಕಾರ ಲೆಕ್ಕಪರಿಶೋಧನಾ ಸಹ ನಿರ್ದೇಶಕನಾಗಿ,) (ಸಹಕಾರ ಲೆಕ್ಕಪರಿಶೋಧನಾ ಉಪ ನಿರ್ದೇಶಕನಾಗಿ,) (ಸಹಕಾರ ಲೆಕ್ಕಪರಿಶೋಧನಾ ಸಹಾಯಕ ನಿರ್ದೇಶಕನಾಗಿ,) ನೇಮಕಗೊಂಡ ಯಾರೇ ವ್ಯಕ್ತಿಗೆ, ಈ ಅಧಿನಿಯಮದ ಮೇರೆಗೆ (ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕ) ನಿಗಿರುವ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ವಹಿಸಿಕೊಡಬಹುದು.

d:\bck 16-12-2017(gayathri)\j a gayathri\mis\circular\ceiling limits ca.docx

**(6) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಪ್ರತಿಯೊಂದು ಸಹಕಾರ ಸಂಘದ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ವಿಷಯಗಳು ರಾಜ್ಯದ (ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನ) ಮೇಲ್ವಿಚಾರಣೆಗೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕುದು.**

ಈ ಹಿನ್ನಲೆಯಲ್ಲಿ ಸನ್ನದು ಲೆಕ್ಕಪರಿಶೋಧಕರು ಹಾಗೂ ಸನ್ನದು ಲೆಕ್ಕಪರಿಶೋಧಕರ ಪಾಲುದಾರ ಸಂಸ್ಥೆಗಳು / ಕಾಸ್ಟ್ ಅಕೌಂಟೆಂಟ್ / ಕಾಸ್ಟ್ ಅಕೌಂಟೆಂಟ್ ಫರ್ಮ್‌ಗಳು ನಿರ್ವಹಿಸಬಹುದಾದ ಸಹಕಾರ ಸಂಘಗಳ ಸಂಖ್ಯೆಯನ್ನು ಕೆಳಕಂಡಂತೆ ನಿಗದಿಪಡಿಸಲಾಗಿದ್ದು, ಸಹಕಾರ ಸಂಘಗಳು ಸನ್ನದು ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಳ್ಳುವ ಪೂರ್ವದಲ್ಲಿ ಸಂಬಂಧಿಸಿದ ಲೆಕ್ಕಪರಿಶೋಧಕರಿಂದ ಲಿಖಿತವಾಗಿ ಎಷ್ಟು ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಆಯ್ಕೆಯಾಗಿರುತ್ತಾರೆ ಎಂಬ ಬಗ್ಗೆ ಮಾಹಿತಿ ಪಡೆದು, ಈ ಸುತ್ತೋಲೆಯಂತೆ ನಿಗದಿಪಡಿಸಿರುವ ಸಂಖ್ಯೆಗಿಂತಲೂ ಹೆಚ್ಚಾಗಿದ್ದಲ್ಲಿ, ಅಂತಹ ಸನ್ನದು ಲೆಕ್ಕ ಪರಿಶೋಧಕರನ್ನು ತಮ್ಮ ಸಹಕಾರ ಸಂಘದ ಲೆಕ್ಕಪರಿಶೋಧನೆಗೆ ಕಡ್ಡಾಯವಾಗಿ ಪರಿಗಣಿಸದಂತೆ ಮತ್ತು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ನಿರ್ವಹಿಸುವ ಅರ್ಹ ಲೆಕ್ಕಪರಿಶೋಧಕರ ಪಟ್ಟಿಯಿಂದ ಬೇರೊಬ್ಬ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಳ್ಳಬೇಕಿರುತ್ತದೆ. ಇದೇ ರೀತಿ ಸನ್ನದು ಲೆಕ್ಕಪರಿಶೋಧಕರು ತಾವು ಆಯ್ಕೆಗೊಂಡಿರುವ ಒಟ್ಟು ಸಹಕಾರ ಸಂಘಗಳ ಮಾಹಿತಿಯನ್ನು ಸಂಬಂಧಿಸಿದ ಜಿಲ್ಲೆಯ ಜಂಟಿ / ಉಪ ನಿರ್ದೇಶಕರಿಗೆ ಪ್ರತಿ ವರ್ಷ ಅಕ್ಟೋಬರ್ 31ನೇ ದಿನಾಂಕದೊಳಗಾಗಿ ತಪ್ಪದೆ ಸಲ್ಲಿಸಿ ಲೆಕ್ಕಪರಿಶೋಧನಾ ಕಾರ್ಯಕ್ರಮ ರೂಪಿಸಿ ಸಂಬಂಧಿಸಿದ ಜಿಲ್ಲೆಯ ಜಂಟಿ / ಉಪ ನಿರ್ದೇಶಕರಿಗೆ ಉಲ್ಲೇಖ (2)ರ ಸುತ್ತೋಲೆಯಂತೆ ಸಲ್ಲಿಸುವುದು. ಈ ಸುತ್ತೋಲೆಯನ್ನು ದಿನಾಂಕ:06-11-2021ರಂದು ಹೊರಡಿಸಿರುವ ಹಿನ್ನಲೆಯಲ್ಲಿ 2021-22ನೇ ಸಾಲಿನ ಆಯ್ಕೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಲ್ಲಿಸುವ ಅವಧಿಯನ್ನು ದಿನಾಂಕ:31-12-2021ರವರೆಗೆ ವಿಸ್ತರಿಸಲಾಗಿದೆ. ಒಂದು ವೇಳೆ ಸನ್ನದು ಲೆಕ್ಕಪರಿಶೋಧಕರಿಗೆ ಮಾಹಿತಿ ಇಲ್ಲದೇ ಈ ಸುತ್ತೋಲೆಯಲ್ಲಿ ನಿಗದಿಪಡಿಸಿರುವ ಸಹಕಾರ ಸಂಘಗಳಿಗಿಂತ ಹೆಚ್ಚಿನ ಸಂಖ್ಯೆಯ ಸಹಕಾರ ಸಂಘಗಳು ಅವರನ್ನು ಆಯ್ಕೆ ಮಾಡಿಕೊಂಡಿದ್ದಲ್ಲಿ, ಅಂತಹ ಸಂದರ್ಭದಲ್ಲಿ ಮೊದಲು ಆಯ್ಕೆಯಾದ ನಿಗದಿತ ಸಂಖ್ಯೆಯ ಸಹಕಾರ ಸಂಘಗಳ ಲೆಕ್ಕ ಪರಿಶೋಧನೆಗೆ ಕ್ರಮವಹಿಸುವುದು. ಉಳಿದ ಹೆಚ್ಚಿನ ಸಹಕಾರ ಸಂಘಗಳ ಮಾಹಿತಿಯನ್ನು ಸಂಬಂಧಿಸಿದ ಜಿಲ್ಲಾ ಜಂಟಿ / ಉಪ ನಿರ್ದೇಶಕರಿಗೆ ಪ್ರತಿ ವರ್ಷಅಕ್ಟೋಬರ್ 31ನೇ ದಿನಾಂಕದೊಳಗಾಗಿ ತಪ್ಪದೆ ಸಲ್ಲಿಸುವುದು.

ಸನ್ನದು ಲೆಕ್ಕಪರಿಶೋಧರಿಗೆ, ಸನ್ನದು ಲೆಕ್ಕಪರಿಶೋಧಕರ ಪಾಲುದಾರ ಸಂಸ್ಥೆಗಳಿಗೆ, ಕಾಸ್ಟ್ ಅಕೌಂಟೆಂಟ್‌ಗಳಿಗೆ ಮತ್ತು ಕಾಸ್ಟ ಅಕೌಂಟೆಂಟ್‌ಗಳ ಪಾಲುದಾರ ಸಂಸ್ಥೆಗಳಿಗೆ ಏಪ್ರಿಲ್ ರಿಂದ ಆಗಸ್ಟ್ ಮಾಹೆಗಳಿಗೆ ಲೆಕ್ಕಪರಿಶೋಧನೆ ಕೈಗೊಳ್ಳಬಹುದಾದ ಶ್ರೇಣಿವಾರು ಸಂಸ್ಥೆಗಳಿಗೆ ಬಳಸಿಕೊಳ್ಳಬಹುದಾದ ಕನಿಷ್ಠ ಮಾನವ ದಿನಗಳು ಮತ್ತು ಗರಿಷ್ಠ ಸಹಕಾರ ಸಂಘಗಳ ಮಿತಿ ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

**1) 'ಎ' ಶ್ರೇಣಿಯ ಶಾಸನಬದ್ಧ ಲೆಕ್ಕ ಪರಿಶೋಧಕರಿಗೆ :**

| ಕ್ರ. ಸಂ. | ಸಹಕಾರ ಸಂಘಗಳ ಶ್ರೇಣಿ | ಲೆಕ್ಕಪರಿಶೋಧನೆ ಕೈಗೊಳ್ಳ ಬಹುದಾದಗರಿಷ್ಠ ಸಂಘಗಳು | ಲೆಕ್ಕಪರಿಶೋಧನೆಗೆ ಅವಶ್ಯ ಇರುವ ಅಂದಾಜು ಮಾನವ ದಿನಗಳು |
|---|---|---|---|
| 1 | ಎ | 03 | 60 |
| 2 | ಬಿ | 05 | 40 |
| 3 | ಸಿ | 08 | 24 |
| | | **18** | **124** |

d:\bck 16-12-2017(gayathri)\j a gayathri\mis\circular\ceiling limits ca.docx

'ಎ' ಶ್ರೇಣಿಯ ಶಾಸನಬದ್ಧ ಲೆಕ್ಕ ಪರಿಶೋಧಕರು ಕೇವಲ 'ಎ' ಶ್ರೇಣಿಯ ಸಹಕಾರಿ ಸಂಘಗಳ ಲೆಕ್ಕಪರಿಶೋಧನೆ ಕೈಗೊಳ್ಳಲು ಇಚ್ಛಿಸಿದಲ್ಲಿ ಮತ್ತು ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಯಲ್ಲಿ ಆಯ್ಕೆಯಾದಲ್ಲಿ ಅವರು 'ಎ' ಶ್ರೇಣಿಯಗರಿಷ್ಠ 05 ಸಹಕಾರಿ ಸಂಘಗಳ ಲೆಕ್ಕಪರಿಶೋಧನೆ ಕೈಗೊಳ್ಳಬಹುದಾಗಿದೆ.

'ಎ' ಶ್ರೇಣಿಯಸನ್ನದು ಲೆಕ್ಕಪರಿಶೋಧಕರನ್ನು ಹಾಗೂ ಸನ್ನದು ಲೆಕ್ಕಪರಿಶೋಧಕರ ಪಾಲುದಾರ ಸಂಸ್ಥೆಗಳನ್ನು 'ಎ' ಹಾಗೂ 'ಬಿ' ಶ್ರೇಣಿಯಸಹಕಾರಸಂಘಗಳು ನೇಮಕ ಮಾಡಿಕೊಳ್ಳದೆ ಇದ್ದಲ್ಲಿ, ಅವರು 'ಸಿ' ಶ್ರೇಣಿಯ ಗರಿಷ್ಠ 41 ಸಹಕಾರ ಸಂಘಗಳ ಲೆಕ್ಕಪರಿಶೋಧನೆನಿರ್ವಹಿಸಬಹುದಾಗಿದೆ.

**2) 'ಬಿ' ಶ್ರೇಣಿಯ ಶಾಸನಬದ್ಧ ಲೆಕ್ಕ ಪರಿಶೋಧಕರಿಗೆ :**

| ಕ್ರ. ಸಂ. | ಸಹಕಾರ ಸಂಘಗಳ ಶ್ರೇಣಿ | ಲೆಕ್ಕಪರಿಶೋಧನೆ ಕೈಗೊಳ್ಳ ಬಹುದಾದಗರಿಷ್ಠ ಸಂಘಗಳು | ಲೆಕ್ಕಪರಿಶೋಧನೆಗೆ ಅವಶ್ಯ ಇರುವ ಅಂದಾಜು ಮಾನವ ದಿನಗಳು |
|---|---|---|---|
| 1 | ಬಿ | 05 | 40 |
| 2 | ಸಿ | 28 | 84 |
| | | **35** | **124** |

"ಎ" ಅಥವಾ 'ಬಿ' ಶ್ರೇಣಿಯ ಶಾಸನಬದ್ಧ ಲೆಕ್ಕಪರಿಶೋಧಕರು ಕೇವಲ "ಬಿ" ಶ್ರೇಣಿಯ ಸಹಕಾರಿ ಸಂಘಗಳ ಲೆಕ್ಕಪರಿಶೋಧನೆ ಕೈಗೊಳ್ಳಲು ಇಚ್ಛಿಸಿದಲ್ಲಿ ಮತ್ತು ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಯಲ್ಲಿ ಆಯ್ಕೆಯಾದಲ್ಲಿ ಅವರು 'ಬಿ' ಶ್ರೇಣಿಯ ಗರಿಷ್ಠ 12 ಸಹಕಾರಿ ಸಂಘಗಳ ಲೆಕ್ಕಪರಿಶೋಧನೆ ಕೈಗೊಳ್ಳಬಹುದಾಗಿದೆ.

'ಬಿ' ಶ್ರೇಣಿಯ ಲೆಕ್ಕಪರಿಶೋಧಕರನ್ನು ಹಾಗೂ ಸನ್ನದು ಲೆಕ್ಕಪರಿಶೋಧಕರ ಪಾಲುದಾರ ಸಂಸ್ಥೆಗಳಿಗೆ / ಕಾಸ್ಟ್ ಅಕೌಂಟೆಂಟ್ / ಕಾಸ್ಟ್ ಅಕೌಂಟೆಂಟ್ ಫರ್ಮ್‌ಗಳನ್ನು 'ಬಿ' ಶ್ರೇಣಿಯ ಸಹಕಾರ ಸಂಘಗಳು ನೇಮಕ ಮಾಡಿಕೊಳ್ಳದೆ ಇದ್ದಲ್ಲಿ, ಅವರು 'ಸಿ' ಶ್ರೇಣಿಯ ಗರಿಷ್ಠ 41 ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಕೈಗೊಳ್ಳಬಹುದಾಗಿದೆ.

ಒಂದು ವೇಳೆ "ಎ" ಮತ್ತು "ಬಿ" ಶ್ರೇಣಿಯ ಸಹಕಾರ ಸಂಘಗಳು ಮೇಲೆ ನಿಗದಿಪಡಿಸಿರುವಂತೆ ಸನ್ನದು ಲೆಕ್ಕಪರಿಶೋಧಕರು / ಪಾಲುದಾರ ಸಂಸ್ಥೆ / ಕಾಸ್ಟ್ ಅಕೌಂಟೆಂಟ್ / ಕಾಸ್ಟ್ ಅಕೌಂಟೆಂಟ್ ಫರ್ಮ್‌ಗಳನ್ನು ಆಯ್ಕೆ ಮಾಡಿಕೊಳ್ಳದಿದ್ದಲ್ಲಿ ಅಥವಾ ಒಂದು ಅಥವಾ ಎರಡು ಸಹಕಾರ ಸಂಘಗಳನ್ನು ಆಯ್ಕೆ ಮಾಡಿಕೊಂಡಲ್ಲಿ ಆ ಸಂಬಂಧ ಬಾಕಿ ಉಳಿಯಬಹುದಾದ ಮಾನವ ದಿನಗಳನ್ನು "ಬಿ" ಅಥವಾ "ಸಿ" ಶ್ರೇಣಿಯ ಸಹಕಾರ ಸಂಘಗಳು ಆಯ್ಕೆಯಾದಲ್ಲಿ ಅವುಗಳ ಲೆಕ್ಕಪರಿಶೋಧನೆ ನಿರ್ವಹಿಸಬಹುದಾಗಿದ್ದು, ಯಾವುದೇ ಸಂದರ್ಭದಲ್ಲಿ ಮೇಲಿನ ಕೋಷ್ಟಕಗಳಲ್ಲಿ ಲಭ್ಯವಾಗುವ ಮಾನವ ದಿನಗಳೊಂದಿಗೆ ಒಟ್ಟಾರೆಯಾಗಿ ಗರಿಷ್ಠ 41 ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸುವ ಮಿತಿಯನ್ನು ನಿಗದಿಪಡಿಸಲಾಗಿದೆ.

**3) 'ಸಿ' ಶ್ರೇಣಿಯ ಶಾಸನಬದ್ಧ ಲೆಕ್ಕ ಪರಿಶೋಧಕರಿಗೆ :**

| ಕ್ರ. ಸಂ. | ಸಹಕಾರ ಸಂಘಗಳ ಶ್ರೇಣಿ | ಲೆಕ್ಕಪರಿಶೋಧನೆ ಕೈಗೊಳ್ಳ ಬಹುದಾದ ಗರಿಷ್ಠ ಸಂಘಗಳು | ಲೆಕ್ಕಪರಿಶೋಧನೆಗೆ ಅವಶ್ಯ ಇರುವ ಅಂದಾಜು ಮಾನವ ದಿನಗಳು |
|---|---|---|---|
| 2 | ಸಿ | 41 | 124 |
| | | **41** | **124** |

d:\bck 16-12-2017(gayathri)\j a gayathri\mis\circular\ceiling limits ca.docx

7

ಮೇಲ್ಕಂಡಂತೆ ನಿಗದಿಪಡಿಸಲಾಗಿರುವ ಸಹಕಾರ ಸಂಘಗಳ ಸಂಖ್ಯೆಯು Individual, ಪ್ರೊಪ್ರೈಟರಿ ಹಾಗೂ ಪಾಲುದಾರ ಸಂಸ್ಥೆಗಳಿಗೆ ಅನ್ವಯವಾಗುತ್ತದೆ. ಸನ್ನದು ಲೆಕ್ಕಪರಿಶೋಧಕರ ಪಾಲುದಾರ ಸಂಸ್ಥೆಗಳು ಒಂದಕ್ಕಿಂತ ಹೆಚ್ಚು ಅರ್ಹ ಸನ್ನದು ಲೆಕ್ಕಪರಿಶೋಧಕರನ್ನು ಹೊಂದಿದ್ದರೂ ಸಹಾ ಮೇಲೆ ನಿಗದಿಪಡಿಸಲಾಗಿರುವ ಸಂಖ್ಯೆಯ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗಳಗಿಂತ ಹೆಚ್ಚಿನ ಸಂಖ್ಯೆಯ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸುವಂತಿಲ್ಲ.

**ಈ ಸೂಚನೆಗಳು 2021-22ನೇ ಸಾಲಿನಿಂದಲೇ ಜಾರಿಗೊಳ್ಳುತ್ತಿದ್ದು, ಲೆಕ್ಕಪರಿಶೋಧಕರಆಯ್ಕೆ ಪ್ರಕ್ರಿಯೆಗೆ ಅನ್ವಯವಾಗಿರುತ್ತದೆ. ಆದುದರಿಂದಸಂಬಂಧಿಸಿದ ಎಲ್ಲಾ ಜಿಲ್ಲಾ ಜಂಟಿ / ಉಪ ನಿರ್ದೇಶಕರು / ಸನ್ನದು ಲೆಕ್ಕಪರಿಶೋಧಕರು, ಸನ್ನದು ಲೆಕ್ಕಪರಿಶೋಧಕರ ಪಾಲುದಾರ ಸಂಸ್ಥೆಗಳು / ಕಾಸ್ಟ್ ಅಕೌಂಟೆಂಟ್ / ಕಾಸ್ಟ್ ಅಕೌಂಟೆಂಟ್ ಫರ್ಮ್‌ಗಳು ಹಾಗೂ ಸಹಕಾರ ಸಂಘಗಳು ಅಗತ್ಯಕ್ರಮವಹಿಸಲು ಸೂಚಿಸಿದೆ.**

ಸಹಕಾರ ಸಂಘಗಳ ಲೆಕ್ಕಪರಿಶೋಧನಾ
ನಿರ್ದೇಶಕರು

<u>ಪ್ರತಿಯನ್ನು:-</u>

1. ಇಲಾಖಾ ಪ್ಯಾನಲ್‌ನಲ್ಲಿರುವ ಎಲ್ಲಾ ಸನ್ನದು ಲೆಕ್ಕಪರಿಶೋಧಕರಗಳಿಗೆ / ಸನ್ನದು ಲೆಕ್ಕಪರಿಶೋಧಕರ ಪಾಲುದಾರ ಸಂಸ್ಥೆಗಳಿಗೆ.
2. ಐ.ಸಿ.ಎ.ಐ. ಬೆಂಗಳೂರು ಚಾಪ್ಟರ್, 6/ಓ, ಮಿಲ್ಲರ್ಸ್ ಟ್ಯಾಂಕ್‌ಬಂಡ್ ಏರಿಯಾ, ವಸಂತ ನಗರ, ಬೆಂಗಳೂರು-560 052, ರವರಿಗೆ ಅಗತ್ಯ ಕ್ರಮಕ್ಕಾಗಿ.

ಈ ಸುತ್ತೋಲೆಯ ಬಗ್ಗೆ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಆಡಳಿತ ಮಂಡಳಿ ಅಸಮಾಧಾನ ವ್ಯಕ್ತಪಡಿಸಿದ್ದು ಈ ರೀತಿ ಸಂಘದ ಲೆಕ್ಕಪರಿಶೋಧಕರಿಗೆ ಅವರು ನಿರ್ವಹಿಸುವ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಮಿತಿಯನ್ನು ನಿಗದಿಪಡಿಸಿರುವುದು ಸರಿಯನಿಸುವುದಿಲ್ಲ. ಈ ಬಗ್ಗೆ ಲೆಕ್ಕಪರಿಶೋಧನಾ ನಿರ್ದೇಶಕರನ್ನು ಭೇಟಿ ಮಾಡಿ ಚರ್ಚಿಸಿ ಈ ಸುತ್ತೋಲೆಯನ್ನು ಹಿಂಪಡೆಯುವ ಬಗ್ಗೆ ಮನವಿ ಮಾಡುವುದೆಂದು ತೀರ್ಮಾನಿಸಲಾಗಿದೆ.



**ಶಿವಮೊಗ್ಗ :** ದಿನಾಂಕ 31-10-2021ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಆರ್.ಮೋಹನ್ ಕುಮಾರ್ ಇವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಸರ್ಕಾರಿ ನೌಕರರ ಸೌಹಾರ್ದ ಸಹಕಾರಿ ನಿ, ಶಿವಮೊಗ್ಗ ಇದರ ಆಡಳಿತ ಮಂಡಳಿ ಸಭೆಯಲ್ಲಿ ಸಹಕಾರಿಯಿಂದ ನೂತನವಾಗಿ ಜಾರಿಗೊಳಿಸಿದ ಗೃಹ ನಿರ್ಮಾಣ ಸಾಲ, ಕಟ್ಟಡ ಅಡಮಾನ ಸಾಲ, 4 ಚಕ್ರ ವಾಹನ ಸಾಲ ಸೇರಿದಂತೆ ವೇತನ ಆಧಾರಿತ ಸಾಲ, ನಿವೇಶನ ಅಡಮಾನ ಸಾಲ, ಠೇವಣಿ ಆಧಾರ ಸಾಲ ಸೌಲಭ್ಯಗಳು ಹಾಗೂ ನಿಗದಿತ ಠೇವಣಿ, ಸಂಚಿತ ಠೇವಣಿ, ಉಳಿತಾಯ ಠೇವಣಿ ಯೋಜನೆಗಳ ಮಾಹಿತಿ ಕುರಿತಾದ ಬ್ರೌಚರ್ ಬಿಡುಗಡೆ ಮಾಡಲಾಯಿತು ಹಾಗೂ ಸಹಕಾರಿಯ ಸಂಸ್ಥಾಪಕರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಸಿ.ಎಸ್.ಷಡಾಕ್ಷರಿರವರ ಭಾವಚಿತ್ರವನ್ನು ಅನಾವರಣ ಗೊಳಿಸಲಾಯಿತು.

ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಆರ್.ಮೋಹನ್ ಕುಮಾರ್, ಉಪಾಧ್ಯಕ್ಷರಾದ ಶ್ರೀ ಎಸ್.ಹೆಚ್. ಸುರೇಶ್, ಗೌರವ ಕಾರ್ಯದರ್ಶಿ ಶ್ರೀ ಎನ್.ಎಂ.ರಂಗನಾಥ ಸೇರಿದಂತೆ ಸಹಕಾರಿಯ ಎಲ್ಲಾ ನಿರ್ದೇಶಕರುಗಳು ಉಪಸ್ಥಿತರಿದ್ದರು.

## ಕೊಣ್ಣೂರ ಅರ್ಬನ್ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮ




**ಬೆಳಗಾವಿ :** ದಿನಾಂಕ 15.11.2021 ರಂದು ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಕೊಣ್ಣೂರ ಅರ್ಬನ್ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಕೊಣ್ಣೂರ ಸಹಕಾರಿಯ ದಶಮಾನೋತ್ಸವ ಹಾಗೂ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಜರುಗಿಸಲಾಯಿತು. ಸಮಾರಂಭದ ದಿವ್ಯ ಸಾನಿಧ್ಯವನ್ನು ಶ್ರೀ ಮ.ಘ.ಚ ಡಾ:ಪವಾಡೇಶ್ವರ ಮಹಾಸ್ವಾಮಿಗಳು ಕೊಣ್ಣೂರ-ಮರಡಿಮಠ ಇವರು ವಹಿಸಿದ್ದರು. ಉದ್ಘಾಟಕರಾಗಿ ಶ್ರೀ ಜಗದೀಶ ಕವಟಗಿಮಠ, ಮಾನ್ಯ ಉಪಾಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಲಿಂಗಯ್ಯಾ ಗಣಾಚಾರಿ ಇವರು ವಹಿಸಿದ್ದರು. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ್ ಇವರು ಉಪಸ್ಥಿತರಿದ್ದರು. ಸಮಾರಂಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

## ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನ ಶಾಖೆಯ ನೂತನ ಕಟ್ಟಡ ಉದ್ಘಾಟನೆ



**ಚಿತ್ರದುರ್ಗ :** ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ ಇದರ ಐ.ಯು.ಡಿ.ಪಿ. ಲೇಔಟ್ ಶಾಖೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಕಾರ್ಯಕ್ರಮವನ್ನು ಬ್ಯಾಂಕಿನ ನೂತನ ಕಟ್ಟಡದಲ್ಲಿ ಇಂದು ಬೆಳಗ್ಗೆ 11.30ಕ್ಕೆ ಹಮ್ಮಿಕೊಳ್ಳಲಾಗಿತ್ತು.

ಶಾಖೆಯ ನೂತನ ಕಟ್ಟಡದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿಯವರು ನೆರವೇರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಎಸ್. ಆರ್. ಲಕ್ಷ್ಮೀಕಾಂತ ರೆಡ್ಡಿಯವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವರು ಹಾಗೂ ಸಿ.ಡಿ.ಸಿ.ಸಿ ಬ್ಯಾಂಕ್ ಮತ್ತು ಹೊಯ್ಸಳ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಡಿ. ಸುಧಾಕರ್ ರವರು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗಂಗಾಧರಯ್ಯರವರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು, ಸೀತಾ ರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನ ಅಧ್ಯಕ್ಷರಾದ ಶ್ರೀ ಹಂಜಿ ಶಿವಸ್ವಾಮಿಯವರು, ಶ್ರೀ ಕನ್ನಿಕ ಪರಮೇಶ್ವರಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಪಿ. ಎಸ್. ನಾಗರಾಜ್ ಶೆಟ್ಟಿಯವರು, ಹಿರಿಯ ಸಹಕಾರಿ ಧುರೀಣರು, ವಿವಿಧ ಸೌಹಾರ್ದ/ಸಹಕಾರ ಸಂಘಗಳ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಬ್ಯಾಂಕಿನ ನಿರ್ದೇಶಕರು, ಸಿಬ್ಬಂದಿ ವರ್ಗದವರು ಹಾಗೂ ಸದಸ್ಯರು ಉಪಸ್ಥಿತರಿದ್ದರು.



**ಉಡುಪಿ :** ಜನಪರ ಕಾಳಜಿಯೊಂದಿಗೆ ಗ್ರಾಮೀಣ ಭಾಗದ ಜನತೆಗೆ ಬ್ಯಾಂಕಿಂಗ್ ಕ್ಷೇತ್ರ ಮಾತ್ರವಲ್ಲದೆ ಸಾಮಾಜಿಕ, ಶೈಕ್ಷಣಿಕ, ವೈದ್ಯಕೀಯ ಸೇವೆಯಲ್ಲಿ ಸರ್ವಧರ್ಮಗಳ ಸಮನ್ವಯತೆಯನ್ನು ಕಾಯ್ದುಕೊಂಡು ಬರುತ್ತಿರುವ ಪಡುಬಿದ್ರಿ, ಕಣ್ಣಂಗಾರ್ ಬೈಪಾಸ್, ಹೆಜಮಾಡಿ ಮತ್ತು ಉಚ್ಚಿಲಗಳಲ್ಲಿ ಶಾಖೆಗಳನ್ನು ಹೊಂದಿರುವ ಸ್ವರ್ಣ ಸೌಹಾರ್ದ ಸಹಕಾರಿ ಸಂಘತನ್ನದಶಮ ಕಾರ್ಯಕ್ರಮವನ್ನು ದಿನಾಂಕ 14-11-2021 ನೇ ಭಾನುವಾರ ಸಹಕಾರಿಯ ಪ್ರಧಾನಕಚೇರಿ ಪಡುಬಿದ್ರಿಯಲ್ಲಿ ನೆರವೇರಿಸಲಾಯಿತು.

ಸಹಕಾರಿಯ ದಶಮ ಸಂಭ್ರಮವನ್ನು ಉದ್ಘಾಟಿಸಿದ ಧರ್ಮಸ್ಥಳ ಕನ್ಯಾಡಿ ಶ್ರೀರಾಮ ಕ್ಷೇತ್ರದ ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿಯವರು ಮಾತನಾಡಿ ನಾವು ಧರ್ಮದ ಹಾದಿಯಲ್ಲಿ ಮುನ್ನಡೆದಾಗ ಮಾತ್ರ ಸುಖದ ಹಾದಿಯಲ್ಲಿ ಮುನ್ನಡೆಯಲು ಸಾಧ್ಯ. ಗ್ರಾಹಕರ ನೋವಿಗೆ ಸ್ಪಂದಿಸುವುದು ಸಹಕಾರಿ ಸಂಸ್ಥೆಗಳ ಧರ್ಮವಾದರೆ ಪಡೆದ ಸಾಲವನ್ನು ಸಮಯಕ್ಕೆ ಸರಿಯಾಗಿ ಪಾವತಿಸುವುದು ಗ್ರಾಹಕರ ಧರ್ಮವಾಗಿದೆ ಸ್ವರ್ಣ ಸಹಕಾರಿ ಸಂಸ್ಥೆಯು ಎಲ್ಲರ ಸಹಕಾರದೊಂದಿಗೆ ಧರ್ಮ ಮಾರ್ಗದಲ್ಲಿ ಮುನ್ನಡೆಯುತ್ತಿದ್ದು ಈ ಸಾಧನೆಯು ಸಂಸ್ಥೆಯ ಮುಂದಿನ ಏಳಿಗೆಗೆ ಪೂರಕವಾಗಿರಲಿ ಎಂಬುದಾಗಿ ಶುಭವನ್ನು ಹಾರೈಸಿದರು.

## ಆದ್ಯ ಸೌಹಾರ್ದ ಸಹಕಾರಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ



**ಮೈಸೂರು :** ಆದ್ಯ ಸೌಹಾರ್ದ ಸಹಕಾರಿ ನಿಯಮಿತ, ರಾಮಕೃಷ್ಣನಗರ, ಮೈಸೂರು ಇದರ ಆಡಳಿತ ಮಂಡಳಿಗೆ ಮುಂದಿನ ಐದು ವರ್ಷಗಳ ಅವಧಿಗೆ ದಿನಾಂಕ 14–11–2021 ಕ್ಕೆ ನಿಗಧಿಯಾದ ಚುನಾವಣೆಯಲ್ಲಿ ಶ್ರೀ. ಡಾ. ಜೆ ಜಿ ವಿಶ್ವನಾಥಯ್ಯ, ಶ್ರೀ. ಶರ್ಮ ಹೆಚ್ ಎಸ್, ಶ್ರೀ. ಬಸವಣ್ಣ ಎಂ, ಶ್ರೀ. ನಾಣಯ್ಯ ಕೆ ಎ,ಶ್ರೀ. ಸುಧೀರ್ ಸಿ ಎಸ್, ಶ್ರೀ. ನಂದೀಶ್, ಶ್ರೀ. ಶೇಖರ್ ಸಿ, ಶ್ರೀ. ವೆಂಕಟೇಶ್ ಕಾರಂತ್, ಶ್ರೀ. ಕುಮಾರ್ ಕೆ ಎನ್, ಶ್ರೀ. ನಂಜಯ್ಯ ಕೆ, ಶ್ರೀಮತಿ. ಚೂಡಾಮಣಿ, ಶ್ರೀ. ಹರೀಶ್ ಕುಮಾರ್ ಎಂ ಜಿ, ಶ್ರೀ. ಕೃಷ್ಣ ಎಂ, ಶ್ರೀಮತಿ. ಮಂಜುಳ, ಶ್ರೀಮತಿ. ಪದ್ಮಾವತಿ ಎಂ.ಜಿ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ದಿನಾಂಕ 18–11–2021 ರಂದು ನಡೆದ ಪದಾಧಿಕಾ–ರಿಗಳ ಚುನಾವಣೆಯಲ್ಲಿ ಶ್ರೀ.ಡಾ.ಜೆ.ಜಿ. ವಿಶ್ವನಾಥಯ್ಯನವರು ಅಧ್ಯಕ್ಷರಾಗಿ, ಶ್ರೀ.ನಂದೀಶ್‌ರವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಚುನಾವಣಾ ರಿಟರ್ನಿಂಗ್ ಅಧಿಕಾರಿಯಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮೈಸೂರು ವಿಭಾಗದ ಜಿಲ್ಲಾ ಸಂಯೋಜಕರಾದ ಶ್ರೀ. ಸುರೇಶ್ ಆರ್.ಎಸ್ ಅವರು ಚುನಾವಣೆ ಪ್ರಕ್ರಿಯೆ ನಡೆಸಿರುತ್ತಾರೆ.

## ಧಾರವಾಡ ಜಿಲ್ಲಾ ಸೌಹಾರ್ದ ಒಕ್ಕೂಟದ ಸಹಕಾರಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ




**ಧಾರವಾಡ :** ಧಾರವಾಡ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಪ್ರಥಮ ಅಧ್ಯಕ್ಷರಾಗಿ ಶ್ರೀ ಮಲ್ಲಿಕಾರ್ಜುನ ಹೊರಕೇರಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಲೋಚನೇಶ ಹೂಗಾರರವರು ಆಯ್ಕೆಯಾಗಿದ್ದಾರೆ. ಜಿಲ್ಲಾ ಒಕ್ಕೂಟಕ್ಕೆ ಶ್ರೀ ಮಲ್ಲಿಕಾರ್ಜುನ ಹೊರಕೇರಿ, ಬಿ. ಜಿ. ಜವಳಿ, ರಾಮಕೃಷ್ಣ ಪುಟ್ಟೂರ, ಹನಮಂತಪ್ಪ ಮ್ಯಾಗೇರಿ, ಸೋಮಶೇಖರ ಬೆಂಡಿಗೇರಿ, ಲೋಚನೇಶ ಹೂಗಾರ, ವಿರೂಪಾಕ್ಷಗೌಡ ಪಾಟೀಲ, ಪ್ರಾಣೇಶ ಜೋಶಿ, ಪ್ರತಾಪ ಚೌವ್ಹಾಣ ,ಈರಣ್ಣ ಚಿಕ್ಕಬೆಲ್ಲಿಗಟ್ಟಿ, ಶ್ರೀಮತಿ ಛಾಯಾ ಪದಕಿ, ಅನ್ವರಖಾನ ಬಾಗೇವಾಡಿ, ಮಲ್ಲಿಕಾರ್ಜುನ ಪಾಟೀಲ, ವಿಜಯಾನಂದ ಶೆಟ್ಟಿ, ಬಸವರಾಜ್ ಅರವಲದ, ಇರೇಶ್ ಅಂಚಟಗೇರಿ, ಮಲ್ಲಿಕಾರ್ಜುನ ಸಂಗನಗೌಡ್ರ, ಶಿವರುದ್ರಪ್ಪ ತರ್ಲಗಟ್ಟ, ಹಾಗೂ ನಿಂಬಣ್ಣ ಕುಬಿಹಾಲ ಇವರುಗಳು ಒಕ್ಕೂಟದ ನಿರ್ದೇಶಕರಾಗಿ ಆಯ್ಕೆ ಆಗಿರುತ್ತಾರೆ

## ಪ್ರಗತಿ ಕೃಷ್ಣ ಸೌಹಾರ್ದ ಸಹಕಾರಿಯ 5ನೇ ಸಾಮಾನ್ಯ ಸಭೆ



**ಹೊಸಪೇಟೆ :** ಪ್ರಗತಿ ಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ ಸಹಕಾರಿಯ ಅಧ್ಯಕ್ಷರಾದ ಮಾನ್ಯ ಶ್ರೀ ಭರಮಪ್ಪ ಜಿ ರವರ ಅಧ್ಯಕ್ಷತೆಯಲ್ಲಿ ಪ್ರಗತಿ ಕೃಷ್ಣ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಇದರ 5ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ ದಿನಾಂಕ 21/11/2021 ರಂದು ಹೊಸಪೇಟೆಯ ಸಹಕಾರಿ ಆವರಣದಲ್ಲಿ ಜರುಗಿಸಲಾಯಿತು ಕಾರ್ಯಕ್ರಮದ ಉದ್ಘಾಟನೆಯನ್ನು ಮುಖ್ಯ ಅತಿಥಿಗಳಾದ ವಿಕಾಸ ಬ್ಯಾಂಕಿನ ಅಧ್ಯಕ್ಷರಾದ ಮಾನ್ಯ ಶ್ರೀ ವಿಶ್ವನಾಥ ಹಿರೇಮಠ್ ಇವರು ಉದ್ಘಾಟಿಸಿ ಮಾತಾನಾಡುತ್ತ ಕಳೆದ 04 ವರ್ಷಗಳಿಂದ ಪ್ರಗತಿ ಕೃಷ್ಣ ಸಹಕಾರಿಯು ಸದಸ್ಯರಿಗೆ ಉತ್ತಮ ಸೇವೆ ನಿಡುತ್ತಾಬಂದಿದ್ದು, ಆಡಳಿತ ಮಂಡಳಿಯು ನಿವೃತ ಬ್ಯಾಂಕ್ ನೌಕರರು ಆಗಿದ್ದು ಅವರ ಸಮಾಜ ಸೇವೆ, ಸಹಕಾರಿಯ ಪ್ರಗತಿಗೆ ಹರ್ಷ ವ್ಯಕ್ತಪಡಿಸಿದರು, ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಭರಮಪ್ಪ ಜಿ ಇವರು ಮಾತಾನಾಡುತ್ತ ಸಹಕಾರಿಯು 2020–21ನೇ ಆರ್ಥಿಕ ವರ್ಷಕ್ಕೆ 15,05,970–00 ರೂ. ಲಾಭ ಗಳಿಸಿದೆ ಮತ್ತು ಶೇರುದಾರರಿಗೆ 08% ಶೇರು ಲಾಭಂಶ ಘೋಷಣೆ ಮಾಡಲಾಗಿರುತ್ತದೆ, ಸಹಕಾರಿ ಈ ನಾಲ್ಕು ವರ್ಷಗಳಲ್ಲಿ 03 ಹೊಸ ಶಾಖೆಗಳನ್ನು ಮರಿಯಮ್ಮನಹಳ್ಳಿ, ಹಗರಿಬೊಮ್ಮನಹಳ್ಳಿ, ಖಾನಹೊಸಳ್ಳಿ, ಆರಂಭಿಸಿ ಉತ್ತಮ ಸೇವೆ ನೀಡುತ್ತಿವೆ. ಹಾಗೂ ಆಡಳಿತ ಮಂಡಳಿಯು ಯವುದೇ ಲಾಭ ಆಪೇಕ್ಷೆ ಮಾಡದೆ ತಮ್ಮ ಸಮಯ,ಪರಿಶ್ರಮ ಸಹಕಾರಿಗೆ ಕಾಯ್ದಿಟ್ಟಿದ್ದಾರೆ,

## ಸುಕೋ ಬ್ಯಾಂಕ್ ಸೇವೆಗಳನ್ನು ರಾಷ್ಟ್ರಮಟ್ಟಕ್ಕೆ ವಿಸ್ತರಿಸುವ ಗುರಿ : ಮೋಹಿತ್ ಮಸ್ಕಿ



**ಬಳ್ಳಾರಿ :** ದಿನಾಂಕ 13.11.2020 ರಂದು ಸುಕೋ ಬ್ಯಾಂಕ್ ಜ್ಞಾನಾಮೃತ ಪಿ.ಯು. ಕಾಲೇಜಿನಲ್ಲಿ ತನ್ನ ಸಿಬ್ಬಂದಿಗಳಿಗಾಗಿ ಏರ್ಪಡಿಸಿರುವ 'ಎರಡು ದಿನಗಳ ತರಬೇತಿ' ಕಾರ್ಯಾಗಾರವನ್ನು ಬ್ಯಾಂಕ್‌ನ ಸಂಸ್ಥಾಪಕ ಅಧ್ಯಕ್ಷ ಮನೋಹರ್ ಮಸ್ಕಿ, ಅಧ್ಯಕ್ಷ ಮೋಹಿತ್ ಮಸ್ಕಿ, ನಿರ್ದೇಶಕಿ ಸಾವಿತ್ರಿ ದಾನೇಗೌಡರ್ ಅವರು ಉದ್ಘಾಟಿಸಿದರು.

ಜ್ಞಾನಾಮೃತ ಪಿ.ಯು. ಕಾಲೇಜಿನಲ್ಲಿ ಸುಕೋ ಬ್ಯಾಂಕ್ ತನ್ನ ಸಿಬ್ಬಂದಿಗಳಿಗಾಗಿ ಏರ್ಪಡಿಸಿರುವ 'ಎರಡು ದಿನಗಳ ತರಬೇತಿ' ಕಾರ್ಯಾಗಾರದ ಅಧ್ಯಕ್ಷತೆವಹಿಸಿ ಅವರು ಶನಿವಾರ ಮಾತನಾಡಿದರು.

ಸುಕೋ ಬ್ಯಾಂಕ್ ಪ್ರಸ್ತುತ 28 ಶಾಖೆಗಳನ್ನು ಹೊಂದಿದೆ. ಕಾರಟಗಿಯ ಶ್ರೀ ಶರಣಬಸವೇಶ್ವರ ಪಟ್ಟಣ ಸಹಕಾರಿ ಬ್ಯಾಂಕ್‌ನ ವಿಲೀನ ಕಾರ್ಯ ಶೀಘ್ರದಲ್ಲಿ ಪೂರ್ಣಗೊಂಡು 29 ಶಾಖೆಗಳನ್ನು ಹೊಂದಲಿದೆ. ಸಿಬ್ಬಂದಿಯ ಪಾಲ್ಗೊಳ್ಳುವಿಕೆ, ಸ್ವ – ಆಸಕ್ತಿ ಮತ್ತು ಗ್ರಾಹಕಸ್ನೇಹಿ ಚಟುವಟಿಕೆಗಳಿಂದ ಸುಕೋ ಬ್ಯಾಂಕ್ ಯಶಸ್ಸನ್ನು ಸಾಧಿಸುತ್ತಿದೆ ಎಂದರು. ಎರಡು ದಿನಗಳ ತರಬೇತಿ ಕಾರ್ಯಾಗಾರದಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲಿಯ ಅವಕಾಶಗಳು ; ಅಭಿವೃದ್ಧಿಯ ಪರಿಧಿಗಳು ಮತ್ತು ಭವಿಷ್ಯದ ಬ್ಯಾಂಕಿಂಗ್ ಕ್ಷೇತ್ರದ ವಿವಿಧ ಯೋಜನೆಗಳ ಮಾಹಿತಿ ಸಿಗಲಿದೆ. ಹೊಸ ವಿಚಾರಗಳನ್ನು ಕಲಿಯಲು ಸಾಧ್ಯವಾಗುತ್ತದೆ ಎಂದರು.

ಸುಕೋ ಬ್ಯಾಂಕ್‌ನ ಸಂಸ್ಥಾಪಕ ಅಧ್ಯಕ್ಷ ಮನೋಹರ ಮಸ್ಕಿ ಅವರು ಕಾರ್ಯಾಗಾರ ಉದ್ಘಾಟಿಸಿ, ಪ್ರತಿಯೊಬ್ಬರಲ್ಲಿರುವ ಸಾಮರ್ಥ್ಯ, ಅಂತಃಶಕ್ತಿ, ಜ್ಞಾನವನ್ನು ಹೆಚ್ಚಿಸಿ, ಕರ್ತವ್ಯ ಪಾಲನೆಯ ಜವಾಬ್ದಾರಿ, ಬದ್ಧತೆಯನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ತರಬೇತಿ ಕಾರ್ಯಾಗಾರಗಳು ಪೂರಕವಾಗಿವೆ. ಪ್ರತಿಯೊಬ್ಬರೂ ತರಬೇತಿಯ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

## ಸಿಟಿ ಪತ್ತಿನ ಸೌಹಾರ್ದ ಸಹಕಾರಿಯ ಉದ್ಘಾಟನೆ



**ಬೀದರ :** ಸಿಟಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ್ ಇದರ ಕಛೇರಿ ಉದ್ಘಾಟನೆಯನ್ನು ಶ್ರೀ ಶ್ರೀ ಶಿವಕುಮಾರ್ ಮಹಾಸ್ವಾಮಿ ಸಿದ್ದಾರೂಢ ಮಠ್ ಬೀದರ್ ಇವರು ನೆರವೇರಿಸಿ ಆಶೀರ್ವಚನ ನೀಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಗುರುನಾಥ ಜ್ಯಾಂತಿಕರ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಭಾಗವಹಿಸಿ ಸಹಕಾರಿ ಸದಸ್ಯರ ಕರ್ತವ್ಯ ಮತ್ತು ಜವಾಬ್ದಾರಿ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ್ ಇದರ ಉಪಾಧ್ಯಕ್ಷರಾದ ಶ್ರೀ ಬಸವರಾಜ ಸ್ವಾಮಿ, ಜಿಲ್ಲಾ ಸಂಯೋಜಕರಾದ ಶ್ರೀ ವೀರಶೆಟ್ಟಿ. ಒಕ್ಕೂಟ ಮುಖ್ಯ ಕಾರ್ಯನಿರ್ವಾಹಕ ಶ್ರೀ ಅಮೃತ ಹೊಸಮನಿ. ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ ಶ್ರೀ ಓಂಕಾರ ಸ್ವಾಮಿ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಶ್ರೀ ಅನಿಲಕುಮಾರ್ ಅತಂಗೆ ವಹಿಸಿದ್ದರು.

## ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ನೌಕರರ ವಾರ್ಷಿಕ ಸಾಮಾನ್ಯ ಸಭೆ




**ತುಮಕೂರು :** ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ನೌಕರರ ಸೌಹಾರ್ದ ಪತ್ತಿನ ಸಹಕಾರಿ ನಿ,. ತುಮಕೂರು ಸಹಕಾರಿಯ 2020–21ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರ ಅಧ್ಯಕ್ಷತೆಯಲ್ಲಿ ಸಹಕಾರಿಯ ಆವರಣದಲ್ಲಿ ಜರುಗಿತು. ದಿವ್ಯ ಸಾನಿಧ್ಯವನ್ನು ಶ್ರೀ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ವಹಿಸಿದ್ದರು. ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಕುಶಾಲ್ ಹೆಚ್. ಎಮ್. ಇವರು ಭಾಗವಹಿಸಿದ್ದರು.

# ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳು




**ಹಾಸನ :** ಶ್ರೀ ವಾಸವಿ ವಿವಿದೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ಚನ್ನರಾಯಪಟ್ಟಣ ಇದರ 2020–21ನೇ ಸಾಲಿನ ಸರ್ವ ಸದಸ್ಯರ ಸಾಮಾನ್ಯ ಮಹಾಸಭೆಯು ದಿನಾಂಕ 14.11.2021ರಂದು ಜರುಗಿತು. ಈ ಸಂಧರ್ಭದಲ್ಲಿ ಅಧ್ಯಕ್ಷರಾದ ಶ್ರೀ ಸಿ ಎಸ್ ಗಿರೀಶ್, ಉಪಾಧ್ಯಕ್ಷರಾದ ಶ್ರೀ ಸಿ ಆರ್ ಕೃಷ್ಣಪ್ರಸಾದ್, ಆರ್ಯ ವೈಶ್ಯ ಮಂಡಳಿಯ ಅಧ್ಯಕ್ಷರಾದ ಶ್ರೀ ಡಿ ಚಂದ್ರಶೇಖರ್, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿಗಳು ಹಾಜರಿದ್ದರು.



**ಬೆಂಗಳೂರು :** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂತ ಉಪನಗರ ಇದರ 2020–21ನೇ ಸಾಲಿನ 12ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 20.10.2021 ರಂದು ಬುಧವಾರ ಆನ್‌ಲೈನ್ ಮುಖಾಂತರ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಎಂ. ಮುನಿರೆಡ್ಡಿರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹತ್ವದ ಆನ್‌ಲೈನ್ ಸಭೆಗೆ 1474 ಸದಸ್ಯರು ಪಾಲ್ಗೊಂಡು, ವಿವಿಧ ವಿಷಯಗಳನ್ನು ಮಂಡಿಸಿ, ಚರ್ಚಿಸಿದ ನಂತರ ಸದಸ್ಯರಿಂದ ಸರ್ವಾನುಮತದ ತೀರ್ಮಾನಗಳನ್ನು ತೆಗೆದುಕೊಂಡು ದಾಖಲು ಮಾಡಲಾಯಿತು. ಸಹಕಾರಿಯು 2020–21ನೇ ಸಾಲಿನಲ್ಲಿ ರೂ. 1,79,52,996/– ಗಳ ನಿವ್ವಳ ಲಾಭಾಂಶವನ್ನು ದಾಖಲಿಸಿದ್ದರು, ಇದರಲ್ಲಿ ಶೇ. 15% ರಂತೆ ಡಿವಿಡೆಂಟ್ ನ್ನು ಘೋಷಿಸಲಾಯಿತು. ಹೆಚ್ಚಿನ ಸದಸ್ಯರು ಭಾಗವಹಿಸಿ ತಮ್ಮ ಅಮೂಲ್ಯವಾದ ಸಲಹೆ, ಸೂಚನೆಗಳನ್ನು ನೀಡುವುದರ ಮೂಲಕ 12ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಯಶಸ್ವಿಗೊಳಿಸಿದರು.



**ಚಾಮರಾಜನಗರ :** ಸಂಗಮ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ 2020–21ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ವೈ.ಎಸ್ ರಾಘವೇಂದ್ರ ರವರು ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು, ಕು. ರಮ್ಯ, ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಯರಗಟ್ಟಿ :** ಕಟಕೋಳ ಗ್ರಾಮದಲ್ಲಿ ಶ್ರಾವಣ ಮಾಸದ ಮುಕ್ತಾಯ ಸಮಾರಂಭದ ಹಾಗೂ ಸಿದ್ರಾಯಜ್ಜನವರ ಬ್ಯಾಂಕಿನ ವಾರ್ಷಿಕ ಸರ್ವ ಸಾಧಾರಣ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಮಾಜದಲ್ಲಿ ಉತ್ತಮಯೋಜನೆಗಳನ್ನು ಹಮ್ಮಿಕೊಂಡು ಜನರ ಬದುಕಿಗೆ ಆಸರೆಯಾಗಿರುವ ಸಿದ್ರಾಯಜ್ಜನವರ ಬ್ಯಾಂಕಿನ ಕಾರ್ಯ ಶ್ಲಾಘನೀಯ ಎಂದು ಸಚ್ಚಿನಾಂದ ಮಹಾಸ್ವಾಮಿಗಳು ಹೇಳಿದರು.

ಕಟಕೋಳದ ಶ್ರೀ ಸಿದ್ರಾಯಜ್ಜನವರ ಕಲ್ಯಾಣ ಮಂಟಪದಲ್ಲಿ ಶ್ರಾವಣ ಮಾಸದ ಮುಕ್ತಾಯ ಸಮಾರಂಭ ಶ್ರೀ ಸಿದ್ದರಾಮಯ್ಯನವರು ಭಕ್ತಿ ಮಂಡಳಿಯಿಂದ ಮತ್ತು ಸುತ್ತಮುತ್ತಲಿನ ಗ್ರಾಮಗಳ ಸಂಘಗಳ ಒಕ್ಕೂಟದ ಆಶ್ರಮದಲ್ಲಿ ಆಯೋಜಿಸಿದ್ದ ಶ್ರೀ ಸಿದ್ದರಾಮಯ್ಯನವರು ಪೂಜಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸಾಮಾಜಿ, ಶೈಕ್ಷಣಿಕ, ಧಾರ್ಮಿಕ, ಆರ್ಥಿಕ ಸೇರಿದಂತೆ ಅನೇಕ ಒಳ್ಳೆಯ ಕಾರ್ಯಗಳಿಂದ ಸಂಸ್ಥೆಯು ಜಿಲ್ಲೆಯಲ್ಲಿ ಮನೆ ಮಾತಾಗಿದೆ. ಗ್ರಾಮೀಣ ಭಾಗದ ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರು ಸ್ವಾವಲಂಭಿಯಾಗಲು ಸಹಕಾರಿಯಾಗಿದೆ ಎಂದು ತಿಳಿಸಿದರು.




**ಉಡುಪಿ :** ಜನಹಿತ ಸೌಹಾರ್ದ ಸಹಕಾರಿ ನಿ., ಉಡುಪಿ ಇದರ 14ನೇ ವಾರ್ಷಿಕ ಸಾಮಾನ್ಯ ಸಭೆಯು ಉಡುಪಿ ಡಯಾನ ಹೋಟೇಲಿನ ಸುನಂದ ಸಭಾಭವನದಲ್ಲಿ ದಿನಾಂಕ 30.10.2021 ರಂದು ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಗೋಪಾಲ ಯು ರವರು 2020–21ನೇ ಸಾಲಿನ ವರದಿ ಮಂಡಿಸಿ ಸರ್ವ ಸದಸ್ಯರು ಹಿತವನ್ನೇ ನಾವು ನಮ್ಮ ವಾರ್ಷಿಕ ಲಾಭ ಎಂದು ತಿಳಿದಿರುವುದರಿಮದ ಈ ಆರ್ಥಿಕ ಸಂಕಷ್ಟದ ಸಮಯದಲ್ಲೂ ಪ್ರಗತಿ ಪಥದಲ್ಲಿ ಸಾಗುತ್ತಿದ್ದೇವೆ ಸಹಕಾರಿಯ ಎಲ್ಲಾ ಸದಸ್ಯರು ಇನ್ನೂ ಹೆಚ್ಚು ನಮ್ಮಲ್ಲಿ ವ್ಯವಹರಿಸುವುದರ ಜೊತೆಗೆ ನಮ್ಮಲ್ಲಿ ದೊರೆಯುವ ಎಲ್ಲಾ ಸೌಲಭ್ಯಗಳ ಉಪಯೋಗವನ್ನು ಪಡೆಯಬೇಕು. ಸದಸ್ಯರು ಅನುಕೂಲತೆಗಾಗಿ ಸಹಕಾರಿಯ ನಾಲ್ಕೂ ಶಾಖೆಗಳಲ್ಲಿ ವ್ಯವಹಾರವನ್ನು ಕೋರ್ ಬ್ಯಾಂಕಿಂಗ್ ವ್ಯವಸ್ಥೆಗೆ ಅಳವಡಿಸಿಕೊಳ್ಳಲಾಗಿದೆ. ಇ–ಸ್ಟಾಂಪಿಂಗ್,ಮನಿಟ್ರಾನ್ಸ್ ಫರ್, ಆರ್.ಟಿ.ಸಿ ರೇಷನ್ ಕಾರ್ಡ್ ಬಯೋಮೆಟ್ರಿಕ್ಸ್ ಮತ್ತು ಜೀವವಿಮೆ ವಾಹನ ವಿಮೆ ಈಗ ಹತ್ತು ಹಲವಾರು ಸೇವೆಗಳು ಸಹಕಾರಿಯಲ್ಲಿ ಉಪಲಬ್ದವಿರುವುದು ಇವುಗಳ ಪ್ರಯೋಜನವನ್ನು ಸದಸ್ಯರೆಲ್ಲರೂ ಪಡೆಯಬೇಕು ಎಂದು ವಿನಂತಿಸಿಕೊಳ್ಳುತ್ತಾ 2020–21 ನೇ ಸಾಲಿಗೆ ಸಹಕಾರಿಯ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ವಿದ್ಯಾರ್ಥಿ ಪ್ರೋತ್ಸಾಹಧನ ವಿತರಿಸಿದರು. ಸದಸ್ಯರಿಗೆ ಪಾಲು ಮುನಾಫೆ ನೀಡುವುದರ ಮೂಲಕ ಸಹಕಾರಿಯ 2020–21ನೇ ಸಾಲಿಗೆ ಗಳೀಸಿದ ಲಾಭವನ್ನು ಹಂಚಿಕೆ ಮಾಡಲಾಯಿತು. ಸಭೆಯಲ್ಲಿ ಉಪಾಧ್ಯಕ್ಷರಾದ ಕೃಷ್ಣ ಎಂ ಸಾಲಯಾನ್, ನಿರ್ದೇಶಕರಾದ ವೈ.ಎಸ್. ಮಡಿವಾಳ, ಕೃಷ್ಣ ಯು.ವಿ. ಗೋಪಾಲ್ ಸಿ. ಮೂಲ್ಯ, ಉಪೇಂದ್ರ ನಾಯಕ್, ವಿಜಯ್ ಶೆಟ್ಟಿ, ವಸಂತ ನಾಯ್ಕ್, ಮಂಜುನಾಥ ನಾಯ್ಕ, ಟಿ. ಶಶಿಧರನ್, ಶ್ರೀಮತಿ ಉಮಾ ಭಟ್ಟ, ಡಾ. ಅನುರೂಪ ಉಡುಪಿ ಇವರು ಉಪಸ್ಥಿತರಿದ್ದರು. ಸಹಕಾರಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ನಿರ್ದೇಶಕರಾದ ಸದಾನಂದ ಪ್ರಭುರವರು ವಂದಿಸಿದರು.



**ಕಾರ್ಕಳ :** ಕೊಂಕಣ್ ಕ್ಯಾಥೊಲಿಕ್ ವಿವಿದೊದ್ದೇಶ ಸೌಹಾರ್ದ ಸಹಕಾರಿ ನಿ. ಇದರ 2020–21 ರ ಸರ್ವ ಸದಸ್ಯರ ವಾರ್ಷಿಕ ಸಭೆ ದಿನಾಂಕ 31–10–2021 ಭಾನುವಾರ ಪೂರ್ವಾಹ್ನ 11.30 ಗಂಟೆಗೆ ಕ್ರೈಸ್ಟ್ ಕಿಂಗ್ ಚರ್ಚ್ ಸಭಾಭವನದಲ್ಲಿ ಸಹಕಾರಿಯ ಅಧ್ಯಕ್ಷರಾದ ಡಾ। ಪೀಟರ್ ಫೆರ್ನಾಂಡಿಸ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು.



**ಮಂಡ್ಯ :** ಶ್ರೀ ವೀರ ಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿ., ಮಂಡ್ಯ ಕಛೇರಿಯಲ್ಲಿ ಕರ್ನಾಟಕ ರಾಜ್ಯೋತ್ಸವ ಮತ್ತು ದೀಪಾವಳಿ ಹಬ್ಬದ ಪೂಜೆ ನಡೆಸಲಾಯಿತು.




**ಕೋಲಾರ :** ದಿನಾಂಕ 13–11–2021ರಂದು ಗೋಲ್ಡ್ ಫೀಲ್ಡ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಕೋಲಾರ ಇದರ 2020–21ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯು ಕೋಲಾರ ಜಿಲ್ಲಾ ಪತ್ರಕರ್ತರ ಭವನ ಇಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ. ಬಿ ಗೋಪಾಲಕೃಷ್ಣ ರವರು ವಹಿಸಿದ್ದರು. ಈ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ಇವರು ಭಾಗವಹಿಸಿ ಸೌಹಾರ್ದ ಕಾಯ್ದೆ ಹಾಗೂ ಸಹಕಾರಿಯ ಕಾರ್ಯ ಚಟುವಟಿಕೆಗಳ ಕುರಿತು ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಹಾಗೂ ಸಹಕಾರಿಯ ಸದಸ್ಯರು ಭಾಗವಹಿಸಿದ್ದರು.

**ಚಿಕ್ಕಮಗಳೂರು :** ದಿನಾಂಕ 14.11.2021 ರಂದು 68ನೇ ಅಖಿಲ ಭಾರತ ಸಹಕಾರ ಸಪ್ತಾಹ ದ ಅಂಗವಾಗಿ ಇಂದು ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪ ಇದರ ಕಛೇರಿಯಲ್ಲಿ ಧ್ವಜಾರೋಹಣ ಕಾರ್ಯ ಮಾಡಲಾಯಿತು.



**ಶಿವಮೊಗ್ಗ :** ದಿನಾಂಕ 10-11-2021 ರಂದು ಹೊಯ್ಸಳ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಈ ಸಹಕಾರಿಯಿಂದ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳ 40 ಸದಸ್ಯರಿಗೆ 25 ಲಕ್ಷ ರೂಪಾಯಿ ಸಾಲವನ್ನು ವಿತರಿಣೆ ಮತ್ತು ಆರ್ಥಿಕ ಸೇರ್ಪಡೆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಶ್ರೀ ಎಸ್ ಶಶಿಕುಮಾರ್ ಎಸ್, ಸೌಹಾರ್ದ ಜಿಲ್ಲಾ ಸಂಯೋಜಕರು, ಶಿವಮೊಗ್ಗ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಭಾಗವಹಿಸಿದರು. ಸ್ವ-ಸಹಾಯ ಸಂಘಗಳಿಗೆ 25 ಲಕ್ಷ ರೂಪಾಯಿ ಸಾಲದ ಚೆಕ್ಕನ್ನು ವಿತರಣೆಯನ್ನು ಮಾಡಿದರು. ನಂತರ ಸಹಕಾರಿಯಿಂದ ಜಿಲ್ಲಾ ಸಂಯೋಜಕರಿಗೆ ಸನ್ಮಾನವನ್ನು ಮಾಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ ಶಂಕರ್ ರವರು ಅಧ್ಯಕ್ಷತೆಯನ್ನು ವಹಿಸಿದ್ದರು ಹಾಗೂ ನಿರ್ದೇಶಕರುಗಳು ಉಪಸ್ಥಿತರಿದ್ದರು. ಮತ್ತು ಶುಭಂ ಗ್ರಾಮೀಣ ಅಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಶ್ರೀಧರ್ ಹೆಗ್ಡೆಯವರು ಉಪಸ್ಥಿತರಿದ್ದರು.



**ಬೆಂಗಳೂರು :** ಸುರಭಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್ ಇದರ 12ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 21.11.2021 ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ಕೆ. ತಿಮ್ಮರಾಜಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಸಹಕಾರಿಯ ಉತ್ತಮ ಸದಸ್ಯರಾದ ಶ್ರೀ ಜಯಣ್ಣ ಕೆ ಮತ್ತು ಶ್ರೀ ಶ್ರೀನಿವಾಸ್ ಮೂರ್ತಿ ಇವರನ್ನು ಗೌರವಿಸಲಾಯಿತು.



**ದಾವಣಗೆರೆ :** ದಿನಾಂಕ 13.11.2021 ರಂದು ಶ್ರೀ ನಂದಿ ಸೌಹಾರ್ದ ಸಹಕಾರಿ ನಿ,. ಮಲೇಬೆನ್ನೂರು, ದಾವಣಗೆರೆ, ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸೌಹಾರ್ದ ಕಾಯ್ದೆ ಹಾಗೂ ಸಹಕಾರಿಯ ಅಭಿವೃದ್ಧಿಯ ದೃಷ್ಟಿಯಿಂದ ಅಗತ್ಯ ಸಲಹೆಗಳನ್ನು ನೀಡಿದರು.



**ಬೆಂಗಳೂರು :** ದಿನಾಂಕ 13.11.2021 ರಂದು ಶ್ರೀ ನಗರೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ,. ಬೆಂಗಳೂರು ಇದರ 9ನೇ ವಾರ್ಷಿಕ ಸಾಮಾನ್ಯ ಸಭೆಯು ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್. ಎಸ್. ಬಸವರಾಜು ರವರು ವಹಿಸಿದ್ದರು. ಸಭೆಯಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಶಿವಮೊಗ್ಗ :** ದಿನಾಂಕ 20.11.2021 ರಂದು ಸಮೃದ್ಧ ಸೌಹಾರ್ದ ವಿವಿದೋದ್ಧೇಶ ಸಹಕಾರಿ ನಿ,. ಶಿವಮೊಗ್ಗ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಭಾಗವಗಹಿಸಿ ಸದಸ್ಯರ ಜವಬ್ದಾರಿ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಬಗ್ಗೆ ಮಾಹಿತಿಯನ್ನು ನೀಡಿದರು. ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಹಕಾರಿಯ ಸದಸ್ಯರು ಉಪಸ್ಥಿತರಿದ್ದರು.




**ಹುಲ್ಲೋಳಿ :** ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ ಇದರ 22ನೇ ವಾರ್ಷಿಕ ಮಹಾಸಭೆಯು ಭಾನುವಾರ ದಿನಾಂಕ 14.11.2021 ರಂದು ಮುಂಜಾನೆ 10.00 ಗಂಟೆಗೆ ಸಹಕಾರಿಯ ಕಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ಜಯಪಾಲ ಪಾರೇಸ ಚೇಗಲಾ ಇವರ ಘನಅಧ್ಯಕ್ಷತೆಯಲ್ಲಿ 15 ವಿಷಯಗಳನ್ನು ಚರ್ಚಿಸಲು ನೆಡೆಸಲಾಯಿತು. ಈ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ಪರೀಕ್ಷೆಯಲ್ಲಿ 90% ಕ್ಕಿಂತ ಹೆಚ್ಚು ಅಂಗಳಿಸಿದ ವಿದ್ಯಾರ್ಥಿಗಳಿಗೆ ಕ್ರಮವಾಗಿ 1000/– ರೂ ಮತ್ತು 2000/– ರೂ ಹಾಗೂ ಪ್ರಮಾಣಪತ್ರ ನೀಡಿ ಸನ್ಮಾನಿಸಲಾಯಿತು. ಉತ್ತಮ ಶಾಖೆ ಪ್ರಶಸ್ತಿಯನ್ನು ಈ ಸಲ ಮುಂಗಳಖೋಡ ಶಾಖೆಗೆ ನೀಡಿ ಸಲಹಾ ಸಮಿತಿಯವನ್ನು ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು. ಪ್ರಧಾನ ಕಾರ್ಯದರ್ಶಿಯಾದ ಶ್ರೀ ಆನಂದ ಚೇಗಲಾ ಇವರು ಸಹಕಾರಿಯ 2020–21 ನೇ ಸಾಲಿನ ಜಮಾ–ಖರ್ಚು ಪತ್ರಿಕೆ, ಲಾಭ ಹಾಗೂ ಪತ್ರಕೆ ಆಗೂ ಅಢಾವೆ ಪತ್ರಿಕೆಗಳನ್ನು ಓದಿ ಹೇಳಿ, ಸಹಕಾರಿಯ ಕೋವಿಡ್–19 ಸಂದರ್ಭದಲ್ಲಿಯೂ ಶೇ.99.50% ಸಾಲ ವಸೂಲಾತಿ ಮಾಡಿ. ರೂ. 4ಕೋಟಿ 13 ಲಕ್ಷ ಲಾಭಗಳಿಸಿ ಮುನ್ನೆಡಿದಿದೆ. ಸದಸ್ಯರಿಗೆ 25% ಡಿವಿಡೆಂಟ್ ಘೋಷಿಸಿದರು. ಗ್ರಾಹಕರ, ಸದಸ್ಯರ ಸಹಕಾರದಿಂದ ಸಂಸ್ಥೆಯ 183 ಕೋಟಿ ದುಡಿಯುವ ಬಂಡವಾಲ 169 ಕೋಟಿ ಠೇವಣಿ ಸಂಗ್ರಹಿಸಿ, 103 ಕೋಟಿ ಸಾಲ ವಿತರಣೆ ಎಂದು ಅಧ್ಯಕ್ಷರು ಹೇಳಿದರು. ಈ ಸಂದರ್ಭದಲ್ಲಿ ಸಹಕಾರಿ ಆಡಳಿತ ಮಂಡಲಿ ಸಲಹಾ ಸಮಿತಿ ಸದಸ್ಯರುಗಳು, ಸಿಬ್ಬಂದಿ ವರ್ಗ ಹಾಗೂ ಸರ್ವ ಸದಸ್ಯರುಗಳು ಹಾಜರಿದ್ದರು.



**ವಿಜಯಪುರ :** ಅಥರ್ಗಾ ಗ್ರಾಮೀಣ ಸೌಹಾರ್ದ ಸಹಕಾರಿ ನಿ., ಅಥರ್ಗಾ ಇದರ 5ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 14.11.2021 ರಂದು ಜರುಗಿತು. ಪರಮಪೂಜ್ಯ ಶ್ರೀ ಮುರುಗೇಶ ಸ್ವಾಮೀಜಿಯವರ ಸಾನಿದ್ಯವನ್ನು ವಹಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ವಿಶ್ವನಾಥ ರಾ ಶಿವೂರ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ರವೀಂದ್ರ ಎಮ್ ಬಣಕಾರ ನಿವೃತ್ತ ಡೆಪ್ಯೋಟಿ ಮ್ಯಾನೇಜರ್, ವಿ.ಡಿ.ಸಿ.ಸಿ ಬ್ಯಾಂಕ್, ವಿಜಯಪುರ ಇವರು ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ 27.11.2021 ರಂದು ಶ್ರೀಮತಿ ಪಾರ್ವತಮ್ಮ ಬಿ.ಮಹಿಳಾ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ಸಹಕಾರಿ ಕ್ಷೇತ್ರದಲ್ಲಿ ಖುಷಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ, ಕೊಪ್ಪಳ ಸಹಕಾರಿಯ ಅಧ್ಯಕ್ಷರಾದ ಶ್ರೀ ಆನಂದಕುಮಾರ ಅಕ್ಕಿ ರವರನ್ನು ಸಹಕಾರಿ ವಿಭಾಗದಲ್ಲಿ 2021 ನೇ ಜಿಲ್ಲಾ ಮಟ್ಟದ " ಕರ್ನಾಟಕ ರಾಜ್ಯೋತ್ಸವ" ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸಿ ಮತ್ತು ಆತ್ಮೀಯರಾದ ಶ್ರೀಧರ್ ಲಂಬು ರವರನ್ನು ಅನುದಾನಿತ ಶಾಲಾ ವಿಭಾಗದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.



**ಬೈಂದೂರು :** ಬೈಂದೂರು ಅರ್ಬನ್ ಸೌಹಾರ್ದ ಕ್ರೆಡಿಟ್ ಕೋ – ಆಪರೇಟಿವ್ ಸಂಘ ಬೈಂದೂರು ಇದರ ಇ– ಸ್ಟಾಂಪಿಂಗ್ ವಿಭಾಗದ ಉದ್ಘಾಟನಾ ಸಮಾರಂಭವು ದಿನಾಂಕ 14/11/2021ನೇ ಆದಿತ್ಯವಾರ ಬೆಳಿಗ್ಗೆ 10 ಗಂಟೆಗೆ ಸಂಸ್ಥೆಯ ಮುಖ್ಯ ಕಚೇರಿಯಲ್ಲಿ ನಡೆಯಿತು. ಕಾರ್ಯಕ್ರಮವನ್ನು ಶ್ರೀ ರಾಮ ದೇವಾಡಿಗ ಉಪ ಪ್ರಾಂಶುಪಾಲರು ಶ್ರೀ ಸಿದ್ಧಿ ವಿನಾಯಕ ವಸತಿ ಶಾಲೆ ಹಟ್ಟಿಯಂಗಡಿ ಇವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬೈಂದೂರು ಭಾಗದ ವಕೀಲರುಗಳಾದ ಶ್ರೀ ಮೋಬಿ ಪಿ ಸಿ, ಶ್ರೀ ಮಂಗೇಶ್ ಶ್ಯಾನುಭಾಗ್, ಶ್ರೀ ಪ್ರಶಾಂತ ಪೂಜಾರಿ, ಶ್ರೀ ಲಿಂಗಪ್ಪ ಮೇಸ್ತ, ಶ್ರೀ ಚಂದ್ರಶೇಕರ ಎಸ್. ಪಿ. ಇವರು ಉಪಸ್ಥಿತರಿದ್ದರು. ಸೊಸೈಟಿಯ ಅಧ್ಯಕ್ಷರಾದ ಮಣಿಕಂಠ ಎಸ್ ದೇವಾಡಿಗ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷರಾದ ಮಂಜುನಾಥ್ ಪೂಜಾರಿ ಹಾಗೂ ಎಲ್ಲಾ ನಿರ್ದೇಶಕರು, ಕಾರ್ಯನಿರ್ವಹಣಾಧಿಕಾರಿ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ರಾಜ್ಯದ ಸೌಹಾರ್ದ ಸಹಕಾರಿಗಳ 68ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ



**ಹಾಸನ :** 68ನೇ ಅಖಿಲ ಭಾರತ ಸಹಕಾರ ಸಪ್ತಾಹ" ದ ಅಂಗವಾಗಿ ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿ., ಹಾಸನ ಇದರ ಕಛೇರಿಯಲ್ಲಿ ಧ್ವಜಾರೋಹಣ ಕಾರ್ಯ ಮಾಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಮ್. ರೇವಣಯ್ಯ ರವರು, ಜಿಲ್ಲಾ ಸಂಯೋಜಕರಾದ ಎಂ. ಚಂದ್ರಶೇಖರಯ್ಯ, ಸಿಇಓ ಶ್ರೀ ದೇವರಾಜ್ ಮತ್ತು ಸಿಬ್ಬಂದಿ ಹಾಜರಿದ್ದರು.



**ಚಾಮರಾಜನಗರ :** ದಿನಾಂಕ 14.11.2021 ರಂದು 68ನೇ ಅಖಿಲ ಭಾರತ ಸಹಕಾರ ಸಪ್ತಾಹ" ದ ಅಂಗವಾಗಿ ಸಂಗಮ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ ಕಛೇರಿಯಲ್ಲಿ ಧ್ವಜಾರೋಹಣ ಆಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಶ್ರೀ ರಾಘವೇಂದ್ರ ರವರು ಮತ್ತು ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ್ ರವರು ಮತ್ತು ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.



**ಮಂಡ್ಯ :** ದಿನಾಂಕ 14.11.2021 ರಂದು 68ನೇ "ಅಖಿಲ ಭಾರತ ಸಹಕಾರ ಸಪ್ತಾಹ" ದ ಅಂಗವಾಗಿ ಮಾರುತಿ ಸೌಹಾರ್ದ ಸಹಕಾರಿ ಸಂಘ ನಿ., ಬೆಳ್ಳೂರು ಕ್ರಾಸ್, ನಾಗಮಂಗಲ ತಾಲ್ಲೂಕು ಕಛೇರಿಯಲ್ಲಿ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ಶ್ರೀ ವಿ.ಎನ್ ಸುಬ್ರಹ್ಮಣ್ಯ ರವರು ಮತ್ತು ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.



**ಹಾಸನ :** ದಿನಾಂಕ 14.11.2021 ರಂದು 68ನೇ "ಅಖಿಲ ಭಾರತ ಸಹಕಾರ ಸಪ್ತಾಹ" ದ ಅಂಗವಾಗಿ ಆರ್ಯ ವೈಶ್ಯ ಸೌಹಾರ್ದ ಸಹಕಾರಿ ನಿ., ಬೇಲೂರು, ಹಾಸನ ಜಿಲ್ಲೆ ಕಛೇರಿ ಧ್ವಜಾರೋಹಣ ಆಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಶ್ರೀ ವಿ.ಎ ಪ್ರಕಾಶ್ ರವರು ಮತ್ತು ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.



**ಚಾಮರಾಜನಗರ :** ದಿನಾಂಕ 14.11.2021 ರಂದು 68ನೇ "ಅಖಿಲ ಭಾರತ ಸಹಕಾರ ಸಪ್ತಾಹ" ದ ಅಂಗವಾಗಿ ನವ್ಯ ಕರ್ನಾಟಕ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಕಛೇರಿ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಶ್ರೀ ನಂಜುಂಡಸ್ವಾಮಿ, ಉಪಾಧ್ಯಕ್ಷರಾದ ಶ್ರೀ ಮಂಜು ಹರವೆ ರವರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

**ಹಾಸನ :** ದಿನಾಂಕ 14.11.2021 ರಂದು 68ನೇ "ಅಖಿಲ ಭಾರತ ಸಹಕಾರ ಸಪ್ತಾಹ" ದ ಅಂಗವಾಗಿ ಚಿಗುರು ಸೌಹಾರ್ದ ಪತ್ತಿನ ಸಹಕಾರಿ ನಿ., ಹಾಸನ ಕಛೇರಿ ಧ್ವಜಾರೋಹಣ ಆಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

**ಚಾಮರಾಜನಗರ :** ದಿನಾಂಕ 14.11.2021 ರಂದು 68ನೇ "ಅಖಿಲ ಭಾರತ ಸಹಕಾರ ಸಪ್ತಾಹ" ದ ಅಂಗವಾಗಿ ನವ್ಯ ಕರ್ನಾಟಕ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಕಛೇರಿ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಶ್ರೀ ನಂಜುಂಡಸ್ವಾಮಿ, ಉಪಾಧ್ಯಕ್ಷರಾದ ಶ್ರೀ ಮಂಜು ಹರವೆ ರವರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

**ಗದಗ :** ಭಾಗ್ಯಲಕ್ಷ್ಮೀ ವಿವಿದೋದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರ 68ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಅಂಗವಾಗಿ ಸಹಕಾ-ರಿಯ ಧ್ವಜಾರೋಹಣ ಸಹಕಾರಿಯ ನಿರ್ದೇಶಕಿಯರಾದ ಶ್ರೀಮತಿ ಎಸ ವ್ಹಿ ಪಾಟೀಲ ಅವರ ಅಧ್ಯಕ್ಷತೆಯಲ್ಲಿ 14/11/2021 ರ ರವಿವಾರ ಬೆಳಿಗ್ಗೆ 10.30 ಘಂಟೆಗೆ ಸಹಕಾರಿಯ ಆಫೀಸಿನ ಮುಂಭಾಗದಲ್ಲಿ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಕೆ ಎಸ ಹೊಸಮಠ ಅವರು ನೆರವೆರಿಸಿದರರು ಈ ಸಂದರ್ಭದಲ್ಲಿ ಸಹಕಾರಿಯ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು ಕಾರ್ಯಕ್ರಮ ಯಶಸ್ವಿಗೊಳಿಸಿದರು.

---

**ಗದಗ :** ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿಯ ನಿ., ಗದಗ 68ನೇಯ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಸಹಕಾರ ಧ್ವಜಾರೋಹಣ ಸಹಕಾರಿಯ ಉಪಾಧ್ಯಕ್ಷರ ಶ್ರೀ ದುಂಡಪ್ಪ ನಿಂ ಆಸಂಗಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 14-11-2021 ನೇಯ ರವಿವಾರ ದಿವಸ ಬೆಳಿಗ್ಗೆ 10.30 ಘಂಟೆಗೆ ಸಹಕಾರಿಯ ಆಫೀಸಿನ ಮುಂಭಾಗದಲ್ಲಿ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಎಂ.ಪಾಟೀಲ ಸಾ ॥ ಮಲ್ಲಸಮುದ್ರ ಇವರು ನೇರವೆರಿಸಿದರು. ನಂತರ ಸಹಕಾರಿಯ ನಿರ್ದೇಶಕರಾದ ಶ್ರೀ ಶಾಂತಪ್ಪ ಬಿ ಕಲಕೇರಿ , ಶ್ರೀ ಅಶೋಕ ಎಸ ಸಂಕಣ್ಣವರ , ಶ್ರೀ ಸಿದ್ದನಗೌಡ ಪಿ ಪಾಟೀಲ , ಶ್ರೀ ಶಿವಪ್ರಭು ಎಲ್ ನೀಲಗುಂದ , ಹಾಗೂ ಶ್ರೀಮತಿ ಸವಿತಾ ಎಂ ಪಾಟೀಲ , ಮುಂತಾದವರುಗಳು ಸಹಕಾರಿಯ ಅಂದೋಲದ ಬಗ್ಗೆ ಸಹಕಾರಿಯ ಪರಿಸರ ಮತ್ತು ಉತ್ತಮ ಜೀವನದ ಬಗ್ಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಸಹಕಾರಿಯ ಕ್ಷೇತ್ರದಲ್ಲಿ ವೃತ್ತಿಪರ ಬಗ್ಗೆ ಸಹಕಾರಿಯ ಸಂಘಗಳ ಮಹಿಳೆಯವರಿಗೆ ಹಾಗೂ ಯುವಕರಿಗೆ ಅಧಿಕಾರಿಕರಣ ಬಗ್ಗೆ ವಿವರವಾಗಿ ಮಾತನಾಡಿದರ ಬಳಿಕ ಅಧ್ಯಕ್ಷರ ಸಮಯೋಚವಾಗಿ ನಾಲ್ಕು ಮಾತನಾಡಿದ ಬಳಿಕ ಸಹಕಾರಿಯ ಮ್ಯಾನೇಜರವರು ಶ್ರೀ ಸಿ ವ್ಹಿ ಪಾಟೀಲ ಇವರು ಅಭಾರ ಮನ್ನಣೆ ಮಾಡಿದ ನಂತರ ಸಭೆಯು ಮುಕ್ತಾಯವಾಯಿತು.

---

**ಹಾಸನ :** ದಿನಾಂಕ 14.11.2021 ರಂದು68ನೇ ಅಖಿಲ ಭಾರತ ಸಹಕಾರ ಸಪ್ತಾಹ ದ ಅಂಗವಾಗಿ ಇಂದು ಹಾಸನಾಂಬ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ ಕಛೇರಿ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಶ್ರೀ ಗಣೇಶ್ ಎಸ್.ಜೆ, ರವರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

---

**ಮಂಡ್ಯ :** ದಿನಾಂಕ 14.11.2021 ರಂದು 68ನೇ ಅಖಿಲ ಭಾರತ ಸಹಕಾರ ಸಪ್ತಾಹ ದ ಅಂಗವಾಗಿ ಮಂಡ್ಯ ವರ್ತಕರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಶ್ರೀ ಮಹೇಂದ್ರ ಬಾಬು ರವರು ಹಾಗೂ ನಿರ್ದೇಶಕರು ಮತ್ತು ಸಿಇಓ ಶ್ರೀ ನಾಗರಾಜ್ ಹಾಜರಿದ್ದರು.

---

**ಮಂಡ್ಯ :** ದಿನಾಂಕ 14.11.2021 ರಂದು 68ನೇ ಅಖಿಲ ಭಾರತ ಸಹಕಾರ ಸಪ್ತಾಹ ದ ಅಂಗವಾಗಿ ಇಂದು ಕ್ರಾಂತಿಯೋಗಿ ಶ್ರೀ ಬಸವೇಶ್ವರ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಕಛೇರಿ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಶ್ರೀ ರಮೇಶ್ ರವರು ಹಾಗೂ ನಿರ್ದೇಶಕರು ಹಾಜರಿದ್ದರು.

---

**ಬೆಳಗಾವಿ :** ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., ಯರಗಟ್ಟಿ ಇದರ ವಾರ್ಷಿಕ ಸರ್ವಸಾಧರಣ ಸಭೆಯನ್ನು ಶ್ರೀ ತ್ರಿವಿಧ ದಾಸೋಹ ಮೂರ್ತಿ ಸಿದ್ರಾಯಜ್ಜನವರ ಮಠ ಜಿವಾಪೂರ ರೋಡ ಕಟಕೋಳದಲ್ಲಿ ದಿನಾಂಕ 02.11.2021 ರಂದು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಸಹಕಾರಯ ಸದಸ್ಯರು, ವಿವಿಧ ಮಠಾಧಿಶರು, ಗಣ್ಯರು ಹಾಗೂ ಪತ್ರಿಕೆ ಮಾಧ್ಯಮದವರು, ಆಡಳಿತ ಮಂಡಳಿಯವರು, ಸಹಕಾರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ಸಹಕಾ-ರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಚಿಂದಬರ ಮಾ ಕದಂ ಸಹಕಾರಿಯ ಅಡಾವೆ ಪತ್ರಿಕೆಯನ್ನು ಓದಿದರು. ಹಾಗೂ ಯರಗಟ್ಟಿ ಶಾಖಾ ವ್ಯವಸ್ಥಾಪಕರಾದ ಕುಮಾರ ರವಿ ಈ ಲಕ್ಷೆಟ್ಟಿ ರವು ನಿರೂಪಿಸಿದರು. ಹಾಗೂ ಸಹಕಾರಿಯ ಗುಮಾಸ್ತರಾದ ಶ್ರೀ ನಾಗಪ್ಪ ಸಿ ಕಟಗಿ ರವರು ಪುಸ್ಪಾರ್ಚನೆ ಮಾಡಿದರು. ರಾಮದುರ್ಗ ಶಾಖಾ ವ್ಯವಸ್ಥಾಪಕರಾದ ಶರೀ ಸಂಭಾಜಿ ಮಾ ಕದಂ ರವರು ವಂದಿಸಿದರು. ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ತ್ರಿವಿಧ ದಾಸೋಹ ಮೂರ್ತಿ ಸಿದ್ರಾಯಜ್ಜನವರು ಸಹಕಾರಿಯ ಬೆಳವಣಿಯ ಬಗ್ಗೆ ತಿಳಿಸಿದರು.

---



## ಪ್ರಗತಿ ದುರ್ಗ ಸೌಹಾರ್ದ ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಸಭೆ

**ಚಿತ್ರದುರ್ಗ :** ದಿನಾಂಕ 27.11.2021 ರಂದು ಪ್ರಗತಿದುರ್ಗ ಸೌಹಾರ್ದ ಪತ್ತಿನ ಸಹಕಾರಿ ನಿ,. ಚಿತ್ರದುರ್ಗ ಇದರ 4ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜು ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆ ಹಾಗೂ ಸಹಕಾರ ಕ್ಷೇತ್ರದ ಇತ್ತೀಚಿನ ಬೆಳವಣಿಗೆಯ ಬಗ್ಗೆ ಅಗತ್ಯ ಮಾಹಿತಿ ನೀಡಿದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ಗುರುವಾಯನಕೆರೆ :** ನಾಗರಿಕ ವಿವಿಧೋದ್ದೇಶ ಸೌಹಾರ್ದ ಸಹಕಾರಿ (ನಿ.) ಗುರುವಾಯನಕೆರೆ ಇದರ ಮುಂದಿನ ಐದು ಸಹಕಾರಿ ವರ್ಷಗಳಿಗೆ ಅಧ್ಯಕ್ಷರಾಗಿ ಶ್ರೀ. ಯಂ ಮಧುಕರ ಹೆಬ್ಬಾರ್ ಮತ್ತು ಉಪಾಧ್ಯಕ್ಷರಾಗಿ ಶ್ರೀ. ಐ ಕುಶಾಲಪ್ಪ ಗೌಡ ಆಯ್ಕೆಯಾಗಿರುತ್ತಾರೆ. ನಿರ್ದೇಶಕರುಗಳಾಗಿ ಶ್ರೀಮತಿ ವತ್ಸಲಾ ಯಂ, ಶ್ರೀಮತಿ ಶಾರದಾ ಶೆಟ್ಟಿ, ಶ್ರೀಮತಿ ಸುಧಾಮಣಿ ಆರ್, ಶ್ರೀ ಜಯಪ್ರಕಾಶ್ ಭಟ್ ಸಿ ಹೆಚ್, ಶ್ರೀ. ಹರೀಶ್ ಪಿ, ಶ್ರೀ. ರಾಜೀವ ಸಾಲಿಯಾನ್, ಶ್ರೀಮತಿ ಅತ್ರಾಡಿ ಅಮೃತಾ ಡೀಕಯ್ಯ, ಶ್ರೀ ಯಂ ಜಯಪ್ರಕಾಶ್ ಹೆಬ್ಬಾರ್, ಶ್ರೀ. ರುಕ್ಮಯ್ಯ ಮೂಲ್ಯ, ಶ್ರೀಮತಿ ಮಲ್ಲಿಕಾ ಆರ್ ಇವರುಗಳು ಅವಿರೋಧವಾಗಿ ಆಯ್ಕೆಯಾಗಿರುವುದನ್ನು ಚುನಾವಣಾ ರಿಟರ್ನಿಂಗ್ ಅಧಿಕಾರಿ ಶ್ರೀ ನವೀನ್ ಕುಮಾರ್ ಎಂ ಎಸ್ ಇವರು ಘೋಷಿಸಿದ್ದಾರೆ.



**ಹೊಸಪೇಟೆ :** ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಯಲ್ಲಿ ಅಖಿಲ ಭಾರತ ಸಹಕಾರ ಸಪ್ತಾಹ ದಿನಾಚರಣೆಯನ್ನು ಆಚರಿಸಲಾಗಿದ್ದು, ಇದರಲ್ಲಿ ಆಡಳಿತ ಮಂಡಳಿಯ ಸದಸ್ಯರುಗಳಾದ ಶ್ರೀ ಎಂ. ನೀಲಕಂಠಯ್ಯ ಅಧ್ಯಕ್ಷರು, ಶ್ರೀ ಕೆ. ನಾಗರಾಜ ನಿರ್ದೇಶಕರು, ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ಸಹಕಾರಿಯ ಇತರೆ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ರಾಮನಗರ :** ದಿನಾಂಕ 27.11.2021 ರಂದು ನಿರ್ವಾಹಣೇಶ್ವರ ಹಿರಿಯ ವಿದ್ಯಾರ್ಥಿಗಳ ಹಾಗೂ ನೌಕರರ ಸೌಹಾರ್ದ ಸಹಕಾರಿ ನಿ,. ರಾಮನಗರ, ಇದರ ಆಡಳಿತ ಮಂಡಲಿ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್ ಇವರು ಭಾಗವಹಿಸಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರಿಗೆ ಅಗತ್ಯ ಮಾಹಿತಿ ನೀಡಿದರು.





**ಮಂಡ್ಯ :** ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಮದ್ದೂರು ತಾಲ್ಲೂಕು ಇದರ ಕಛೇರಿಯಲ್ಲಿ "ಭಾರತ ಸಂವಿಧಾನ ದಿನ" ದ ಅಂಗವಾಗಿ 'ಡಾ. ಬಿ.ಆರ್. ಅಂಬೇಡ್ಕರ್" ರವರ ಭಾವಚಿತ್ರ ಇಟ್ಟು ಗೌರವ ಸಮರ್ಪಣೆ ಮಾಡಿರುತ್ತಾರೆ. ಈ ಸಂದರ್ಭದಲ್ಲಿ ಸಹಕಾರಿ ಸಿಇಓರಾದ ಶ್ರೀಮತಿ ಪೂರ್ಣಿಮಾ, ಸಹಾಯಕ ಸಿಬ್ಬಂದಿ ಹಾಜರಿದ್ದರು.



**ಚಾಮರಾಜನಗರ :** 68ನೇ ಅಖಿಲ ಭಾರತ ಸಹಕಾರ ಸಪ್ತಾಹ ದ ಅಂಗವಾಗಿ ಚಾಮರಾಜನಗರದ ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ–ಆಪ್ ಲಿ., ಕಛೇರಿಯಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.



**ಬೆಂಗಳೂರು :** ವೈಭವಗಿರಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ,. ಬೆಂಗಳೂರು, ಈ ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಹಕಾ–ರಿಯ ವಿಶೇಷಾಧಿಕಾರಿಗಳು ಹಾಗೂ ಬೆಂಗಳೂರು ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್‌ಕುಮಾರ್ ಎಮ್. ರವರು ಭಾಗವಹಿಸಿ ಸೌಹಾರ್ದ ಸಹಕಾರಿಯ ಇತ್ತೀಚಿನ ತಿದ್ದುಪಡಿಗಳ ಕುರಿತು ಮಾಹಿತಿ ನೀಡಿದರು.



**ಹಲ್ಲೋಳಿ** : ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹಲ್ಲೋಳಿ ಇದರ ಕಛೇರಿ ಆವರಣದಲ್ಲಿ ದಿನಾಂಕ 14.11.2021 ರಂದು 10.30 ಗಂಟೆಗೆ ಸಹಕಾರಯ ಅಧ್ಯಕ್ಷರಾದ ಶ್ರೀ ಜಯಪಾಲ ಪಾರೇಸ ಚೇಗಲಾ ಇವ–ರಿಂದ ಧ್ವಜಾರೋಹಣ ನೇರವೇರಿಸದರು. ಸೌಹಾರ್ದ ಸಹಕಾರಿ ಕಾಯ್ದೆಗಳ ಬಗ್ಗೆ ಚಿಂತನ ಮಾರಥನ, ಚರ್ಚೆಗಳು ನಡೆದವು. ಈ ಸಂದರ್ಭದಲ್ಲಿ ನಿರ್ದೇಶಕರುಗಳಾದ ರವೀಂದ್ರ ಚೇಗಲಾ, ಪ್ರಕಾಶ ಚೇಗಲಾ, ಜಯಪಾಲ ಚೇಗಲಾ ಭರವಸೆ ಚೇಗಲಾ ಚಿನ್ನಪ್ಪ ಸಪ್ತಸಾಗರ ಹಾಗೂ ಇನ್ನೂಳಿದ ಆಡಳಿತ ಮಂಡಳಿ ಮತ್ತು ಮುಖ್ಯ ಕಾರ್ಯನಿರ್ವಹಕರು ಆನಂದ ಚೇಗಲಾ ಹಾಗೂ ಸರ್ವ ಸಿಬ್ಬಂದಿ ವರ್ಗ ಮತ್ತು ಎಲ್ಲಾ ಸದಸ್ಯರು ಉಪಸ್ಥಿತಿರಿದ್ದರು.



**ಶಿವಮೊಗ್ಗ** : ದಿನಾಂಕ 04–11–2021 ರಂದು ರಾಜ್ಯ ಸರ್ಕಾರಿ ನೌಕರರ ಸೌಹಾರ್ದ ಸಹಕಾರಿ ನಿ, ಶಿವಮೊಗ್ಗ ಕಛೇರಿಯಲ್ಲಿ ದೀಪಾವಳಿ ಪ್ರಯುಕ್ತ ಲಕ್ಷ್ಮೀ ಪೂಜೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಆರ್.ಮೋಹನ್ ಕುಮಾರ್ ರವರು, ಸಹಕಾ–ರಿಯ ಸಂಸ್ಥಾಪಕರು, ಹಾಲಿ ನಿರ್ದೇಶಕರು ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಸಿ.ಎಸ್.ಷಡಾಕ್ಷರಿರವರು, ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಸ್.ಹೆಚ್.ಸುರೇಶ್, ಗೌರವ ಕಾರ್ಯದರ್ಶಿ ಶ್ರೀ ಎನ್.ಎಂ.ರಂಗನಾಥ ಸೇರಿದಂತೆ ಸಹಕಾರಿಯ ನಿರ್ದೇಶಕರು, ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ಮಡಿಕೇರಿ** : ದಿನಾಂಕ: 13.11.2021ರಂದು ಕೊಡಗು ಸೌಹಾರ್ದ ಪತ್ತಿನ ಸಹಕಾರಿ ನಿ., ಮಡಿಕೇರಿ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ಭಾಗವಹಿಸಿ, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, ಸೌಹಾರ್ದ ಸಹಕಾರಿಯ ಚಳುವಳಿ ಮತ್ತು ಸಹಕಾರಿಯ ಸದಸ್ಯರ ಜವಾಬ್ದಾರಿಗಳ ಬಗ್ಗೆ, ಸಹಕಾರಿಯ ನಿರ್ದೇಶಕರು ಮತ್ತು ಸದಸ್ಯರಿಗೆ ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಭಾಗವಹಿಸಿದ್ದರು.




**ಮಡಿಕೇರಿ** : ದಿನಾಂಕ: 09.11.2021ರಂದು ಕೊಡವ ಎಂಟರ್‌ಪ್ರೆನ್ಯೂರ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಮಡಿಕೇರಿ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಭಾಗವಹಿಸಿ, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, ಸೌಹಾರ್ದ ಸಹಕಾರಿಯ ಚಳುವಳಿ ಮತ್ತು ಸಹಕಾರಿಯ ಸದಸ್ಯರ ಜವಾಬ್ದಾರಿಗಳ ಬಗ್ಗೆ, ಸಹಕಾರಿಯ ನಿರ್ದೇಶಕರು ಮತ್ತು ಸದಸ್ಯರಿಗೆ ಮಾಹಿತಿಯನ್ನು ನೀಡಿದರು.



**ಮೈಸೂರು** : ದಿನಾಂಕ 28.11.2021ರಂದು ಪ್ರಭು ಶ್ರೀರಾಮ ಸೌಹಾರ್ದ ಸಹಕಾರಿ ನಿ., ಇಲವಾಲ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಭಾಗವಹಿಸಿ, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, ಸೌಹಾರ್ದ ಸಹಕಾರಿಯ ಚಳುವಳಿ ಮತ್ತು ಸಹಕಾರಿಯ ಸದಸ್ಯರ ಜವಾಬ್ದಾರಿಗಳ ಬಗ್ಗೆ, ಸಹಕಾರಿಯ ನಿರ್ದೇಶಕರು ಮತ್ತು ಸದಸ್ಯರಿಗೆ ಮಾಹಿತಿಯನ್ನು ನೀಡಿದರು.

# ವಿಶ್ವ ಮಣ್ಣಿನ ದಿನಾಚರಣೆಯ ಮಹತ್ವ

– ಶ್ರೀ ಶಂಕರ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.



ವಿಶ್ವ ಮಣ್ಣಿನ ದಿನಾಚರಣೆಯನ್ನು ಪ್ರತಿ ವರ್ಷ ಡಿಸೆಂಬರ್ 5 ರಂದು ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆಯ (FAO) ಆಚರಿಸಲಾಗುತ್ತದೆ. ಇದರ ಕೇಂದ್ರ ಕಚೇರಿ ಇಟಲಿಯ ರೋಮ್ ನಲ್ಲಿದೆ.

ಮಣ್ಣಿನ ವಿಜ್ಞಾನಗಳ ಅಂತರರಾಷ್ಟ್ರೀಯ ಒಕ್ಕೂಟ 2002ರಲ್ಲಿ ವಿಶ್ವ ಮಣ್ಣಿನ ದಿನ ಆಚರಣೆಗೆ ಶಿಫಾರಸು ಮಾಡಿತ್ತು. ಥಾಯ್ಲೆಂಡ್ ನೇತೃತ್ವದಲ್ಲಿ ಎಫ್‌ಎಒ ಸಹಾಯದೊಂದಿಗೆ ವಿಶ್ವ ಮಣ್ಣಿನ ದಿನ ಆಚರಣೆ ಆರಂಭವಾಯಿತು. 2013 ಜೂನ್‌ನಲ್ಲಿ ಎಫ್‌ಎಒ ಒಕ್ಕೂಟವು ಈ ದಿನಾಚರಣೆಗೆ ಬೆಂಬಲ ಸೂಚಿಸಿದ್ದಲ್ಲದೆ ವಿಶ್ವಸಂಸ್ಥೆಯ 68ನೇ ಸಭೆಯಲ್ಲಿ ಇದನ್ನು ಅಧಿಕೃತವಾಗಿ ಅಂಗೀಕರಿಸುವಂತೆ ಮನವಿ ಮಾಡಿತು. ಇದರ ಪರಿಣಾಮ 2013 ಡಿಸೆಂಬರ್‌ನಲ್ಲಿ ವಿಶ್ವಸಂಸ್ಥೆ ಡಿಸೆಂಬರ್ 5ರಂದು ವಿಶ್ವ ಮಣ್ಣಿನ ದಿನಾಚರಣೆಗೆ ಸಮ್ಮತಿ ಸೂಚಿಸಿತು. 2014ರಲ್ಲಿ ಮೊದಲ ಬಾರಿ ಡಿಸೆಂಬರ್ 5 ರಂದು ದಿನಾಚರಣೆ ಅಧಿಕೃತವಾಗಿ ಆಚರಿಸಲಾಯಿತು.

ಪಂಚಭೂತಗಳಲ್ಲಿ ಒಂದಾದ ಮಣ್ಣು ವಿಶ್ವದ ಭಗವಂತನ ಸೃಷ್ಠಿಯ ಅತ್ಯಮೌಲ್ಯ ವಸ್ತು, ಆದ್ದರಿಂದ ಅದರ ಬಗ್ಗೆ ಹೆಚ್ಚು ತಿಳುವಳಿಕೆ ಅಗತ್ಯ ಮತ್ತು ಅದನ್ನ ಸರಿಯಾದ ರೀತಿಯಲ್ಲಿ ಉಪಯೋಗವಾಗುವಂತೆ ಕ್ರಮವಿಡುವುದು ಅಗತ್ಯ. ಜೀವಂತಿಕೆಯ ಮೂಲವೇ ಮಣ್ಣು. ಭೂಮಿಯಲ್ಲಿರುವ ಶೇ.25ಕ್ಕಿಂತಲೂ ಹೆಚ್ಚು ಜೀವಜಾಲಗಳಿಗೆ ಮೂಲವೇ ಮಣ್ಣು ಶೇಕಡಾ 95ರಷ್ಟು ನಮ್ಮ ಆಹಾರ ಮೂಲ ಇದು ಹಣ್ಣು, ತರಕಾರಿ ಮತ್ತು ಧವಸ ಧಾನ್ಯಗಳ ಗುಣಮಟ್ಟ, ಪ್ರಮಾಣ ಎಲ್ಲವೂ ಮಣ್ಣಿನ ಫಲವತ್ತತೆಯನ್ನು ಆಧರಿಸಿರುತ್ತದೆ. ಮಣ್ಣು ಭೂಮಿಯ ಮೇಲಿನ ಪದರವಾಗಿದ್ದು, ಸಾವಯವ ಮತ್ತು ಅಜೈವಿಕ ವಸ್ತುಗಳ ಮಿಶ್ರಣವಾಗಿದೆ, ಇದರಲ್ಲಿ ಸಸ್ಯಗಳು ಬೆಳೆಯುತ್ತವೆ. ಇದು ಸೀಮಿತ ನೈಸರ್ಗಿಕ ಸಂಪನ್ಮೂಲವಾಗಿದೆ. ಮಾನವನ ಸಮಯದ ಪ್ರಮಾಣದಲ್ಲಿ ಅದು ನವೀಕರಿಸಲಾಗುವುದಿಲ್ಲ. ಆದಾಗ್ಯೂ, ಮಾನವನ ಜೀವನೋಪಾಯದಲ್ಲಿ ಮಣ್ಣು ವಹಿಸುವ ಅಗತ್ಯವಾದ ಪಾತ್ರದ ಹೊರತಾಗಿಯೂ, ಅನುಚಿತ ನಿರ್ವಹಣಾ ಪದ್ಧತಿಗಳ ಕಾರಣದಿಂದಾಗಿ ಮಣ್ಣಿನ ಸಂಪನ್ಮೂಲಗಳ ಅವನತಿಗೆ ವಿಶ್ವಾದ್ಯಂತ ಹೆಚ್ಚಳ, ಸಮರ್ಥನೀಯ ತೀವ್ರತೆಯನ್ನು ಚಾಲನೆ ಮಾಡುವ ಜನಸಂಖ್ಯೆಯ ಒತ್ತಡ ಮತ್ತು ಈ ಅಗತ್ಯ ಸಂಪನ್ಮೂಲದ ಮೇಲೆ ಅಸಮರ್ಪಕ ಆಡಳಿತವನ್ನು ಹೊಂದಿದೆ.

ವಿಶ್ವ ಮಣ್ಣಿನ ದಿನ 2017 ಚಟುವಟಿಕೆಗಳು ಆಹಾರ ಭದ್ರತೆ, ಆರೋಗ್ಯಕರ ಪರಿಸರ ವ್ಯವಸ್ಥೆಗಳು ಮತ್ತು ಮಾನವನ ಯೋಗಕ್ಷೇಮಕ್ಕೆ ಮಣ್ಣಿನ ಗುಣಮಟ್ಟದ ಮಹತ್ವದ ಬಗ್ಗೆ ಸಂದೇಶಗಳನ್ನು ಸಂವಹಿಸಲು ಗುರಿಯನ್ನು ಹೊಂದಿವೆ ಕರ್ನಾಟಕದಲ್ಲಿ, 16 ಲಕ್ಷ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಲಾಗಿದೆ ಮತ್ತು 30 ಲಕ್ಷ ಮಣ್ಣಿನ ಆರೋಗ್ಯ ಕಾರ್ಡುಗಳನ್ನು ಆಹಾರದ ಇಳುವರಿ ಮತ್ತು ಗುಣಮಟ್ಟವನ್ನು ಸುಧಾರಿಸಲು ರೈತರಿಗೆ ವಿತರಿಸಲಾಗಿದೆ.

ಅತಿಯಾದ ರಸಗೊಬ್ಬರ ಹಾಗೂ ಕೀಟನಾಶಕಗಳ ಬಳಕೆಯಿಂದ ನೈಸರ್ಗಿಕ ಸಂಪನ್ಮೂಲಗಳಾದ ಮಣ್ಣು, ನೀರು, ನಮ್ಮ ಸುತ್ತಮುತ್ತಲಿನ ವಾತಾವರಣ, ಸಸ್ಯ ಮತ್ತು ಪ್ರಾಣಿ ಸಂಕುಲಗಳು ಮಲಿನಗೊಳ್ಳುವುದರ ಜೊತೆಗೆ ಭೂಮಿಯ ಭೌತಿಕ, ರಾಸಾಯನಿಕ ಹಾಗೂ ಜೈವಿಕ ಗುಣಧರ್ಮಗಳು ಕ್ಷೀಣಿಸುತ್ತಿದ್ದು, ಮಣ್ಣಿನ ಫಲವತ್ತತೆ ಮತ್ತು ಉತ್ಪಾದಕತೆ ಕುಂಠಿತಗೊಳ್ಳುತ್ತಿದೆ. ರಾಸಾಯನಿಕ ವಸ್ತುಗಳ ಬಳಕೆಯಿಂದ ಬರಡಾಗುತ್ತಿರುವ ಭೂಮಿಗೆ ಚೈತನ್ಯ ತುಂಬಲು ಮಣ್ಣಿನಲ್ಲಿ ಸಾವಯವ ಅಂಶ ಹೆಚ್ಚಿಸುವುದು ಅಗತ್ಯ ಮತ್ತು ಅನಿವಾರ್ಯ. ಮಣ್ಣಿನಲ್ಲಿ ಸಾವಯವ ಅಂಶ ಹೆಚ್ಚಾದಂತೆ ಜೀವಿಗಳ ವೃದ್ಧಿ ಹೆಚ್ಚುತ್ತದೆ. ಮಣ್ಣನ್ನು ಆರೋಗ್ಯವಾಗಿಡಲು, ರಾಸಾಯನಿಕ ಗೊಬ್ಬರಗಳನ್ನು ಕನಿಷ್ಠ ಮಟ್ಟದಲ್ಲಿರಿಸಿ ಜೈವಿಕ ಸಾವಯವ ಗೊಬ್ಬರಗಳನ್ನು ಅವಶ್ಯ ಪ್ರಮಾಣದಲ್ಲಿ ಒದಗಿಸಬೇಕು. ಇದರಿಂದ ನಿಸರ್ಗದ ಅಮೂಲ್ಯ ಕೊಡುಗೆಯಾದ ಮಣ್ಣು ಚೈತನ್ಯದಾಯಕವು, ಕ್ರೀಯಾಶೀಲವೂ ಆಗಿರುವಂತೆ ನೋಡಿಕೊಳ್ಳಬಹುದು. ನೆಲ ಜೀವಿಗಳ ಬದುಕಿಗೆ ಮಣ್ಣೆ ಆಧಾರ. ಹುಟ್ಟಿನಿಂದ ಸಾವಿನ ತನಕವು ನಾವು ಮಣ್ಣಿನಲ್ಲಿ ಬದುಕಿಗಾಗಿ ದುಡಿಯುತ್ತೇವೆ. ಸತ್ತಾಗ ಮಣ್ಣನ್ನೇ ಸೇರುತ್ತೇವೆ. ಈ ನೈಸರ್ಗಿಕ ಸಂಪತ್ತನ್ನು ಕಾಪಾಡುವಲ್ಲಿ ನಾವೆಲ್ಲ ಸಹಕರಿಸೋಣ.

# ಮಹಿಳಾ ಸಬಲೀಕರಣದಲ್ಲಿ ಸಹಕಾರಿಗಳ ಪಾತ್ರ

– ಶ್ರೀ ಎಂ.ಎನ್.ಸುಂದರ ರಾಜ್, ಅಧ್ಯಕ್ಷರು, ಕಲಾವಿದರ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ

ಇತ್ತೀಚೆಗೆ ಕೆಲವು ಸಹಕಾರಿಗಳು ಮಹಿಳೆಯರ ಸಬಲೀಕರಣಕ್ಕಾಗಿ ಸ್ವಸಹಾಯ ಸಂಘಗಳಿಗೆ ಆರ್ಥಿಕ ನೆರವು, ಸಾಲ ಸೌಲಭ್ಯ ಇವನ್ನೆಲ್ಲಾ ನೀಡುತ್ತಿರುವುದನ್ನು ಓದಿ ತಿಳಿದಿದ್ದೇವೆ. ಕೆಲವು ಮಹಿಳಾ ಪತ್ತಿನ ಸೌಹಾರ್ದಗಳು ಸಹ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿವೆ. ಇದೊಂದು ಒಳ್ಳೆಯ ಬೆಳವಣಿಗೆ. ಇಂದು ಇಡೀ ವಿಶ್ವದಲ್ಲಿ ಸಹಕಾರಿ ಸಂಸ್ಥೆಗಳು ಸ್ವಯಂ ಸೇವಾ ಸಂಸ್ಥೆಗಳಾಗಿದ್ದು, ಉತ್ತಮ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿವೆ. ಭಾರತದಲ್ಲಿಯೂ ಸಹ ಕೃಷಿ, ಮಾರುಕಟ್ಟೆ ಮುಂತಾದ ಕ್ಷೇತ್ರಗಳಲ್ಲಿ ಹೆಚ್ಚಿನ ಸಾಧನೆ ಮಾಡುತ್ತಾ ಮಹಿಳಾ ಸಬಲೀಕರಣದಲ್ಲಿಯೂ ಅಪಾರ ಆಸಕ್ತಿಯನ್ನು ಹೊಂದಿದೆ.

ಮಹಿಳಾ ಸ್ವಯಂ ಸೇವಾ ಸಂಘಗಳು ಇಂದು ಹಳ್ಳಿಹಳ್ಳಿಗಳಲ್ಲಿ ಕಾಣುತ್ತಿದ್ದೇವೆ. ಇಂತಹ ಸ್ವಯಂ ಸೇವಾ ಸಂಸ್ಥೆಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಪ್ರವೃತ್ತಿ ಹೆಚ್ಚುತ್ತಿರುವುದು ಬೆಳವಣಿಗೆ ಸಂಕೇತವಾಗಿದೆ. ಒಂದು ಅಂದಾಜಿನಂತೆ, ಶೇ.62 ರಷ್ಟು ಗ್ರಾಮೀಣ ಮಹಿಳೆಯರು ಈ ಸ್ವಸಹಾಯ ಸಂಘಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮಹಿಳೆಯರು ಇಂದು ಗ್ರಾಮೀಣ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಅನಕ್ಷರತೆ, ಲಿಂಗ ತಾರತಮ್ಯ, ಮೂಢನಂಬಿಕೆಗಳು ಮುಂತಾದ ವಿಷಯಗಳ ಬಗ್ಗೆ ಆಸಕ್ತಿಯನ್ನು ಹೊಂದಿ ಆ ದಿಸೆಯಲ್ಲಿ ಸೇವೆ ಸಲ್ಲಿಸುತ್ತಿರುವುದನ್ನು ಕಾಣುತ್ತಿದ್ದೇವೆ. ನಮ್ಮ ದೇಶದ ಬಹುಸಂಖ್ಯಾತ ಮಹಿಳೆಯರು ವಾಸಿಸುತ್ತಿರುವುದು ಗ್ರಾಮೀಣ ಪ್ರದೇಶಗಳಲ್ಲಿಯೇ. ಅವರನ್ನು ಕೇವಲ ಮಕ್ಕಳನ್ನು ಹೆರುವ ಯಂತ್ರಗಳನ್ನಾಗಿ ಮಾಡಿಕೊಂಡಿದ್ದ ನಮ್ಮ ಸಮಾಜದಲ್ಲೀಗ ಬದಲಾವಣೆಯ ಗಾಳಿ ಬೀಸುತ್ತಿದೆ. ಗ್ರಾಮೀಣ ಮಹಿಳೆಯರು ಸಧೃಢಗೊಂಡರೆ ಮಾತ್ರ ನಮ್ಮ ಗ್ರಾಮೀಣ ಹಣಕಾಸು ಪರಿಸ್ಥಿತಿ ಸುಧಾರಿಸುತ್ತದೆ ಎಂದು ನಮ್ಮ ಆಡಳಿತಗಾರರು ಭಾವಿಸಿದ್ದಾರೆ. ಹೀಗಾಗಿ ಅವರಿಗೆ ಎಲ್ಲ ರೀತಿಯ ಪ್ರೋತ್ಸಾಹವನ್ನೂ ನೀಡಲಾಗುತ್ತಿದೆ. ಅದರಲ್ಲೂ ನಮ್ಮ ಸಹಕಾರ ಕ್ಷೇತ್ರ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ. ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಬಡವರಲ್ಲಿ ಅತಿ ಬಡವರು ನಮ್ಮ ಮಹಿಳೆಯರು. ಭಾರತವೂ ಇದಕ್ಕೆ ಹೊರತಾಗಿಲ್ಲ. ಬಡತನದ ಬೇಗೆಗೆ ಸಿಲುಕಿ ನಲುಗುತ್ತಿರುವವರಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚು. ಗ್ರಾಮೀಣ ಮಹಿಳೆಯರು ಇನ್ನೂ ಆಹಾರ, ಆರೋಗ್ಯ ಮತ್ತು ಶಿಕ್ಷಣ ಈ ಮೂರು ಕ್ಷೇತ್ರಗಳಲ್ಲಿ ವಂಚಿತರಾಗುತ್ತಿದ್ದಾರೆ. ಮಹಿಳೆಯರ ಶಿಕ್ಷಣ ಮತ್ತು ಸಬಲೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡುವುದು ಇಂದಿನ ಅವಶ್ಯಕತೆಯಾಗಿದೆ.

**ಗ್ರಾಮೀಣ ಮಹಿಳೆಯರ ಸ್ಥಿತಿ :**

ಸಮಾಜೋ ಆರ್ಥಿಕ ಪ್ರಗತಿಯಲ್ಲಿ ಇಂದು ಮಹಿಳೆಯ ಸ್ಥಿತಿ ಸುಧಾರಿಸಿದರೂ ಸಹ ಗ್ರಾಮೀಣ ಮಹಿಳೆಯರಿನ್ನೂ ಕೊನೆಯ ಹಂತದಲ್ಲಿದ್ದಾರೆ ಎಂಬುದು ವಿಶಾದದ ಸಂಗತಿ. ಶೇ.35ಕ್ಕಿಂತ ಹೆಚ್ಚು ಗ್ರಾಮೀಣ ಭಾಗದ ಜನ ಇನ್ನೂ ಬಡತನ ರೇಖೆಗಿಂತ ಕಡಿಮೆಯಿದ್ದಾರೆ. ಎಷ್ಟೇ ಬದಲಾವಣೆಯನ್ನು ತಂದರೂ ಸಹ ಗ್ರಾಮೀಣ ಮಹಿಳೆಯರ ಸ್ಥಿತಿ ಮಾತ್ರ ಸುಧಾರಿಸಿಲ್ಲ. ಅವರಿನ್ನೂ ಅಸಂಘಟಿತ ವಲಯದಲ್ಲಿ ಕೌಶಲ್ಯರಹಿತ ಕೆಲಸಗಳನ್ನೇ ಮಾಡಿಕೊಂಡು ಬರುತ್ತಿದ್ದಾರೆ. ಇಂದಿನವರೆಗೂ ಈ ಸಮಸ್ಯೆಯನ್ನು ಕಂಡುಕೊಂಡು ಬಗೆಹರಿಸುವ ಕಾರ್ಯ ಇನ್ನೂ ಆಗಿಲ್ಲ. ಎಲ್ಲ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವುದು ಎಲ್ಲರ ಕರ್ತವ್ಯವೂ ಆಗಿದೆ. ಈಗ ಗ್ರಾಮೀಣ ಮಹಿಳೆಯರು ಎದುರಿಸುವ ಸಮಸ್ಯೆಗಳೇನು ಎಂಬುದನ್ನು ನೋಡೋಣ.

- ನೈಸರ್ಗಿಕ ಸಂಪನ್ಮೂಲಗಳ ಬಳಕೆಯಲ್ಲಿ ಹಿಂದುಳಿದಿರುವುದು
- ಅನಕ್ಷರತೆ ಮತ್ತು ಸಾಲ
- ಲಿಂಗ ತಾರತಮ್ಯ
- ಕೃಷಿ ಉತ್ಪನ್ನಗಳ ಕಡಿಮೆ ಉತ್ಪಾದನೆ
- ಹಳೆಯ ತಂತ್ರಜ್ಞಾನದ ಬಳಕೆ
- ಸಾಕಷ್ಟು ಆರ್ಥಿಕ ಸೌಲಭ್ಯ ದೊರೆಯದಿರುವುದು
- ಮೂಲಸೌಕರ್ಯಗಳ ಕೊರತೆ
- ಕಾಡುವ ಅನಾರೋಗ್ಯ
- ಆತ್ಮಸ್ಥೈರ್ಯದ ಕೊರತೆ

ಮೇಲಿನ ಸಮಸ್ಯೆಗಳನ್ನು ಪರಿಶೀಲಿಸಿದಲ್ಲಿ ನಮ್ಮ ಸಹಕಾರಿಗಳು ಹೇಗೆ ಈ ಸಮಸ್ಯೆಗಳಿಗೆ ಸ್ಪಂದಿಸಬಹುದೆಂದು ಯೋಜನೆಗಳನ್ನು ರೂಪಿಸಲು ನೆರವಾಗುತ್ತದೆ. ಸಹಕಾರಿ ಸಂಸ್ಥೆಗಳು ಪ್ರಜಾಪ್ರಭುತ್ವ ರೀತ್ಯಾ ಸಂಘಟನೆಗೊಂಡವುಗಳಾದ್ದರಿಂದ ಸಾಂಘಿಕ ಕಾರ್ಯಗಳ ಬಗ್ಗೆ ಹೆಚ್ಚು ಮುತುವರ್ಜಿ ವಹಿಸಲು ಸಾಧ್ಯತೆಯಿದೆ. ಸದಸ್ಯರ ಹಿತಾಸಕ್ತಿಗಳನ್ನು ಕಾಪಾಡುವುದಲ್ಲದೆ, ಕೆಲ ಮಧ್ಯವರ್ತಿಗಳ, ಹೆಚ್ಚು ಬಡ್ಡಿ ಪಡೆಯುವ ವ್ಯಕ್ತಿಗಳಿಂದಾಗುವ ಶೋಷಣೆಯನ್ನೂ ತಪ್ಪಿಸಬಹುದು. ಮಹಿಳಾ ಸಬಲೀಕರಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲೂ ಸಹ ಸಾಧ್ಯವಿದೆ. ಏಕೆಂದರೆ ಮಹಿಳೆಯರು ಆರ್ಥಿಕವಾಗಿ ಸಬಲರಾದರೆ ಮಾತ್ರ ಕುಟುಂಬದ ಸ್ಥಿತಿ ಉತ್ತಮವಾಗುವುದು. ಅವರ ಸ್ಥಿತಿ ಸುಧಾರಣೆಗೆ ಪ್ರತಿಯೊಂದು ಸಹಕಾರಿಯೂ ಅವಶ್ಯಕತೆ ಮತ್ತು ಪರಿಸ್ಥಿತಿಗೆ ತಕ್ಕಂತೆ ಕಾರ್ಯಕ್ರಮಗಳನ್ನು ರೂಪಿಸಬಹುದು.

40ನೇ ಪುಟಕ್ಕೆ.....

# ಸ್ವಯಂ ದಕ್ಷತೆ (Self efficacy)

– ಶ್ರೀ ಧೀರೇಂದ್ರ ನಾಗರಹಳ್ಳಿ

**ಕೆಳಗಿನ ಎರಡು ವ್ಯಕ್ತಿತ್ವದ ಗುಣ–ಲಕ್ಷಣಗಳನ್ನು ಗಮನಿಸಿ :**

**ಮೊದಲನೆಯ ವ್ಯಕ್ತಿತ್ವ ಎರಡನೆಯ ವ್ಯಕ್ತಿತ್ವ :**

- ತಮ್ಮನ್ನು ತಾವು ಎಂತಹ ಪರಿಸ್ಥಿತಿಗಾದರೂ ಅಳವಡಿಸಿಕೊಳ್ಳುವವರು.
- ಸಲವಾಲುಗಳನ್ನು ಬಯಸುವವರು.
- ಹಿಡಿದ ಕೆಲಸವನ್ನು ಮುಗಿಯುವವರೆಗೂ ವಿರಮಿಸದವರು.
- ತಮ್ಮನ್ನು ತಾವು ಕೆಲವೊಂದು ಪರಿಸ್ಥಿತಿಗೆ ಅಳವಡಿಸಿಕೊಳ್ಳಲು ಹಿಂಜರಿಯುವವರು.
- ತುಂಬಾ ಬೇಗನೆ ಕೈಚೆಲ್ಲಿ ಕುಳಿತುಕೊಳ್ಳುವವರು.
- ಕೆಲಸಗಳ ಸಾಧ್ಯತೆಗಳ ಬಗ್ಗೆ ಆತಂಕಗೊಳ್ಳುವವರು.

ಮೇಲಿನ ಎರಡು ವ್ಯಕ್ತಿತ್ವಗಳು ಒಂದಕ್ಕೊಂದು ತದ್ವಿರುದ್ದವಾದವು.ಇದನ್ನೆ ನಾವು ಸ್ವಯಂ ದಕ್ಷತೆ ಎನ್ನುವುದು. ಮೊದಲನೆ ವ್ಯಕ್ತಿತ್ವದ್ದು ಎತ್ತರ ಮಟ್ಟದ ಸ್ವಯಂ ದಕ್ಷತೆ ಮತ್ತು ಎರಡನೆಯ ವ್ಯಕ್ತಿತ್ವದ್ದು ಕೆಳ ಮಟ್ಟದ ಸ್ವಯಂ ದಕ್ಷತೆ ಎನ್ನಬಹುದು.

ಆಮೇರಿಕಾದ ಪ್ರಖ್ಯಾತ ಮನಃಶಾಸ್ತ್ರಜ್ಞ ಆಲ್ಬರ್ಟ್ ಬಂಡೂರ ಅವರ ವ್ಯಖ್ಯಾನವನ್ನು ಗಮನಿಸೋಣ :

According to Albert Bandura, self-efficacy is "the belief in one's capabilities to organize and execute the courses of action required to manage prospective situations." Self-efficacy is a person's belief in his or her ability to succeed in a particular situation. Bandura described these beliefs as determinants of how people think, behave, and feel.

ನಮ್ಮ ಸಾಮರ್ಥ್ಯದಲ್ಲಿ ನಮಗಿರುವ ವಿಶ್ವಾಸವನ್ನು ಸಂಘಟಿಸಿ ಅದನ್ನು ವ್ಯವಸ್ಥಿತವಾಗಿ ಕಾರ್ಯರೂಪಕ್ಕೆ ತಂದು ನಿರೀಕ್ಷಿತ ಪರಿಸ್ಥಿತಿಯನ್ನು ನಿರ್ವಹಿಸುವುದನ್ನು ಸ್ವಯಂ ದಕ್ಷತೆ (self-efficacy) ಎನ್ನಬಹುದು.

ಅರ್ಥವಾಗಲಿಲ್ಲ ಅಲ್ಲವೆ? ಹೌದು. ನಮಗೆ Self-confidence (ಆತ್ಮ ವಿಶ್ವಾಸ) ಗೊತ್ತು ಆದರೆ ಇದೇನು self-efficacy (ಸ್ವಯಂ ದಕ್ಷತೆ)

ಈ ಸ್ವಯಂ ದಕ್ಷತೆ ಎನ್ನುವುದು ನಮ್ಮ ಯಶಸ್ಸು ಮತ್ತು ನಮ್ಮ ಕಾರ್ಯಗಳ ಪೂರ್ಣಗೊಳುವಿಕೆಯನ್ನು ನಿರ್ಧಾರ ಮಾಡುತ್ತದೆ. ನೋಡಿ ಯಾವುದೆ ಕೆಲಸಕ್ಕೆ ಅಣಿಯಾಗಿದ್ದೇವೆ ಅಂದುಕೊಳ್ಳಿ ಆಗ ಒಂದು ಸಣ್ಣದೊಂದು ಮಿಂಚು ತಲೆಯಲ್ಲಿ ಹೊಳೆಯುತ್ತದೆ – ಹೌದು ನಾನು ಈ ಕೆಲಸವನ್ನು ಮಾಡಿ ಮುಗಿಸುತ್ತೇನೆ" ಎನ್ನುವುದು. ಇದನ್ನೆ ನಾವು ಸ್ವಯಂದಕ್ಷತೆ ಎನ್ನಬಹುದು.

ಹೌದು ! " ನಾನು ಈ ಕೆಲಸವನ್ನು ಮಾಡಿ ಮುಗಿಸುತ್ತೇನೆ" ಎನ್ನುವ ಭಾವನೆ ಹೇಗೆ ನಮ್ಮಲ್ಲಿ ಮೂಡಿತು.ಎನ್ನುವುದನ್ನು ಕೆಳಗಿನ ಕೆಲವು ಅಂಶಗಳು ಕಾರಣವಾಗಿವೆ ಎಂದು ಹೇಳಬಹುದು:

1. ವ್ಯಕ್ತಿಯು ಹಿಂದೆ ಮಾಡಿರುವ ಕೆಲಸಗಳ ನೈಪುಣ್ಯತೆಯ ಅನುಭವಗಳು
2. ಇನ್ನೊಬ್ಬರು ಪರಿಸ್ಥಿತಿಯನ್ನು ನಿರ್ವಹಿಸಿರುವ/ನಿರ್ವಹಿಸುತ್ತಿರುವುದನ್ನು ಗಮನಿಸವುದು:
3. ಸ್ಪೂರ್ತಿಯ ಮಾತುಗಳು
4. ಧನಾತ್ಮಕ ಭಾವನೆಗಳು

**1. ವ್ಯಕ್ತಿಯು ಹಿಂದೆ ಮಾಡಿರುವ ಕೆಲಸಗಳ ನೈಪುಣ್ಯತೆಯ ಅನುಭವಗಳು:** ಇದನ್ನು ಒಂದು ಅತೀ ಸರಳ ಉದಾಹರಣೆಯಿಂದ ವಿವರಿಸಬಹುದು.ನಮಗೆ ಶಾಲೆಗಳಲ್ಲಿ ಮೊದಲು ಒಂದಂಕಿಯ ಸಂಖ್ಯೆಗಳನ್ನು ಹೇಗೆ ಕೂಡುವುದು ಎಂದು ಹೇಳಿಕೊಡುತ್ತಾರೆ.ಒಂದಂಕಿಯ ಸಂಖ್ಯೆಗಳನ್ನು ಕೂಡುವುದರಲ್ಲಿ ಪರಿಣಿತಿ ಬಂದ ಮೇಲೆ ನಂತರ ಎರಡಂಕಿಯನ್ನು ಕೂಡುವುದನ್ನು ಹೇಳಿಕೊಡುತ್ತಾರೆ.ಇಲ್ಲಿ ಗಮನಿಸಬೇಕಾದ ಅಂಶವೆಂದರೆ ನಮಗೆ ಒಂದಂಕಿಯನ್ನು ಕೂಡುವುದರಲ್ಲಿ ವಿಶ್ವಾಸ ಬಂದಿರುತ್ತದೆ ಆ ವಿಶ್ವಾಸವನ್ನೆ ನಾವು ನಮ್ಮ ಮುಂದಿನ ಕೆಲಸವಾದ ಎರಡಂಕಿಯನ್ನು ಕೂಡುವಲ್ಲಿ ಬಳಸಿಕೊಳ್ಳುತ್ತೇವೆ.

**2. ಇನ್ನೊಬ್ಬರು ಪರಿಸ್ಥಿತಿಯನ್ನು ನಿರ್ವಹಿಸಿರುವ/ನಿರ್ವಹಿಸುತ್ತಿರುವುದನ್ನು ಗಮನಿಸವುದು:** ಕಛೇರಿಗಳಲ್ಲಿ ಸಹಜವಾಗಿ ಒಂದೆ ತೆರನಾದ ಕೆಲಸಗಳು ಬರುವುದಿಲ್ಲ.ಕೆಲವು ಕೆಲಸಗಳು ತುಂಬಾ ಸಂಕೀರ್ಣವಾಗಿರುತ್ತವೆ ಮತ್ತು ಏಕತಾನತೆಯಿಂದ ಕೂಡಿರುವುದಲ್ಲಿ,ಇಂತಹ ಪರಿಸ್ಥಿತಿಯಲ್ಲಿ ನಾವು ಈ ಮೊದಲು ನಮ್ಮ ಸಹೋದ್ಯೋಗಿ ಹೇಗೆ ನಿಭಾಯಿಸಿದ್ದಾರೆ ಅನ್ನುವುದನ್ನು ನೋಡಿರುತ್ತೇವೆ ಮತ್ತು ಅದನ್ನು ನಮಗೆ ಬಂದ ಪರಿಸ್ಥಿತಿಗೆ ಅಲ್ಪ–ಸ್ವಲ್ಪ ಬದಲಾವಣೆ ಮಾಡಿ ಅಥವಾ ಯಥಾವತ್ತಾಗಿಯಾದರೂ ಅಳವಡಿಸಿ ಪರಿಸ್ಥಿತಿಯನ್ನು ನಿಭಾಯಿಸಲು ಪ್ರಯತ್ನಿಸುತ್ತೇವೆ.

3. ಸ್ಪೂರ್ತಿಯ ಮಾತುಗಳು: ನಮಗೆ ಕೆಲಸವು ಸಾಧ್ಯವೋ / ಅಸಾಧ್ಯವೋ ಅದರ ಕೆಲವೊಮ್ಮೆ ಸ್ಪೂರ್ತಿಯ ಮಾತುಗಳಿಂದ ಕೆಲಸವನ್ನು ನಿಭಾಯಿಸಲು ಹುಮ್ಮಸ್ಸು ಬರುತ್ತದೆ

ಉದಾಹರಣೆಗೆ : "ನೀನು ಈ ಕೆಲಸವನ್ನು ಮಾಡೇ ಮಾಡುತ್ತೀಯ"

– "ನಿನಗೆ ಈ ಕೆಲಸವು ತುಂಬಾ ಸುಲಭವಾದದ್ದು"

**4. ಧನಾತ್ಮಕ ಭಾವನೆಗಳು:** ನಾವು ಯಾವುದಾದರೂ ಕೆಲಸಕ್ಕೆ ಮುಂದಾದಾಗ ಆಂತರ್ಯದಿಂದ " ನಾನು ಈ ಕೆಲಸವನ್ನು ಮಾಡಬಲ್ಲೆ" ಎನ್ನುವುದು ನಮ್ಮ ಸ್ವಯಂ ದಕ್ಷತೆಯನ್ನು ನಿರೂಪಿಸುತ್ತದೆ,

ನೆನಪಿಡಿ ಸ್ವಯಂ ದಕ್ಷತೆ ಎನ್ನುವುದು ಹುಟ್ಟಿನಿಂದ ರಕ್ತಗತವಾಗಿ ಬರುವಂತಹದ್ದಲ್ಲ.ಅದನ್ನು ನಾವು ಕಾಲಕ್ರಮದಲ್ಲಿ ರೂಢಿಸಿಕೊಳ್ಳಬಹುದು.

According to Bandura Self Efficacy is – Learned Human pattern of thinking"

ಅಂದರೆ ಸ್ವಯಂ ದಕ್ಷತೆಯನ್ನು ನಾವು ವ್ಯವಸ್ಥಿತವಾಗಿ ರೂಢಿಸಿಕೊಳ್ಳಬಹುದು.

**ಸ್ವಯಂ ದಕ್ಷತೆ ಎತ್ತರ ಮಟ್ಟದಲ್ಲಿರುವವರು :**

– ತಾವು ನಿರ್ವಹಿಸುವ ಕೆಲಸಗಳಲ್ಲಿ ಆಳವಾದ ಆಸಕ್ತಿಯನ್ನು ಬೆಳೆಸಿಕೊಂಡಿರುತ್ತಾರೆ

– ತಮ್ಮ ಕೆಲಸ ಹಾಗೂ ಆಸಕ್ತಿಗಳಲ್ಲಿ ಬದ್ಧತೆ ಅಳವಡಿಸಿಕೊಂಡಿರುತ್ತಾರೆ

– ಹಿನ್ನಡೆಗಳಿಂದ ತುಂಬಾ ಬೇಗನೆ ಚೇತರಿಸಿಕೊಳ್ಳುತ್ತಾರೆ

– ಯಾವುದೇ ಸವಾಲಿನ ಕೆಲಸಗಳನ್ನು ಪರಿಣಿತಿ ಹೊಂದುವಂತೆ ಕೆಲಸದಲ್ಲಿ ನಿರತರಾಗಿರುತಾರೆ

ಬಹುಶಃ ಸ್ವಯಂದಕ್ಷತೆಯ ಬಗ್ಗೆ ಒಂದು ಅಂದಾಜು ದೊರಕಿರಬಹುದು ,ಈಗ ನಾವು ಆತ್ಮ ವಿಶ್ವಾಸವನ್ನು ಸ್ವಯಂದಕ್ಷತೆಯ ನೆಲೆಯಲ್ಲಿ ನೋಡಿದಾಗ ಸ್ವಯಂದಕ್ಷತೆಯೂ ಇನ್ನೂ ಸ್ಪಷ್ಟವಾಗ ಬಹುದು.

**ಹಾಗಿದ್ದರೆ ಆತ್ಮ ವಿಶ್ವಾಸವೆಂದರೇನು?**

ತುಂಬಾ ಸರಳವಾಗಿ ಹೇಳಬೇಕೆಂದರೆ ವಿಶ್ವಾಸದ ಶಕ್ತಿಯನ್ನೇ ನಾವು ಆತ್ಮ ವಿಶ್ವಾಸವೆನ್ನ ಬಹುದು.

Confidence ಎನ್ನುವುದು ಲ್ಯಾಟೀನ್ ಭಾಷೆಯ fidere' ಎನ್ನುವುದರಿಂದ ಒಳಗೊಂಡಿದೆ. ' fidere"ಅಂದರೆ ' to trust' ಎನ್ನಬಹುದು.ಹಾಗಾಗಿ self-confidence means having trust in ourselves ಅಂದರೆ ನಮ್ಮ ಮೇಲೆ ನಮಗಿರುವ ವಿಶ್ವಾಸವನ್ನೇ ಆತ್ಮ ವಿಶ್ವಾಸವೆನ್ನುತ್ತೇವೆ. ಮತ್ತು ಈ ಆತ್ಮವಿಶ್ವಾಸವು ಸ್ವಯಂ ದಕ್ಷತೆ ಮತ್ತು ಆತ್ಮ ಗೌರಮವದ (self-esteem) ಮೇಲೆ ಅವಲಂಬಿತವಾಗಿರುತ್ತೆ. ಏನಿದು ಆತ್ಮ ಗೌರವವೆಂದರೆ? ವ್ಯಕ್ತಿತ್ವದ ಬಗ್ಗೆ ಇರುವ ಒಟ್ಟಾರೆ ಅಭಿಪ್ರಾಯವನ್ನೇ ಆತ್ಮ ಗೌರವವೆನ್ನುತ್ತೇವೆ.

ಬಹುಶಃ ಈಗ ನಮಗೆ ಆತ್ಮವಿಶ್ವಾಸ, ಸ್ವಯಂ ದಕ್ಷತೆ ಮತ್ತು ಆತ್ಮ ಗೌರವಗಳ ನಡುವಿರುವ ವ್ಯಾತ್ಯಾಸವೇನೆಂದು ಸ್ಪಷ್ಟವಾಗಿರಬಹುದು.

---

.....39ನೇ ಪುಟದಿಂದ

ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ, ಸಹಕಾರಿ ವ್ಯವಸಾಯ ಪದ್ಧತಿ ಅನುಸರಿಸುವುದು, ಹಾಲು ಉತ್ಪಾದಕರ ಸಹಕಾರಿಗಳಿಗೆ ಪ್ರೋತ್ಸಾಹ ಮತ್ತು ಇವುಗಳ ಜೊತೆಗೆ ಈ ಕೆಳಕಂಡ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಹುದಾಗಿದೆ.

- ಸೌಲಭ್ಯಗಳನ್ನು ಒದಗಿಸುವ ಮೂಲಕ ಸಮೂಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು
- ಗ್ರಾಮೀಣ ಮಹಿಳೆಯರ ಚಟುವಟಿಕೆಗಳಿಗೆ ಕಾನೂನು ಬದ್ಧ ಮಾನ್ಯತೆ ನೀಡುವುದು
- ಗ್ರಾಮೀಣ ಮಹಿಳೆಯರ ಸಹಕಾರಿ ವೇದಿಕೆಗಳ ನಿರ್ಮಾಣ ಮತ್ತು ಸಮಸ್ಯೆಗಳ ಪರಿಶೀಲನೆ
- ಸಾಲ ಸೌಲಭ್ಯಗಳನ್ನು ನೀಡುವುದು
- ಸರ್ಕಾರಿ ಇಲಾಖೆಗಳ ಮೂಲಕ ಗ್ರಾಮೀಣ ಮಹಿಳೆಯರಿಗಿರುವ ಸೌಲಭ್ಯಗಳನ್ನು ತಿಳಿಸಿಕೊಡುವುದು ಮತ್ತು ಸೌಲಭ್ಯ ಒದಗಿಸಲು ನೆರವಾಗುವುದು
- ಗ್ರಾಮೀಣ ಮಹಿಳೆಯರ ನಕಾರಾತ್ಮಕ ಪ್ರವೃತ್ತಿಯನ್ನು ಹೋಗಲಾಡಿಸಿ, ಹೊಸ ಭರವಸೆಯನ್ನು ಮೂಡಿಸುವುದು
- ತರಬೇತಿ ಶಿಬಿರಗಳನ್ನೇರ್ಪಡಿಸಿ, ಗ್ರಾಮೀಣ ಮಹಿಳೆಯರ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡು ಕೊಳ್ಳುವುದು

ಇದರ ಜೊತೆಗೆ ಗ್ರಾಮೀಣ ಮಹಿಳೆಯರ ಆದಾಯ ಹೆಚ್ಚಳಕ್ಕೆ ನೆರವಾಗುವುದು, ಎಲ್ಲ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು, ಗ್ರಾಮೀಣ ಭಾಗದಲ್ಲಿ ಮಹಿಳೆಯರಿಗಾಗಿ ಉಚಿತ ಆರೋಗ್ಯ ಶಿಬಿರಗಳನ್ನು ಏರ್ಪಡಿಸುವುದು ಮುಂತಾದ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು. ಹಾಗೆಯೇ ಸಹಕಾರಿ ಬೇಸಾಯ ಪದ್ಧತಿಯನ್ನು ಉತ್ತೇಜಿಸುವುದೂ ಸಹ ಜನರಲ್ಲಿ ಸಾಮರಸ್ಯ ಮತ್ತು ಒಟ್ಟಾಗಿ ದುಡಿಯುವ ಪ್ರವೃತ್ತಿಯನ್ನು ಬೆಳೆಸುತ್ತದೆ. ಹಾಲು ಉತ್ಪಾದನೆಗೆ ಒತ್ತು ನೀಡಿ, ಹೆಚ್ಚು ಹೆಚ್ಚು ಮಹಿಳೆಯರು ಸಹಕಾರಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ನೋಡಿಕೊಳ್ಳುವುದು ಸಹ ಅತ್ಯಂತ ಅವಶ್ಯಕವಾಗಿದೆ.

ಇಂದಿನ ಸಮಾಜದಲ್ಲಿ ಗ್ರಾಮೀಣ ಆರ್ಥಿಕ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ ಅಸದಳ. ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳೂ ಸಹ ಈ ನಿಟ್ಟಿನಲ್ಲಿ ಪ್ರಯತ್ನಿಸುತ್ತಿವೆ. ಅದರೊಂದಿಗೆ ಕೈಜೋಡಿಸಿದಲ್ಲಿ ನಮ್ಮ ಸಹಕಾರಿಗೂ ಉತ್ತಮ ಹೆಸರು ಬರುತ್ತದೆ. ನಮ್ಮ ಸೌಹಾರ್ದ ಸಹಕಾರಿ ಸಂಸ್ಥೆಗಳು ತಮ್ಮ ಇತಿಮಿತಿಯಲ್ಲಿ ಸರ್ಕಾರದ ಕಾರ್ಯಕ್ರಮಗಳ ಸಂಪೂರ್ಣ ಅರಿವನ್ನು ಹೊಂದಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ, ತಮ್ಮ ಪರಿಶ್ರಮದಿಂದ ಆರ್ಥಿಕ ಸುಧಾರಣೆ ಮಾಡಿಕೊಂಡಿರುವ ಗ್ರಾಮೀಣ ಮಹಿಳೆಯರನ್ನು ಗುರುತಿಸಿ ಅವರ ಯಶೋಗಾಥೆಯನ್ನು ಮಾಧ್ಯಮದ ಮೂಲಕ ಪ್ರಸ್ತುತ ಪಡಿಸುವುದು, ಸಾಲಸೌಲಭ್ಯ ಒದಗಿಸಿ, ಅದನ್ನು ಯೋಗ್ಯ ಉದ್ದೇಶಗಳಿಗೆ ಮಾತ್ರ ಬಳಕೆಯಾಗುವಂತೆ ನೋಡಿಕೊಳ್ಳುವುದು ಮುಂತಾದ ಕಾರ್ಯಕ್ರಮಗಳನ್ನು ಕೈಗೊಂಡಲ್ಲಿ ನಮ್ಮ ಸಹಕಾರಿ ಚಳುವಳಿಗೆ ಒಳ್ಳೆಯ ಹೆಸರು ಬರುತ್ತದೆ ಮತ್ತು ಸಾರ್ಥಕತೆಯ ಭಾವ ಮನದಲ್ಲಿ ಮೂಡುತ್ತದೆ.

# ಕೇಂದ್ರ ಸರ್ಕಾರದಲ್ಲಿ ಸಹಕಾರ ಸಚಿವಾಲಯ - ಒಂದು ಅವಲೋಕನ



– ಶ್ರೀ ಸಿ.ಎನ್ ಪರಶಿವಮೂರ್ತಿ

ಸಹಕಾರಿ ಸಂಸ್ಥೆಗಳ ಅಸ್ತಿತ್ವ ಬಂದಿರುವುದು ಅಂತರ ರಾಷ್ಟ್ರೀಯ ಸಹಕಾರಿ ಒಕ್ಕೂಟ ರಚಿಸಿದ ಏಳು ಸಹಕಾರಿ ತತ್ವಗಳಡಿ. ಅವುಗಳೆಂದರೆ (1) ಸ್ವಯಂ ಪ್ರೇರಿತ ಮುಕ್ತ ಸದಸ್ಯತ್ವ (2) ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ (3) ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಪಾಲು (4) ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ (5) ಶಿಕ್ಷಣ, ತರಬೇತಿ ಮತ್ತು ಪ್ರಚಾರ (6) ಸಹಕಾರಿಗಳಲ್ಲಿ ಪರಸ್ಪರ ಸಹಕಾರ ಮತ್ತು (7) ಸಾಮಾಜಿಕ ಕಳಕಳಿ. ಭಾರತದಲ್ಲಿ ಶಾಸನಾತ್ಮಕ ಸಹಕಾರ ಚಳುವಳಿ ಪ್ರಾರಂಭವಾದದ್ದು 1904ರ ಸಹಕಾರಿ ಕಾನೂನಿನಡಿ. ಭಾರತ ಸ್ವಾತಂತ್ರ್ಯ ಗಳಿಸಿದ ನಂತರ ದೇಶದ ಅಭಿವೃದ್ಧಿಗೆ ಸರಕಾರಿ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳ ಜೊತೆಗೆ ಮೂರನೆ ಮಾರ್ಗವಾಗಿ ಸಹಕಾರಿ ಸಂಸ್ಥೆಗಳ ಸ್ಥಾಪನೆಯನ್ನು ಅಂಗೀಕರಿಸಲಾಯಿತು.

ಭಾರತದಲ್ಲಿ ಸುಮಾರು 8,50,000 ಸಹಕಾರಿ ಸಂಸ್ಥೆಗಳು ನೋಂದಾವಣಿಯಾಗಿದ್ದು, ಅವುಗಳ ಸದಸ್ಯತ್ವ 29 ಕೋಟಿಗಿಂತ ಹೆಚ್ಚಿದೆ. ಇದರ ಜೊತೆಗೆ ಸಹಕಾರಿ ಸಂಸ್ಥೆಗಳನ್ನು ಅವಲಂಬಿಸಿದ ವ್ಯಕ್ತಿಗಳು ಪರೋಕ್ಷವಾಗಿ ಸಹಕಾರಿ ಸಂಸ್ಥೆಗಳನ್ನು ಅವಲಂಬಿಸಿವೆ. ಈ ಸಂಸ್ಥೆಗಳು ದುಡಿಯುವ ಬಂಡವಾಳ ಸುಮಾರು ರೂ.12,50,000 ಲಕ್ಷ ಕೋಟಿ ಇದ್ದು ರಾಷ್ಟ್ರದ ಶೇ.90 ರಷ್ಟು ಗ್ರಾಮ ಮತ್ತು ಪಟ್ಟಣ ಪ್ರದೇಶಕ್ಕೆ ವಿಸ್ತರಿಸಿದೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 40000 ಸಹಕಾರಿ ಸಂಘಗಳು ಮತ್ತು 5500 ಸೌಹಾರ್ದ ಕಾಯಿದೆಯಡಿ ನೋಂದಾವಣಿಯಾದ ಸಂಸ್ಥೆಗಳನ್ನು ಅಂದಾಜು 3 ಕೋಟಿ ಸದಸ್ಯರಿದ್ದಾರೆ. ದುಡಿಯುವ ಬಂಡವಾಳ ಸುಮಾರು 2 ಲಕ್ಷ ಕೋಟಿ ಇದೆ.

"ಸಹಕಾರ" ಎಂಬ ವಿಷಯ ಸಂವಿಧಾನದ ರಾಜ್ಯ ಪಟ್ಟಿಯಲ್ಲಿ ಸೇರಿಸಿದ್ದು, ಸಹಕಾರ ವಿಷಯದ ಬಗ್ಗೆ ಶಾಸನ ರಚಿಸಲು ರಾಜ್ಯ ಸರ್ಕಾರಗಳಿಗೆ ಸಾರ್ವಭೌಮತ್ವ ನೀಡಲಾಗಿದೆ. ಆದ್ದರಿಂದ ಕೇಂದ್ರ ಸರ್ಕಾರ 97ನೇ ಸಂವಿಧಾನ ತಿದ್ದುಪಡಿ ಮುಖಾಂತರ ಅನುಚ್ಛೇದ 19, 43ಬಿ ಹಾಗೂ 246 ಕ್ಕೆ 2011 ರಲ್ಲಿ ತಿದ್ದುಪಡಿ ತಂದು ಸಹಕಾರ ಸಂಸ್ಥೆಗಳು ಸ್ಥಾಪನೆಯನ್ನು ಮೂಲ ಭೂತಹಕ್ಕಾಗಿ ಮತ್ತು ಸಹಕಾರಿ ಸಂಸ್ಥೆಗಳ ಸ್ಥಾಪನೆಗೆ ರಾಜ್ಯ ಸರ್ಕಾರಗಳು ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂ ನಿಯಂತ್ರಿತ ಸಂಸ್ಥೆಗಳೆಂದು ಕಾಯಿದೆ ರೂಪಿಸುವುದರ ಜೊತೆಗೆ, ಭಾಗ ಖಫಿಬಿ ಅಡಿ, ಮಂಡಳಿ ರಚನೆ, ಚುನಾವಣೆ, ಮಂಡಳಿಗಳ ರದ್ದತಿ/ ಅಮಾನತ್ತು, ಸ್ವತಂತ್ರ ಲೆಕ್ಕ ಪರಿಶೋಧನೆ, ಸಾಮಾನ್ಯ ಸಭೆ, ಮಾಹಿತಿ ಹಕ್ಕು, ನಿಬಂಧಕರಿಗೆ ವರದಿ ಸಲ್ಲಿಸುವಿಕೆ ಹಾಗೂ ಅಪರಾಧಗಳು ಹಾಗೂ ದಂಡಗಳ ಬಗ್ಗೆ ಅವಕಾಶವನ್ನು, ಅನುಚ್ಛೇದ 243 ಝಡ್‌ಹೆಚ್ ಇಂದ ಝಡ್‌ಟಿ ವರೆವಿಗೆ ಸೇರ್ಪಡೆ ಮಾಡಿದೆ. ಇದರಿಂದ ರಾಜ್ಯ ಸರ್ಕಾರಗಳು ರಾಜ್ಯ ಕಾಯಿದೆಗಳಲ್ಲಿ ಅಳವಡಿಸಿಕೊಳ್ಳಲು ನಿರ್ದೇಶಿಸಿತ್ತು. ಅಂದರೆ 13.01.2012 ರಿಂದ ಒಂದು ವರ್ಷದಲ್ಲಿ ಅಳವಡಿಸಿಕೊಳ್ಳಲು ನಿರ್ದೇಶಿಸಿತ್ತು. ಅದರಂತೆ ರಾಜ್ಯ ಕಾಯಿದೆಗಳಿಗೆ ಸುಮಾರು 13 ರಾಜ್ಯಗಳು ತಿದ್ದುಪಡಿ ಮಾಡಿಕೊಂಡಿವೆ.

ಈ ಬಗ್ಗೆ 2013ರಲ್ಲಿ ಗುಜರಾತ್ ಉಚ್ಚನ್ಯಾಯಾಲಯದಲ್ಲಿ ಈ ತಿದ್ದುಪಡಿಯನ್ನು ಪ್ರಶ್ನಿಸಲಾಗಿದ್ದು, ತೀರ್ಪಿನಲ್ಲಿ ರಾಜ್ಯ ಸರ್ಕಾರಗಳು ಶೇ.51 ರಷ್ಟು ಈ 97ನೇ ಸಂವಿಧಾನ ತಿದ್ದುಪಡಿಗೆ ಒಪ್ಪಿಗೆ ನೀಡಿಲ್ಲವಾದ್ದರಿಂದ, ಈ ತಿದ್ದುಪಡಿ ಅಸಂವಿದಾನಿಕವೆಂದು ತೀರ್ಪಿತ್ತಿದ್ದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. (ಸಿವಿಲ್ ಮೇಲ್ಮನವಿ 9108–9109/2014, 2826/21, 2825/21, 282/2020, 281/2020 ಮತ್ತು 2827/21) ಸಲ್ಲಿಕೆಯಾಗಿತ್ತು. ಈ ಬಗ್ಗೆ ಶ್ರೇಷ್ಠ ನ್ಯಾಯಾಲಯ ದಿನಾಂಕ 20.07.2021 ರಲ್ಲಿ ತೀರ್ಪಿತ್ತಿದೆ. ಈ ತೀರ್ಪಿನಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಿದ ಅಂಶವೆಂದರೆ, ಸಂವಿಧಾನ ತಿದ್ದುಪಡಿಗೆ ಬಹು ಸಂಖ್ಯೆಯ ರಾಜ್ಯ ಸರ್ಕಾರಗಳ ಒಪ್ಪಿಗೆ ನೀಡದೆ ಇದ್ದುದರಿಂದ, ಈ ತಿದ್ದುಪಡಿ ಊರ್ಜಿತವಲ್ಲ ಎಂಬ ವಾದವನ್ನು ಪುರಸ್ಕರಿಸಿದೆ. ಇದರ ಜೊತೆಗೆ 97ನೇ ಸಂವಿಧಾನ ತಿದ್ದುಪಡಿ ಕಾಯಿದೆ ಬಹುರಾಜ್ಯ ಸಹಕಾರಿ ಸಂಸ್ಥೆಗಳಿಗೆ ಅನ್ವಯವಾಗುತ್ತದೆ ಎಂದು ತಿಳಿಸಿ, ಅಷ್ಟರ ಮಟ್ಟಿಗೆ 97ನೇ ಸಂವಿಧಾನ ತಿದ್ದುಪಡಿ ಪುರಸ್ಕರಿಸಿದೆ. ಆದರೆ ರಾಜ್ಯ ಸರ್ಕಾರಗಳು ರಾಜ್ಯ ಕಾಯಿದೆಗೆ ಸಂವಿಧಾನ ತಿದ್ದುಪಡಿಯಂತೆ ಮಾರ್ಪಾಡು ಮಾಡಿಕೊಂಡಿದರೂ, ರಾಜ್ಯಗಳಿಗೆ ಅನ್ವಯವಾಗುವಂತೆ ಅಸಿಂಧುಗೊಳಿಸಿದೆ. ಇದಕ್ಕೆ ಕಾರಣವೆಂದರೆ ಸಂವಿಧಾನ ತಿದ್ದುಪಡಿ ಆದ ನಂತರ ಬಹು ಸಂಖ್ಯೆಯ ರಾಜ್ಯಗಳು ವಿಧಾನ ಮಂಡಳದ ಠರಾವಿನ ಮೂಲಕ ಅಂತಹ ತಿದ್ದುಪಡಿಗೆ ಒಪ್ಪಿಗೆ ನೀಡಿದಾಗ ಮಾತ್ರ, ಅದಕ್ಕೆ ಭಾದ್ಯತೆ ನಿರ್ವಹಿಸಿದಂತೆ ಹಾಗೂ ಒಹು ರಾಜ್ಯಗಳ ರಾಜ್ಯ ಕಾಯಿದೆ ತಿದ್ದುಪಡಿ ಮಾಡಿದರೂ, ಅದು 97ನೇ ಸಂವಿಧಾನ ತಿದ್ದುಪಡಿಗೆ ಒಪ್ಪಿಗೆ ನೀಡಿದೆ ಎಂದು ಅರ್ಥೈಸಲಾಗದು ಎಂದು ಶ್ರೇಷ್ಠ ನ್ಯಾಯಾಲಯ ಹಲವಾರು ತೀರ್ಪಗಳನ್ನು ಉಲ್ಲೇಖಿಸಿದೆ. ಆ ತೀರ್ಪಗಳು ರಾಜ್ಯ ಪಟ್ಟಿಯಲ್ಲಿರುವ ವಿಷಯಗಳ ಬಗ್ಗೆ ಕಾಯಿದೆ ರಚಿಸುವ ಪರಮಾಧಿಕಾರಿ ರಾಜ್ಯ ವಿಧಾನ ಮಂಡಳಗಳಿಗೆ ಮಾತ್ರ ಮತ್ತು ಕೇಂದ್ರ ಸರ್ಕಾರಕ್ಕೆ ಅಧಿಕಾರ ಇಲ್ಲ ಎಂದು ತೀರ್ಮಾನಿಸಿದೆ.

97ನೇ ಸಂವಿಧಾನ ತಿದ್ದುಪಡಿಯ ಹಿನ್ನೆಲೆಯನ್ನು ನೋಡುವುದು ಅವಶ್ಯಕ. ಕೇಂದ್ರ ಸರ್ಕಾರ ಯೋಜನಾ ಆಯೋಗದ ಮುಖಾಂತರ, ಬ್ರಹ್ಮಪ್ರಕಾಶ್ ಅಧ್ಯಕ್ಷತೆಯನ್ನು ರಚಿಸಿದ ಒಂದು ಸಮಿತಿ ವರದಿ ಆಧರಿಸಿ, ರಾಜ್ಯ ಸರ್ಕಾರಗಳು ಸರ್ಕಾರದ ನಿಯಂತ್ರಣದಿಂದ ಮುಕ್ತಿ ನೀಡಲು ಒಂದು ಉದಾರೀಕೃತ ಸಹಕಾರಿ ಕಾಯಿದೆಯನ್ನು ರಾಜ್ಯ ಸರ್ಕಾರಗಳಿಗೆ ಮಾದರಿ ರೂಪದಲ್ಲಿ ರವಾನಿಸಿತು. ಇದಕ್ಕೆ ಮೂಲ ಕಾರಣ ರಾಜ್ಯ ಸರ್ಕಾರಗಳು ತಮ್ಮ ವ್ಯಾಪ್ತಿಯಲ್ಲಿ ಬರುತ್ತದೆ

ಎಂದು. ವಿವಿದ ರಾಜ್ಯಗಳು ಅವರಿಗೆ ತಿಳಿದಂತೆ ಕಾಯಿದೆ ರೂಪಿಸುವ ಬದಲಾಗಿ, ರಾಷ್ಟ್ರದಲ್ಲಿ ಏಕ ರೀತಿ ಸಹಕಾರಿ ಕಾಯಿದೆ ಅವಶ್ಯಕತೆ ಮನಗಂಡು, ಈ ಮಾದರಿ ಕಾಯಿದೆ ರೂಪಿಸಿತ್ತು. ಆದರೆ ಬಹಳಷ್ಟು ರಾಜ್ಯಗಳು ಈ ಮಾದರಿ ಕಾಯಿದೆಯನ್ನು ಅಳವಡಿಸಿಕ್ಕೊಳ್ಳಲಿಲ್ಲ. ಅದರ ಮುಂದಿನ ಭಾಗವೆ 97ನೇ ಸಂವಿಧಾನ ತಿದ್ದುಪಡಿ. ಇದನ್ನು 2011 ರಲ್ಲಿ ರೂಪಿಸಿ ಸಂವಿಧಾನ ತಿದ್ದುಪಡಿ ಮಾಡಲಾಯಿತು. ಈ ಎರಡೂ ಪ್ರಯತ್ನಗಳು ರಾಷ್ಟ್ರದಲ್ಲಿ ಯುಪಿಎ ಸರ್ಕಾರ ಇದ್ದಾಗ ರೂಪಿಸಲಾಯಿತು.

ಈ ಬೆಳವಣಿಗೆ ಮದ್ಯ, ಮಾದರಿ ಕಾಯಿದೆ ಅಳವಡಿಸಿಕೊಂಡ ರಾಜ್ಯಗಳಲ್ಲಿ ಕರ್ನಾಟಕ, ಒಂದು ಹೆಜ್ಜೆ ಮುಂದೆ ಹೋಗಿ ಪ್ರಜಾಪ್ರಭುತ್ವದಡಿ ರಚನೆಯಾದ ಒಂದು ಶಾಸನಾತ್ಮಕ ಸಂಸ್ಥೆಯನ್ನು ರಚಿಸಿ, ಅದಕ್ಕೆ ನಿಬಂಧಕರ ಅಧಿಕಾರವನ್ನು ವರ್ಗಾಯಿಸುವ ಪ್ರಯತ್ನ ಮಾಡಿರುವುದೇ ಒಂದು ಮಾದರಿ ಮತ್ತು ಆ ಕಾಯಿದೆಯಲ್ಲಿ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣಕ್ಕೆ ನೀಡಿದ ಪ್ರಾಮುಖ್ಯತೆಯನ್ನು ಮನಗಂಡು, ಸಂಘ ಪರಿವಾರ, ಈ ವ್ಯವಸ್ಥೆಯನ್ನು ರಾಷ್ಟ್ರ ಮಟ್ಟದಲ್ಲಿ ರೂಪಿಸುವ ಪ್ರಯತ್ನವೇ ಸಹಕಾರ ಸಚಿವಾಲಯದ ಪ್ರಾರಂಭಕ್ಕೆ ಪ್ರೇರಣೆಯಾಗಿರಬಹುದು. ಕರ್ನಾಟಕ ಸೌಹಾರ್ದ ಕಾಯಿದೆಯನ್ನು ರಾಷ್ಟ್ರ ಮಟ್ಟದಲ್ಲಿ ಸಮ್ಮೇಲನಗಳಲ್ಲಿ ಚರ್ಚೆಗೊಳಪಡಿಸಿದ ಪ್ರಯತ್ನ ಸಹಕಾರ ಭಾರತಿ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಅಂದರೆ ಸಹಕಾರಿ ಸಂಸ್ಥೆಗಳಲ್ಲಿ ಸರ್ಕಾರದ ಅಂಗ ಸಂಸ್ಥೆಗಳಂತೆ, ಸರ್ಕಾರದ ನಿಯಂತ್ರಣವನ್ನು ದೊಡ್ಡ ಪ್ರಮಾಣದಲ್ಲಿ ನಿಯಂತ್ರಿಸುವ ಪ್ರಯತ್ನಕ್ಕೆ ವಿರುದ್ದವಾಗಿ, ಜನತಾ ಪರಿವಾರದ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಮುಂದಾಳತ್ವ ವಹಿಸಿದ್ದ ಸಮಯದಲ್ಲಿ ಈ ಸೌಹಾರ್ದ ಕಾಯಿದೆ ರೂಪಿಸಲಾಯಿತು. ಇದರ ಮುಂದುವರಿದ ಭಾಗವಾಗಿ ಕೇಂದ್ರ ಸರ್ಕಾರದಲ್ಲಿ ಹೊಸ ರಾಜಕೀಯ ವ್ಯವಸ್ಥೆ ಅಧಿಕಾರ ವಹಿಸಿಕೊಂಡ ನಂತರ, ಈ 97ನೇ ಸಂವಿಧಾನ ತಿದ್ದುಪಡಿಯಲ್ಲಿ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತಿದೆ ಮತ್ತು ಅದಕ್ಕೆ ಕೇಂದ್ರ ಸರ್ಕಾರ ಕಾಯಿದೆ ರೂಪಿಸುವ ಅಧಿಕಾರವಿಲ್ಲವೆಂದು ತೀರ್ಮಾನಕ್ಕೆ ಬರುವ ಪೂರ್ವದಲ್ಲಿ, ಸಹಕಾರ ಭಾರತೀಯಾ ಪ್ರಮುಖರು ಕೇಂದ್ರ ಸರ್ಕಾರದಲ್ಲಿ ಸಹಕಾರ ಸಚಿವಾಲಯವನ್ನು ವ್ಯವಸಾಯ ಖಾತೆಯಿಂದ ಬೇರ್ಪಡಿಸಿ, ಪ್ರತ್ಯೇಕ ಸಹಕಾರ ಸಚಿವಾಲಯ ಮಾಡುವ ಬಗ್ಗೆ ಒತ್ತಡ ತಂದು ರೂಪಿಸಲಾಗಿದೆ.

ಈ ಮೇಲ್ಕಂಡ ತೀರ್ಮಾನ ತೆಗೆದುಕೊಳ್ಳುವ ಪೂರ್ವದಲ್ಲಿ ಸಹಕಾರ ಭಾರತಿ ಮತ್ತು ಸಂಘ ಪರಿವಾರದ ಮುಖಂಡರು ಪರಿಗಣಿಸಿದ ಪ್ರಮುಖ ಅಂಶಗಳೆಂದರೆ ಹಾಲಿ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರಗಳ, ಸಹಕಾರ ಕಾಯಿದೆ ರೂಪಿಸಿದ್ದರೂ ಆ ಸಂಸ್ಥೆಗಳನ್ನು ಸ್ವಾಯತ್ತ, ಸ್ವತಂತ್ರ ಮತ್ತು ಸದಸ್ಯರೇ ನಿರ್ವಹಿಸುವ ಸಂಸ್ಥೆಗಳಾಗಿ ಉಳಿಸಿಲ್ಲ. ಇದರ ಜೊತೆಗೆ ಸದಸ್ಯರು, ಸಹಕಾರಿ ಸಂಘಕ್ಕೆ ಭಾದ್ಯತೆ ತೋರುತ್ತಿಲ್ಲ ಹಾಗೂ ಸಹಕಾರ ಸಂಘ ನಿರ್ವಹಿಸುವ ಸೌಲಭ್ಯಗಳಲ್ಲಿ ಭಾಗವಹಿಸುತ್ತಿಲ್ಲ. ವೃತ್ತಿ ಪರತೆ ಕೊರತೆ, ಸಕಾಲದಲ್ಲಿ ಮಂಡಳಿ ರಚನೆ ನಡೆಸದೇ, ಕಾನೂನಿನಲ್ಲಿನ ವಿನಾಯ್ತಿ ನೀಡುವ ಅವಕಾಶವನ್ನು ಉಪಯೋಗಿಸಿ ಮುಂದೂಡುವುದು, ನಿಗದಿತ ಸಮಯದಲ್ಲಿ ಲೆಕ್ಕ ತಪಾಸಣೆ ನಿರ್ವಹಿಸದೇ ಇರುವುದು, ಹಾಗೂ ಸಹಕಾರಿ ತತ್ವಗಳನ್ನು ಜಾರಿಗೆ ತರುವ ವ್ಯವಸ್ಥೆ ಮಾಡದೇ ಇರುವುದನ್ನು ಗಮನಿಸಿ, ರಾಷ್ಟ್ರ ಮಟ್ಟದಲ್ಲಿ ಇವುಗಳಿಗೆ ಪರಿಹಾರ ನೀಡಲು ಸಾಧ್ಯ ಎಂಬ ಭಾವನೆಯಿಂದ ಈ ಸಹಕಾರ ಸಚಿವಾಲಯ ಸ್ಥಾಪಿಸುವ ಪ್ರಯತ್ನಕ್ಕೆ ಕೇಂದ್ರ ಸರ್ಕಾರ ಮುಂದಾಗಿದೆ ಎಂಬುದನ್ನು ಗಮನಿಸಬೇಕು.

ಶ್ರೇಷ್ಠ ನ್ಯಾಯಾಲಯದ ತೀರ್ಮಾನ ಬಂದ ನಂತರವೂ ಕೇಂದ್ರ ಸರ್ಕಾರದಲ್ಲಿ ಸಚಿವಾಲಯ ಬೇಡವೆಂದು ತೀರ್ಮಾನಿಸುವ ಅವಶ್ಯಕತೆ ಇಲ್ಲ. ಏಕೆಂದರೆ ಸಹಕಾರ ಸಂಸ್ಥೆಗಳ ಅವಶ್ಯಕತೆ ಹಿಂದಗಿಂತ ಈಗ ಹೆಚ್ಚಿದೆ. ಉದಾರೀಕರಣ ನೀತಿಯಿಂದ ಸರ್ಕಾರಿ ಸೌಮ್ಯದ ಸಂಸ್ಥೆಗಳು, ಅದರಲ್ಲಿಯೂ ಪ್ರಮುಖವಾಗಿ ಕೈಗಾರಿಕೆಗಳನ್ನು ಖಾಸಗೀಕರಣ ಮಾಡುತ್ತಿರುವುದರಿಂದ, ಸಾರ್ವಜನಿಕರು ತಮ್ಮ ಧ್ವನಿ ಎತ್ತಿ, ನಡೆಸುವ ಒಂದು ವ್ಯವಸ್ಥೆ ಎಂದರೆ ಅದು ಸಹಕಾರ ಸಂಸ್ಥೆಗಳು ಮಾತ್ರ. ಏಕೆಂದರೆ ಒಬ್ಬ ವ್ಯಕ್ತಿ ಎಷ್ಟು ಪಾಲು ಬಂಡವಾಳ ಹೊಂದಿದ್ದರೂ ಅವನಿಗೆ ಒಂದೇ ಮತ ಎಂಬ ನೀತಿಯೂ ಬಡವ/ಬಲ್ಲಿದ ಎಂಬ ಭಾವನೆ ಇಲ್ಲದೇ ಇದ್ದು, ಮಂಡಳಿ ರಚನೆಯಲ್ಲಿ ಒಂದು ಷೇರು ಹಣ ಹೊಂದಿದ್ದರೂ ಅವನಿಗೆ, ಆ ಸಹಕಾರಿ ಸಂಸ್ಥೆ ಆಡಳಿತ ಮಂಡಳಿ ಪದಾಧಿಕಾರಿಯಾಗಲು ಅವಕಾಶ ಇದೆ. ಆದರೆ ಖಾಸಗಿ ಅಥವಾ ಸರಕಾರಿ ಸೌಮ್ಯದ ವ್ಯವಸ್ಥೆಯಲ್ಲಿ ಅವಕಾಶವಿಲ್ಲ.

ಒಂದು ರಾಜ್ಯದಲ್ಲಿ 20–25 ವರ್ಷ ಮಂಡಳಿ ರಚನೆ ರದ್ದು ಪಡಿಸಿ ಆಡಳಿತಾಧಿಕಾರಿಗಳೇ ಅಧಿಕಾರ ನಿರ್ವಹಿಸುತ್ತಿರುವ ಉದಾಹರಣೆ, 10–15 ವರ್ಷಗಳು ಲೆಕ್ಕ ತಪಾಸಣೆ ನಡೆಸದ ಸಹಕಾರ ಸಂಸ್ಥೆಗಳು, ಕೋಟಿ ಕೋಟಿ ಹಣ ದುರ್ವಿನಿಯೋಗವಾಗಿದ್ದರೂ ಕ್ರಮ ಜರುಗಿಸದೇ ಇರುವುದು, ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಹಲವಾರು ವರ್ಷಗಳು ನಡೆಸದೇ ವಿನಾಯ್ತಿ ನೀಡುವುದು, ಇಂತಹ ನ್ಯೂನತೆಗಳಿಂದ ಹೊರತರಲು ಪ್ರಯತ್ನವೇ 97ನೇ ಸಂವಿಧಾನ ತಿದ್ದುಪಡಿ. ಶ್ರೇಷ್ಠ ನ್ಯಾಯಾಲಯ ತನ್ನ ತೀರ್ಮಾನದಲ್ಲಿ ಉಲ್ಲೇಖಿಸಿರುವ ಮತ್ತೊಂದು ಪ್ರಮುಖ ಅಂಶವೆಂದರೆ ಬಹು ಸಂಖ್ಯೆಯ ರಾಜ್ಯ ಸರ್ಕಾರಗಳು 97ನೇ ಸಂವಿಧಾನ ತಿದ್ದುಪಡಿಯನ್ನು ಅಳವಡಿಸಿಕೊಂಡಿದ್ದರೂ, ಸಂವಿಧಾನ ತಿದ್ದುಪಡಿಯನ್ನು ಒಂದು ಠರಾವಿನ ಮೂಲಕ ಒಪ್ಪಿಗೆ ನೀಡಿಲ್ಲವೆಂದು ಉಲ್ಲೇಖಿಸಿ, ಗುಜರಾತ್ ಉಚ್ಚ ನ್ಯಾಯಾಲಯದ ತೀರ್ಮಾನವನ್ನು ಎತ್ತಿ ಹಿಡಿದಿದೆ.

ಅಂದರೆ ಸಂವಿಧಾನ ತಿದ್ದುಪಡಿಯನ್ನು ರಾಜ್ಯ ಸರ್ಕಾರ ವಿಧಾನ ಮಂಡಳದ ಠರಾವಿನ ಮೂಲಕ ಒಪ್ಪಿಕೊಳ್ಳದೇ, ರಾಜ್ಯ ಸರ್ಕಾರ ಸಹಕಾರ ಕಾಯಿದೆಗೆ ತಿದ್ದುಪಡಿ ಮಾಡಿದ್ದರೂ ಅದು, ಆ ರಾಜ್ಯ ಸರ್ಕಾರ, ಸಂವಿಧಾನಕ್ಕೆ ಪೂರಕವಾಗಿ ರಚಿಸಿದ್ದರೂ, ಅದನ್ನು ಸಿಂದುತ್ವಕ್ಕೆ ಪರಿಗಣಿಸಲಾಗದು ಎಂದು ತಿಳಿಸಿದೆ. ಇದರ ಪರಿಣಾಮ ಈಗಾಗಲೆ 97ನೇ ಸಂವಿಧಾನಕ್ಕನುಸಾರ ಮಾಡಿಕೊಂಡ ತಿದ್ದುಪಡಿ, ಅಸಂವಿಧಾನಿಕವಾಗುವುದಿಲ್ಲ. ಏಕೆಂದರೆ ಕಾಯಿದೆ

ತಿದ್ದುಪಡಿ ಮಾಡುವ ಅಧಿಕಾರವಿರುವುದು, ರಾಜ್ಯ ಪಟ್ಟಿಯಂತೆ ರಾಜ್ಯ ಸರ್ಕಾರಗಳಿಗೆ ಮಾತ್ರ ಎಂದಾದ ಮೇಲೆ, 97ನೇ ಸಂವಿಧಾನ ತಿದ್ದುಪಡಿಯನ್ನು ಮಾದರಿಯಾಗಿ ಪರಿಗಣಿಸಿ, ರಾಜ್ಯ ಸರ್ಕಾರಗಳು ತಿದ್ದುಪಡಿ ಮಾಡಿಕೊಂಡಿವೆಯಾದ್ದರಿಂದ, ಮುಂದಿನ ಸರ್ಕಾರಗಳು ಈ ಉದಾರೀಕೃತ ಕಾಯಿದೆಗೆ, ಮತ್ತೆ ತಿದ್ದುಪಡಿ ತಂದು ಸರ್ಕಾರದ/ನಿಬಂಧಕರ ನಿಯಂತ್ರಣ ಹೆಚ್ಚಿಸುವ ಪ್ರಯತ್ನ ಮಾಡುವುದರಲ್ಲಿ ಅನುಮಾನವಿಲ್ಲ. ಏಕೆಂದರೆ ಕರ್ನಾಟಕ ಸಹಕಾರ ಕಾಯಿದೆ ರೂಪಿಸಿದ ಸಂದರ್ಭದಲ್ಲಿ, 1959ರ ಸಹಕಾರಿ ಸಂಘಗಳ ಕಾಯಿದೆಗೆ, ಇದೆ ಉದಾರೀಕರಣ ನೀತಿ ಅನುಸರಿಸಿ, ಮಾರ್ಪಡಿಸಿದ್ದರೂ, ಅದನ್ನು 2–3 ವರ್ಷಗಳಲ್ಲಿ ಮತ್ತೆ ಈ ತಿದ್ದುಪಡಿಗೆ ಪೂರ್ವದಲ್ಲಿ ಇದ್ದ ನಿಯಂತ್ರಣ ಕಲಂಗಳನ್ನು ಸೇರಿಸಿ ಮರು ತಿದ್ದುಪಡಿ ಮಾಡಿದೆ. ಆದ್ದರಿಂದ ರಾಜ್ಯ ಸರ್ಕಾರದ ಹಕ್ಕನ್ನು ಮೊಟಕುಗೊಳಲಾಗದು ಎಂಬ ನೀತಿ ಅಳವಡಿಸಿದಂತಾಗುತ್ತಿದೆ.

ಆದರೆ ಕರ್ನಾಟಕ ವಿಷಯಕ್ಕೆ ಬಂದಾಗ, ಸಹಕಾರ ವಿಷಯದಲ್ಲಿ ಎರಡು ಕಾಯಿದೆ ರೂಪಿಸಿದ್ದು, ಉದಾರೀಕೃತ ಸೌಹಾರ್ದ ಕಾಯಿದೆಯಲ್ಲಿ ಹಲವು ಶರತ್ತುಗಳನ್ನು ಸೇರಿಸಿದೆ, ಅದರಲ್ಲಿ ಪ್ರಮುಖವಾಗಿ ಸರ್ಕಾರದಿಂದ ಪ್ರತ್ಯಕ್ಷ/ಪರೋಕ್ಷ ಸಹಾಯಧನ ಪಡೆಯಲು ನಿರ್ಭಂದ, ಸಹಕಾರಿ ನೋಂದಣಿಯಾದ ದಿನಾಂಕದಂದೇ, ಸಂಯುಕ್ತ ಸಹಕಾರಿ ಸದಸ್ಯತ್ವ, ಮತ್ತು ನಿಬಂಧಕರು ನಿರ್ವಹಿಸುತ್ತಿದ್ದು ಹಲವಾರು ಶಾಸನಾತ್ಮಕ ಕಾರ್ಯವನ್ನು ಕಾಯಿದೆಯಲ್ಲಿ ರೂಪಿಸಿದ "ಸಂಯುಕ್ತ ಸಹಕಾರಿ" ಎಂದು ಸಂಸ್ಥೆಯ ಸೃಷ್ಟಿ ಇವುಗಳಲ್ಲಿ ವಿಶೇಷ. ಇದರ ಜೊತೆಗೆ ಸರ್ಕಾರದಿಂದ ಸಹಾಯ ಧನ ಪಡೆಯದೇ ಇದ್ದರೂ, ಸಾಮಾಜಿಕ ಕಳಕಳಿ ಎಂಬ ಸಹಕಾರಿ ತತ್ವಕ್ಕೆ ಪೂರಕವಾಗಿ ಮೀಸಲಾತಿ ಕಲ್ಪಿಸಿರುವುದು, ಸಾಮಾಜಿಕ ಭದ್ರತೆಯನ್ನು ತೋರಿಸುತ್ತದೆ.

ಇತ್ತೀಚೆಗೆ ಕೇಂದ್ರ ಸರ್ಕಾರದ ಸಹಕಾರ ಸಚಿವರು ಒಂದು ಹೇಳಿಕೆ ಮುಖಾಂತರ, ಕೇಂದ್ರ ಸರ್ಕಾರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳ ಮೇಲೆ ನಿಯಂತ್ರಣ ಮಾಡುವ ಪ್ರಯತ್ನ ಮಾಡುವುದಿಲ್ಲವೆಂದು ತಿಳಿಸಿದ್ದರೂ. ಆ ಸಂಸ್ಥೆಗಳೇ ರಾಷ್ಟ್ರದ ಬೆನ್ನೆಲುಬಾಗಿರುವ ರೈತರ ಸಂಸ್ಥೆಗಳು. ಅವುಗಳು ರೈತರಿಗೆ ಅವಶ್ಯಕ ಕೃಷಿ ಸಾಲ, ಕೃಷಿ ಪರಿಹಾರಗಳ ಸಾಲ, ರಸಗೊಬ್ಬರ, ಕ್ರಿಮಿನಾಷಕ, ಕೀಟನಾಷಕ, ಬಿತ್ತನೆ ಬೀಜ ಇನ್ನಿತರ ಸೌಲತ್ತು ನೀಡುವ ಸಂಸ್ಥೆಗಳು. ಆದರೆ ಅವರಿಗೆ ಅವಶ್ಯಕವಾದ ಹಣಕಾಸು ಪೂರೈಸುವ ಸಂಸ್ಥೆಗಳೆಂದರೆ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳು ಮತ್ತು ರಾಜ್ಯ ಅಫೆಕ್ಸ್ ಬ್ಯಾಂಕ್ ಇವುಗಳ ನಿಯಂತ್ರಣ ಸಾಧಿಸಿದರೂ, ಪರೋಕ್ಷವಾಗಿ ಕೃಷಿ ಪತ್ತಿನ ಪ್ರಾಥಮಿಕ ಸಹಕಾರ ಸಂಸ್ಥೆಗಳ ನಿಯಂತ್ರಿಸಿದಂತೆಯೇ, ಆದ್ದರಿಂದ ಈ ಹೇಳಿಕೆಯಿಂದ, ಕೃಷಿ ಪತ್ತಿನ ಸಹಕಾರ ಸಂಸ್ಥೆಗಳ ಮೇಲೆ ನಿಯಂತ್ರಣವಿರುವುದಿಲ್ಲವೆಂಬುದು, ದುರ್ಬಲ ಹೇಳಿಕೆ.

ಕೇಂದ್ರ ಸರ್ಕಾರದಲ್ಲಿ ಸಹಕಾರ ಇಲಾಖೆ ಅವಶ್ಯಕತೆ ಬಗ್ಗೆ ವಿಮರ್ಷಿಸಬೇಕಾದರೆ, ಕೃಷಿ ಕ್ಷೇತ್ರ ಬಹುರಾಜ್ಯ ಸಹಕಾರಿ ಸಂಸ್ಥೆಗಳ ಉದ್ದೇಶದಲ್ಲಿ, ಅನ್ನದಾತನನ್ನು ಬಲ ಪಡಿಸುವುದಾದರೆ, ಅದಕ್ಕೆ ರೈತರ ಹಿತಾಸಕ್ತಿ ಕಾಪಾಡುವ ಅವಶ್ಯಕತೆ ಇದೆ. ಇದಕ್ಕೆ, ರಾಜ್ಯ ಸರ್ಕಾರಗಳು ತಮ್ಮ ಆರ್ಥಿಕ ಪರಿಸ್ಥಿತಿ ಪರಿಗಣಿಸದೆ, ಬಡ್ಡಿ ಮನ್ನ, ಸಾಲ ಮನ್ನಾ, ಬಡ್ಡಿ ರಹಿತ ಸಾಲ ನೀಡುವಾಗ, ಆ ರೀತಿ ನೀಡಿದ ಹಣ ಪಾವತಿಸಲು ರಾಜ್ಯ ಸರ್ಕಾರಗಳ ಹಲವಾರು ವರ್ಷಗಳ ತೆಗೆದುಕೊಂಡು, ಕೃಷಿ ಪತ್ತಿನ ಸಂಘಗಳ ಆರ್ಥಿಕ ಸಬಲತೆಗೆ ದಕ್ಕೆ ತರಿಸುವುದನ್ನು ತಪ್ಪಿಸಲು, ಇಂತಹ ಸ್ಥಿತಿಯಲ್ಲಿರುವ ರಾಜ್ಯ ಸರ್ಕಾರಗಳಿಗೆ ಹಣಕಾಸು ಸೌಲಭ್ಯ ಕಲ್ಪಿಸಲು, ನಿಧಿಯನ್ನು ಸ್ಥಾಪಿಸಿ, ತುರ್ತು ಸಂದರ್ಭದಲ್ಲಿ ಸಹಕಾರಿ ಸಂಸ್ಥೆಗಳ ಆರ್ಥಿಕ ಸಬಲತೆಗೆ ಬಲಪಡಿಸುವ ಪ್ರಯತ್ನ ಮಾಡಿದರೆ, ಕೇಂದ್ರ ಸರ್ಕಾರದ ಸಚಿವಾಲಯದ ಅವಶ್ಯಕತೆ ಇದೆ. ಇದರ ಜೊತೆಗೆ, ಸಂಸ್ಕರಣೆ, ಮಾರಾಟ, ವ್ಯವಸ್ಥೆಯಲ್ಲಿ, ರಾಷ್ಟ್ರ ಮಟ್ಟದ ಸಂಸ್ಥೆಗಳು ಕೇಂದ್ರ ಸರ್ಕಾರದ ಸೌಮ್ಯತ್ವದಲ್ಲಿ ಇರುವುದರಿಂದ ಇವುಗಳನ್ನು ರಾಜ್ಯ ಸಹಕಾರಿ ಸಂಸ್ಥೆಗಳ ಜೊತೆ ಸಂಯೋಜನೆಗೊಳಿಸಲು, ಕೇಂದ್ರ ಸಹಕಾರ ಸಚಿವಾಲಯ ಅವಶ್ಯಕ.

ಮತ್ತೊಂದು ಪ್ರಮುಖವಾದ ವಿಷಯ ಪ್ರಸ್ತಾಪಿಸುವುದು ಅವಶ್ಯಕ. ಇತ್ತೀಚೆಗೆ ಕೇಂದ್ರ ಸರ್ಕಾರ ಪಟ್ಟಣ ಬ್ಯಾಂಕ್‌ಗಳು, ಜಿಲ್ಲಾ ಬ್ಯಾಂಕ್‌ಗಳು ರಾಜ್ಯ ಬ್ಯಾಂಕ್‌ಗಳಿಗೆ ಸಂಬಂಧಪಟ್ಟಂತೆ, ನಿಯಂತ್ರಿಸುವ ತಿದ್ದುಪಡಿ ತಂದಿದೆ, ಅದರಲ್ಲಿ ಹೇಳಿರುವ ಕಾರಣಗಳು ಸಹಕಾರ ಸಂಸ್ಥೆಗಳು ವೃತ್ತಿಪರವಾಗಿ ನಡೆಯದೆ ಸ್ವಜನ ಹಿತಾಸಕ್ತಿ ನಡೆಸಿ, ಹಣ ದುರುಪಯೋಗ ವಾಗುವುದನ್ನು ತಪ್ಪಿಸಲು, ನಿಯಂತ್ರಣ ಹೇರಲಾಗಿದೆ ಎಂದು ವಾದ ಮಾಡಿ ತಿದ್ದುಪಡಿ ನಡೆಸಿದೆ. ಈ ಎಲ್ಲಾ ಸಂಸ್ಥೆಗಳು ಭಾರತೀಯ ರಿಜರ್ವ್‌ನ ಬ್ಯಾಂಕಿನ ಲೆಕ್ಕ ತಪಾಸಣೆಗೊಳಗಾಗಿ ಅಥವಾ ಅವರು ಪಟ್ಟಿ ಮಾಡಿದ ಲೆಕ್ಕ ತಪಾಸಕರಿಂದ ತಪಾಸಣೆ ನಡೆಸಿದರೂ, ಅಂತಹ ನ್ಯೂನತೆಗಳನ್ನು ಕಂಡು ಹಿಡಿಯಲು ನಿಷ್ಫಯವಾಗಿದೆ. ಉದಾಹರಣೆಗೆ ಪಿ.ಎಂ.ಸಿ ಬ್ಯಾಂಕಿನ ಪ್ರಕರಣವನ್ನು ತೆಗೆದುಕೊಂಡು ನೋಡೋಣ. ಒಂದೇ ಸಂಸ್ಥೆಗೆ ಸುಮಾರು 9000 ಕೋಟಿ ಸಾಲ ನೀಡಿರುವುದನ್ನು ಭಾರತೀಯ ರಿಜರ್ವ್ ಬ್ಯಾಂಕಿನ ಅಧಿಕಾರಿಗಳು ಪ್ರತಿ ವರ್ಷ ತಪಾಸಣೆ ಮಾಡುವ ಸಮಯದಲ್ಲಿ ಗುರುತಿಸಿಲ್ಲವೇಕೆ. ಅಂತಹ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಿಲ್ಲವೇಕೆ. ಇದರ ಜೊತೆಗೆ ರಾಷ್ಟ್ರೀಕೃತ ಬ್ಯಾಂಕ್ ಮತ್ತು ವಾಣಿಜ್ಯ ಬ್ಯಾಂಕ್‌ಗಳು ಭಾರತೀಯ ರಿಜರ್ವ್ ಬ್ಯಾಂಕಿನ ಪ್ರತಿನಿಧಿ ಇದ್ದು ಲಕ್ಷಾಂತರ ಕೋಟಿ ಹಣವನ್ನು ಸಾಕಷ್ಟು ಭದ್ರತೆ ಇಲ್ಲದ ಸಾಲ ಮಂಜೂರಿ ಮಾಡಿದ ತನ್ನದೇ ಅಧಿಕಾರಿಗಳ ಮೇಲೆ ರಿಜರ್ವ್ ಬ್ಯಾಂಕ್ ಕ್ರಮವನ್ನೇಕೆ ತೆಗೆದುಕೊಳ್ಳುತ್ತಿಲ್ಲ. ಸಹಕಾರಿ ಬ್ಯಾಂಕ್‌ಗಳ ಮೇಲೆ ಮಾತ್ರ ನಿಯಂತ್ರಣದ ಅವಶ್ಯಕತೆ ಇದೆ ಎಂದು ತಿದ್ದುಪಡಿ ಮಾಡಿರುವುದು ತಪ್ಪು. ಇದು ಎಲ್ಲಾ ಬ್ಯಾಂಕಿಂಗ್ ಸಂಸ್ಥೆಗಳಲ್ಲಿಯೂ ನಡೆಯುತ್ತಿದೆ, ಹಾಗೂ ಇನ್ನು ಮುಂದೆಯೂ ನಡೆಯುತ್ತದೆ. ಸಹಕಾರ ಸಂಸ್ಥೆಗಳು ಬೇರ್ಪಡಿಸುವ ಅವಶ್ಯಕತೆ ಇಲ್ಲ. ರಾಷ್ಟ್ರೀಕೃತ, ವಾಣಿಜ್ಯ ಬ್ಯಾಂಕ್‌ಗಳು ಲಕ್ಷಾಂತರ ಕೋಟಿ ಕೊಟ್ಟು ಸಾಲಗಳೆಂದು ವಜಾ ಮಾಡುತ್ತಿದೆ. ಆದರ ಸಹಕಾರ ಸಂಸ್ಥೆಗಳನ್ನು ಬೇರೆ ದೃಷ್ಟಿಯಿಂದ ನೋಡುವುದು ತಪ್ಪು. ಈ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 44
Licensed to post without Prepayment License No. PMG BG/WPP-384/2020-2022.



ವಿದ್ದೇಶಕ್ಕಾಗಿ ಕೇಂದ್ರ ಸರ್ಕಾರ, ಸಹಕಾರ ಸಚಿವಾಲಯ ರಚನೆಯಿಂದ, ವಿವಿಧ ಬ್ಯಾಂಕಿಂಗ್ ವ್ಯವಸ್ಥೆ ಯಂತೆಯೇ ಸಹಕಾರಿ ಬ್ಯಾಂಕ್‌ಗಳು ಪರಿಗಣಿಸಬೇಕೆಂದು ವಾದಿಸಲು ಸಹಕಾರ ಸಚಿವಾಲಯ ಅವಶ್ಯಕ.

**ಉಪಸಂಹಾರ :**

ಸಹಕಾರ ಚಳುವಳಿ ಚುನಾಯಿತ ಪ್ರತಿನಿಧಿಗಳೇ, ನಡೆಸಿಕೊಂಡು ಹೊಗುವ ಸಂಸ್ಥೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ರಚನೆಯಾಗುವುದೇ ಚುನಾಯಿತ ಪ್ರತಿನಿಧಿಗಳಿಂದ. ಬಹಳಷ್ಟು ವಿಧಾನ ಮಂಡಳ ಮತ್ತು ಲೋಕಸಭಾ/ರಾಜ್ಯಸಭಾ ಸದಸ್ಯರು ಸಹಕಾರ ಆಂದೋಲನದ ಮೂಲಕವೇ ಮುಖಂಡತ್ವದ ಗುಣಗಳನ್ನು ಗಳಿಸಿ, ಆ ನಂತರ ರಾಜಕೀಯ ಪ್ರವೇಶಿಸಿ ಪ್ರತಿನಿಧಿಗಳಾಗಿ ವಿಧಾನ ಮಂಡಳ/ಲೋಕಸಭೆಗೆ ಆಯ್ಕೆಯಾಗುತ್ತಾರೆ. ಅಂತಹ ಅನುಭವವಿರುವ ವ್ಯಕ್ತಿಗಳು ನೀಡುವ ಸಲಹೆ ಸೂಚನೆಗಳನ್ನು ರಾಷ್ಟ್ರ ಮಟ್ಟದಲ್ಲಿ ನೀಡುವ ಅವಕಾಶ ಕೇಂದ್ರ ಸರ್ಕಾರದ ಸಹಕಾರ ಸಚಿವಾಲಯ ಅವಶ್ಯಕ ಹಾಗೂ ರಾಷ್ಟ್ರ ಮಟ್ಟದಲ್ಲಿ ಸೌಮ್ಯತೆ ಇದ್ದಾಗ ಆರ್ಥಿಕ ಸಬಲತೆ ಸಾಧಿಸಲು ಸಾಧ್ಯ ವಾದರಿಂದ, ಕೇಂದ್ರ ಸರ್ಕಾರದ ಸಚಿವಾಲಯ ರಚಿಸಿರುವುದು ಸೂಕ್ತ ಮತ್ತು ಅವಶ್ಯಕ.

ಶ್ರೇಷ್ಠ ನ್ಯಾಯಾಲಯ ಮೇಲ್ಮಂಡ 9108–9109/2014ರ ತೀರ್ಪಿನಲ್ಲಿ ಉಲ್ಲೇಖಿಸಿದ ಕೆಲವು ಪ್ರಕರಣಗಳು.

1) ವಿಪುಲ್ ಭಾಯ ಚೌದರಿ ಹಾಗೂ ಗುಜರಾತ್ ಸಹಕಾರಿ ಹಾಲು ಮಾರಾಟ ಮಹಾಮಂಡಳದ ಪ್ರಕರಣ [(2015) 8 SCC 1]ರ ತೀರ್ಪಿನಲ್ಲಿ 97ನೇ ಸಂವಿಧಾನ ತಿದ್ದುಪಡಿ ಬಗ್ಗೆ ತೀರ್ಪಿ ಪ್ರಶ್ನಿಸಿಲ್ಲವಾದರೂ, ಶ್ರೇಷ್ಠ ನ್ಯಾಯಾಲಯ ರಾಷ್ಟ್ರದಲ್ಲಿ ಏಕ ರೂಪ ಕಾಯಿದೆ ರೂಪಿಸಲು 97ನೇ ತಿದ್ದುಪಡಿ ಎಂಬುದನ್ನು ಒಪ್ಪಿದೆ.

2) ಕಟ್ಟಡ ನಿರ್ಮಾಪಕರ ಸಂಘ ಹಾಗೂ ಯೂನಿಯನ್ ಆಫ್ ಇಂಡಿಯ [(1989) 2 SCC 645] ಪ್ರಕರಣದಲ್ಲಿ ಸಹಕಾರ ವಿಷಯವನ್ನು ಕೇಂದ್ರಕ್ಕೆ ವರ್ಗಾವಣೆ ಮಾಡದೇ ಇರುವುದರಿಂದ ಸಹಕಾರ ವಿಷಯದಲ್ಲಿ ರಾಜ್ಯ ಸರ್ಕಾರ ಕಾಯಿದೆ ಮಾಡುವ ಅಧಿಕಾರವನ್ನು ಮೊಟಕುಗೊಳಿಸಲಾಗದು ಮತ್ತು ತಿದ್ದುಪಡಿಗೆ ಬಹು ಸಂಖ್ಯೆಯ ರಾಜ್ಯ ಸರ್ಕಾರಗಳ ಒಪ್ಪಿಗೆ ಅವಶ್ಯಕ.

3) ದಾಮೋದರಸ್ವಾಮಿ ನಾಯಿಡು ಹಾಗೂ ತಮಿಳನಾಡು [(2000) 1 SCC 521] ಪ್ರಕರಣದಲ್ಲಿ ರಾಜ್ಯ ಪಟ್ಟಿ ಸಿಂಧುತ್ವವನ್ನು ಎತ್ತಿ ಹಿಡಿದಿದ್ದು ಸಂವಿಧಾನ ತಿದ್ದುಪಡಿಗೆ ಅನುಚ್ಛೇದ 368(2) ರಡಿ ಬಹು ಸಂಖ್ಯೆಯ ರಾಜ್ಯಗಳ ಒಪ್ಪದಿದ್ದರೆ, ಅದು ಸಂವಿಧಾನಾತ್ಮಕವಾಗುವುದಿಲ್ಲ. [ಈ ತೀರ್ಪಿಗಳು (2016) 7 SCC 703 ಉಲ್ಲೇಖಿಸಲಾಗಿದೆ]

4) ಅನುಚ್ಛೇದ 243 ಝಡ್‌ಟಿ ನಲ್ಲಿನ ಅವಕಾಶ 97ನೇ ಸಂವಿಧಾನ ತಿದ್ದುಪಡಿಯಾದ ಒಂದು ವರ್ಷದೊಳಗೆ ರಾಜ್ಯಗಳು ತಿದ್ದುಪಡಿ ಮಾಡದಿದ್ದರೆ, ಹಾಲಿ ರಾಜ್ಯ ಸಹಕಾರಿ ಕಾಯಿದೆ ಅಸಂಬದ್ಧವಾಗುತ್ತಿದೆ ಎಂದಿರುವುದು ರಾಜ್ಯದ ಹಕ್ಕನ್ನು ಕಿತ್ತುಹಾಕುತ್ತಿದೆ. ಆದ್ದರಿಂದ 97ನೇ ಸಂವಿಧಾನ ತಿದ್ದುಪಡಿ IX B ಯನ್ನು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಂತೆ ಅಸಿಂಧು ಎಂದು ತೀರ್ಮಾನಿಸಿದೆ.

5) ಡಿ.ಸಿ ವಾದ ಮತ್ತು ಬಿಹಾರ್ ರಾಜ್ಯದ ಪ್ರಕರಣದಲ್ಲಿ [(1987) 1 SCC 378] ನೇರವಾಗಿ ಶಾಸನ ಮಾಡುವ ಅಧಿಕಾರ ಇಲ್ಲದೇ ಇದ್ದಾಗ ಪರೋಕ್ಷವಾಗಿ (ಹಿಂಭಾಗಿಲಿನಿಂದ) ಭಾಗ IX B ಸೇರ್ಪಡಿಯಿಂದ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ವಿಷಯದಲ್ಲಿ ಮಧ್ಯಪ್ರವೇಶ ಮಾಡಲು ರೂಪಿಸಿರುವ ಕಾಯಿದೆ.

6) ಫೆಡರರ್ ನ್ಯಾಯಾ ಮತ್ತು ಪ್ರಿವಿಕೌನ್ಸ್‌ಲ್‌ನ ತೀರ್ಪಿಗಳು ಯಾವ ವಿಷಯ ರಾಜ್ಯ ಪಟ್ಟಿಯಲ್ಲಿರುವ ವಿಷಯಗಳಲ್ಲಿ ರಾಷ್ಟ್ರ ಪಟ್ಟಿ ಅಥವಾ ಸಹ ಪಟ್ಟಿಯಲ್ಲಿರುವ ಸಂಘರ್ಷವೇರ್ಪಟ್ಟಾಗ ಅಥವಾ ಒಂದಕ್ಕೊಂದು ಜೊಡಣೆಯಾದಾಗ ರಾಜ್ಯ ಪಟ್ಟಿ ಪ್ರಾಮುಖ್ಯತೆ ಪಡೆಯುತ್ತದೆ ಎಂದು ಉಲ್ಲೇಖಿಸಿದೆ. ಕೆರಳ ರಾಜ್ಯ ವಿದ್ಯುಕ್ತ ಉತ್ಪಾದನ ಮಂಡಳಿ ಹಾಗೂ ಯುನಿಯನ್ ಅಲ್ಯೂಮೀನಿಯಂ ಪ್ರಕರಣದಲ್ಲಿ ಕೇಂದ್ರ ಸರ್ಕಾರ ಪರಮಾಧಿಕಾರ ಇರುವುದು ಮೊದಲನೇ ಪಟ್ಟಿ ವಿಷಯದಲ್ಲಿ. ರಾಜ್ಯ ಸರ್ಕಾರಗಳಿಗೆ ಸಂಬಂಧಪಟ್ಟಂತೆ ಸಂಪೂರ್ಣ ಅಧಿಕಾರ ಇರುವುದು ಮತ್ತು ಅದೇ ಅಂತಿಮ [(1976) 1 SCC 466] ರಾಜ್ಯ ಮತ್ತು ಸಹಮತದ ಪಟ್ಟಿಯಲ್ಲಿ ಅಸಂಗತವಾಗುವ ವಿಷಯಗಳ ಬಗ್ಗೆ ಕೇಂದ್ರ ಪಟ್ಟಿಯಲ್ಲಿರುವ ಅವಕಾಶಗಳು ಊರ್ಜಿತವಾಗತಕ್ಕದ್ದು. ಆದರೆ ರಾಜ್ಯ ಪಟ್ಟಿಯಲ್ಲಿನ ವಿಷಯವನ್ನು ಕೇಂದ್ರ ಕಾಯಿದೆ ಮಧ್ಯಪ್ರವೇಶ ಮಾಡತಕ್ಕದ್ದಲ್ಲ. ಇದರ ಜೊತೆಗೆ ಮೂರು ಪಟ್ಟಿಯಲ್ಲಿರುವ ವಿಷಯಗಳು ಕಾಯಿದೆ ರೂಪಿಸಲು ಮಾತ್ರವಲ್ಲ, ಆ ವಿಷಯಗಳು ಆ ಪಟ್ಟಿಯಲ್ಲಿನ ಜೇಷ್ಠತೆ ಇರತಕ್ಕದ್ದು. ಮೂರು ಪಟ್ಟಿಯಲ್ಲಿರುವ ವಿಷಯಗಳ ಬಗ್ಗೆ ಅಂತಿಮ ಸಿಂಧುತ್ವವಾಗುವುದು ಕೇಂದ್ರ ಪಟ್ಟಿ.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ : ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ : ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010